ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 13 ಭಾನುವಾರ 2024

ಸಂಪುಟ: 45 | ಸಂಚಿಕೆ: 177 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಅದ್ಧೂರಿ ಜಂಬೂಸವಾರಿ

ವೈಭವೋಪೇತ ಮೆರವಣಿಗೆ ಕಣ್ತುಂಬಿಕೊಂಡ ಲಕ್ಷಾಂತರ ಜನ



/ಚಿತ್ರ: ಎಂ.ಎನ್.ಲಕ್ಷ್ಮಿನಾರಾಯಣ ಯಾದವ್

ಮೈಸೂರು, ಅ. 12(ಆರ್‌ಕೆ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ವಿಶ್ವವಿಖ್ಯಾತ ಜಂಬೂಸವಾರಿ ವಿಜೃಂಭಣೆಯಿಂದ ನೆರವೇರಿತು.

ಮಳೆಯ ನಡುವೆಯೂ ಐತಿಹಾಸಿಕ ವಿಜಯದಶಮಿ ಮೆರವಣಿಗೆಯನ್ನು ಲಕ್ಷಾಂತರ ಮಂದಿ ಕಣ್ತುಂಬಿಕೊಂಡರು. ಎಡಬದಿ ಹಿರಣ್ಯ, ಬಲಬದಿ ಲಕ್ಷ್ಮಿ ಜೊತೆ ಸರ್ವಾಲಂಕೃತ 750 ಕೆಜಿ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿದೇವಿಯ ಉತ್ಸವ ಮೂರ್ತಿಯನ್ನು ಹೊತ್ತು ಅಭಿಮನ್ಯು ಗಾಂಭೀರ್ಯದಿಂದ ಹೆಜ್ಜೆ ಹಾಕಿದ ದೃಶ್ಯವನ್ನು ಕಂಡು ಜನರು ಪುಳಕಗೊಂಡರು.

ಮೈಸೂರು ಅರಮನೆ ಆವರಣದಲ್ಲಿ ಶುಭ ಕುಂಭ ಲಗ್ನದಲ್ಲಿ ಸಂಜೆ 5.02ಕ್ಕೆ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ತಾಯಿ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ 12 ಸುತ್ತು ಕುಶಾಲ ತೋಪು ಸಿಡಿಸಿದವು. ಚಿನ್ನದ ಅಂಬಾರಿ ಹೊತ್ತ ಅಭಿಮನ್ಯು ಸೊಂಡಿಲು ಎತ್ತಿ ನಮಿಸುಸುತ್ತಿದ್ದಂತೆಯೇ ನೆರೆದಿದ್ದ ಜನಸ್ತೋಮ ■ 7ನೇ ಪುಟಕ್ಕೆ

ಲಕ್ಷಾಂತರ ಜನ

750 ಕೆಜಿ ತೂಕದ ಚಿನ್ನದ ಅಂಬಾರಿ ಹೊತ್ತ ಅಭಿಮನ್ಯು ಗಾಂಭೀರ್ಯದಿಂದ, ಸರಾಗವಾಗಿ 5.5 ಕಿ.ಮೀ. ರಾಜಮಾರ್ಗದಲ್ಲಿ ಸಾಗಿದ್ದನ್ನು ಲಕ್ಷಾಂತರ ಮಂದಿ ಕಣ್ತುಂಬಿಕೊಂಡರು. ಮಾರ್ಗದುದ್ದಕ್ಕೂ ಇಕ್ಕೆಲಗಳಲ್ಲಿ ನೆರೆದಿದ್ದ ಜನರು ಚಾಮುಂಡೇಶ್ವರಿಯ ಉತ್ಸವ ಮೂರ್ತಿಯ ದರ್ಶನ ಮಾಡಿ, ಭಕ್ತಿ-ಭಾವದಿಂದ ನಮಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಜಂಬೂ ಸವಾರಿ ವೀಕ್ಷಿಸಲು ಬಹಳ ಜನ ಚಾಮರಾಜೇಂದ್ರ ಸರ್ಕಲ್, ಕೆಆರ್ ಸರ್ಕಲ್‌ನಲ್ಲಿ ಮರ ಮತ್ತು ಕಟ್ಟಡಗಳನ್ನೇರಿದ್ದರು. ಸಯ್ಯಾಜಿರಾವ್ ರಸ್ತೆ ಮತ್ತು ಬಂಬೂ ಬಜಾರ್‌ನಲ್ಲಿ ಬ್ಯಾರಿಕೇಡ್ ಅಳವಡಿಸಿದ್ದರೂ ಲೆಕ್ಕಿಸದೇ ನೂಕು-ನುಗ್ಗಲು ಉಂಟಾಗಿತ್ತು. ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

ಅದ್ಧೂರಿ ದಸರಾ ಸಂತಸ ತಂದಿದೆ



ಮೈಸೂರು, ಅ.12(ಬಿಎಲ್‌ಯು)– ಸಮೃದ್ಧ ಮಳೆ, ಬೆಳೆಯ ಕಾರಣ ಈ ಬಾರಿಯ ಮೈಸೂರು ದಸರಾ ಮಹೋತ್ಸವದ ಅದ್ದೂರಿ ಆಚರಣೆ ಎಲ್ಲರಿಗೂ ಸಂತೋಷ ತಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದುಷ್ಟ ಸಂಹಾರ, ಶಿಷ್ಟ ರಕ್ಷಣೆ ಮಾಡುವುದು ದಸರಾ ಹಬ್ಬದ ವೈಶಿಷ್ಟ್ಯತೆಯಾಗಿದೆ. ಈ ಬಾರಿ ಸಮೃದ್ಧ ಮಳೆಯ ಹಿನ್ನೆಲೆ ಅದ್ದೂರಿ ದಸರಾ ಆಚರಣೆ ಮಾಡಲಾಗಿದೆ. ಈ ವಿಜೃಂಭಣೆ ಎಲ್ಲರಿಗೂ ಸಂತೋಷ ತಂದಿಯಲ್ಲವೆ ಎಂದು ಪ್ರಶ್ನಿಸಿದರು. ವಿಜಯನಗರ ಸಾಮ್ರಾಜ್ಯದಲ್ಲಿ ಆರಂಭವಾದ ದಸರಾ ಹಬ್ಬ ಮೈಸೂರು ರಾಜವಂಶಸ್ಥರ ಕಾಲದಿಂದಲೂ ನಡೆದುಕೊಂಡು ಬಂದಿದೆ. ರಾಜ ಒಡೆಯರ್ ಆರಂಭಿಸಿದ ದಸರಾ ಮೈಸೂರಿನಲ್ಲಿ ಇಲ್ಲಿ ತನಕ ■ 9ನೇ ಪುಟಕ್ಕೆ


ಮೈಸೂರು ಮಿತ್ರ
ಭಾನುವಾರ 13 ಅಕ್ಟೋಬರ್ 2024

ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ದಸರಾ, ಬೊಂಬೆ ಹಬ್ಬ, ಶೀಲ್ ಮಹಲ್



ಮೈಸೂರು,ಅ.12(ಪಿಎಂ)– ಈ ಬಾರಿಯ ದಸರಾ ಪ್ರಯುಕ್ತ ನೆಕ್ಸಸ್ ಸೆಂಟರ್ ಸಿಟಿ ಮಾಲ್ ವತಿಯಿಂದ ಶೀಶ್ ಮಹಲ್ ಮತ್ತು ಬೊಂಬೆ ಹಬ್ಬದ ಮರು ಸೃಷ್ಟಿಸುವ ಮೂಲಕ ರಾಜ ಪರಂಪರೆಯ ವೈಭವಕ್ಕೆ ಕರೆದೊಯ್ಯುತ್ತಿದೆ. ಮಾಲ್‌ಗೆ ಭೇಟಿ ನೀಡುವ ಮೂಲಕ ಕನ್ನಡಿ ಮತ್ತು ಗಾಜಿನಿಂದ ಮಾಡಿದ, ಪ್ರಕಾಶಮಾನದಿಂದ ಕೂಡಿದ ಶೀಶ್ ಮಹಲ್ ಮಾದರಿ ಕಣ್ತುಂಬಿಕೊಳ್ಳಬಹುದು. ಇದನ್ನು ವೀಕ್ಷಿಸಲು ಅ.4ರಿಂದ ಗ್ರಾಹಕರಿಗೆ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಬೊಂಬೆ ಹಬ್ಬದ ಸೊಗಸು ಕಣ್ಣಿಗೆ ಕಟ್ಟುವ ಮೂಲಕ ರಾಜಮನೆತನದ ವೈಭವ ಅನಾವರಣಗೊಳಿಸುತ್ತಿದೆ. ಮಾಲ್‌ನಲ್ಲಿ ದಸರಾ ಹಬ್ಬಗಳನ್ನು ಅ.5ರಿಂದ ನ.3ರವರೆಗೆ ಆಯೋಜಿಸಿದ್ದು, ಅದೇ ರೀತಿ ಬೊಂಬೆ ಹಬ್ಬವು ಅ.4ರಿಂದ 14ರವರೆಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಚೆನ್ನೈ ಬಳಿ ಮೈಸೂರು–ದರ್ಬಾಂಗ ಎಕ್ಸ್‌ಪ್ರೆಸ್ ರೈಲು ಅಪಘಾತ: 7 ಮಂದಿ ಪ್ರಯಾಣಿಕರಿಗೆ ಗಾಯ



ಮೈಸೂರು–ದರ್ಬಾಂಗ ಬಾಗ್ಮತಿ ಎಕ್ಸ್‌ಪ್ರೆಸ್ ಮತ್ತು ಸರಕು ಸಾಗಣೆ ರೈಲು ಮಧ್ಯೆ ಚೆನ್ನೈ ಸಮೀಪದ ಕವರೈಪೆಟ್ಟೈ ಬಳಿ ರೈಲು ಅಪಘಾತವಾಗಿರುವುದು.

ಚೆನ್ನೈ,ಅ.12–ಮೈಸೂರು–ದರ್ಬಾಂಗ ಬಾಗ್ಮತಿ ಎಕ್ಸ್‌ಪ್ರೆಸ್ ಮತ್ತು ಸರಕು ಸಾಗಣೆ ರೈಲು ಮಧ್ಯೆ ಚೆನ್ನೈಗೆ ಸಮೀಪವಿರುವ ಕವರೈಪೆಟ್ಟೈ ಬಳಿ ಶುಕ್ರವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಏಳು ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ದಕ್ಷಿಣ ರೈಲ್ವೆ ತಿಳಿಸಿದೆ. ಹಳಿತಪ್ಪಿದ ಬಾಗ್ಮತಿ ಎಕ್ಸ್‌ಪ್ರೆಸ್‌ನ 13 ಬೋಗಿಗಳಲ್ಲಿ ಸಿಲುಕಿದ್ದ ಎಲ್ಲ ಪ್ರಯಾಣಿಕರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಾಯಾಳುಗಳ ಪೈಕಿ ಗಂಭೀರ ಗಾಯಗೊಂಡ ಮೂವರು ಪ್ರಯಾಣಿಕರನ್ನು ಸ್ಟ್ಯಾನ್ಲಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸಣ್ಣಪುಟ್ಟ ಗಾಯಗಳಾಗಿರುವ ನಾಲ್ವರು ಪೊನ್ನೇರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ರೈಲ್ವೆಯ ಅಧಿಕೃತ ಹೇಳಿಕೆಯ ಪ್ರಕಾರ ಎಲ್ಲಾ ಏಳು ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಾಗ್ಮತಿ ಎಕ್ಸ್‌ಪ್ರೆಸ್‌ನಲ್ಲಿ ಸಿಲುಕಿದ್ದ ಪ್ರಯಾಣಿಕರನ್ನು ಬಸ್‌ಗಳ ಮೂಲಕ ಪೊನ್ನೇರಿಗೆ ಮತ್ತು ನಂತರ ಚೆನ್ನೈ ಸೆಂಟ್ರಲ್‌ಗೆ ಎರಡು ವಿಶೇಷ ಉಪನಗರ ರೈಲುಗಳ ಮೂಲಕ ಮುಂಜಾನೆ ಸಾಗಿಸಲಾಯಿತು.

ಚೆನ್ನೈ ಸೆಂಟ್ರಲ್ ತಲುಪಿದ ನಂತರ, ರೈಲ್ವೇ ವೈದ್ಯರು ವೈದ್ಯಕೀಯ ತಪಾಸಣೆ ನಡೆಸಿದರು. ಪ್ರಯಾಣಿಕರಿಗೆ ಆಹಾರ ಮತ್ತು ನೀರನ್ನು ಒದಗಿಸಲಾಯಿತು. ನಂತರ ಅರಕ್ಕೋಣಂ, ರೇಣಿಗುಂಟಾ ಮತ್ತು ಗುಡೂರ್ ಮೂಲಕ ದರ್ಭಾಂಗಕ್ಕೆ ಹೋಗುವ ವಿಶೇಷ ರೈಲಿನಲ್ಲಿ ಪ್ರಯಾಣಿಸಲಾಯಿತು. ಈ ರೈಲು ಬೆಳಗ್ಗೆ 4.45ಕ್ಕೆ ಚೆನ್ನೈ ಸೆಂಟ್ರಲ್‌ನಿಂದ ಹೊರಟಿದೆ. ಅಪಘಾತ ಸ್ಥಳದಲ್ಲಿ ಹಳಿಯ ಮರುಸ್ಥಾಪನೆ ಕಾರ್ಯವು ಪ್ರಗತಿಯಲ್ಲಿದೆ ಎಂದು ದಕ್ಷಿಣ ರೈಲ್ವೆ ವರದಿ ಮಾಡಿದೆ. ಈ ಮಧ್ಯೆ, ಗುಡೂರು–ಚೆನ್ನೈ ಮೂಲಕ ಓಡಬೇಕಿದ್ದ ಎಲ್ಲಾ ರೈಲುಗಳನ್ನು ರೇಣಿಗುಂಟಾ, ಅರಕ್ಕೋಣಂ ಮತ್ತು ಪೆರಂಬೂರ್ ಅಥವಾ ಚೆಂಗಲ್ಪಟ್ಟು ಮೂಲಕ ಸಂಚರಿಸಲು ವ್ಯವಸ್ಥೆ ಮಾಡಲಾಗಿದೆ.


ಹೆಚ್ಚುವರಿಯಾಗಿ ಚೆನ್ನೈ–ತಿರುಪತಿ, ಅರಕ್ಕೋಣಂ–ಪುದುಚೇರಿ ಮತ್ತು ಚೆನ್ನೈ–ಪುದುಚೇರಿ ಮಾರ್ಗಗಳಲ್ಲಿ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ಮತ್ತು ಮೆಮು ರೈಲುಗಳನ್ನು ರದ್ದುಗೊಳಿಸಲಾಗಿದೆ.

ನಿನ್ನೆ ಸಾಯಂಕಾಲ 7.50ಕ್ಕೆ ಪೆರಂಬೂರಿನಿಂದ ಹೊರಟು ದರ್ಭಾಂಗಕ್ಕೆ ಹೋಗುವ ಬಾಗ್ಮತಿ ಎಕ್ಸ್‌ಪ್ರೆಸ್ ರಾತ್ರಿ 8.30ರ ಸುಮಾರಿಗೆ ಗುಮ್ಮಿಡಿಪುಂಡಿ ಬಳಿಯ ಕವರೈಪೆಟ್ಟೈ ತಲುಪಿತ್ತು. ರೈಲು ಮುಖ್ಯ ಮಾರ್ಗದಲ್ಲಿ ಗುಡೂರಿನತ್ತ ಸಾಗಲು ಹಸಿರು ನಿಶಾನೆ ತೋರಿಸಲಾಯಿತು. ಆದರೆ ಅದರ ಬದಲಾಗಿ ಕವರಾಯಪೆಟ್ಟೈ ನಿಲ್ದಾಣದಲ್ಲಿ ಲೂಪ್ ಲೈನ್‌ನ್ನು ಪ್ರವೇಶಿಸಿತು, ಅಲ್ಲಿ ಸರಕು ರೈಲು ನಿಲುಗಡೆಯಾಗಿದೆ ಎಂದು ರೈಲ್ವೆ ಸಿಬ್ಬಂದಿ ಹೇಳಿದ್ದಾರೆ.

ಅಪಘಾತವಾಗಿದ್ದು ಹೇಗೆ

ಆರಂಭದಲ್ಲಿ ಗಂಟೆಗೆ 109 ಕಿ.ಮೀ ವೇಗದಲ್ಲಿ ಓಡುತ್ತಿದ್ದ ರೈಲು ತನ್ನ ವೇಗವನ್ನು ಗಂಟೆಗೆ 75 ಕಿ.ಮೀ.ಗೆ ಕಡಿಮೆ ಮಾಡಿತು, ನಂತರ ದೊಡ್ಡ ಶಬ್ದದೊಂದಿಗೆ ಲೂಪ್ ಲೈನ್‌ನ್ನು ಪ್ರವೇಶಿಸಿ ಗಾರ್ಡ್ ಕೋಚ್ ಬಳಿ ಸರಕು ರೈಲಿನ ಹಿಂದಿನ ಕೋಚ್‌ಗಳಿಗೆ ಡಿಕ್ಕಿ ಹೊಡೆದಿದೆ ಪರಿಣಾಮ 13 ಬೋಗಿಗಳು ಹಳಿ ತಪ್ಪಿದರೆ, ಒಂದು ಕೋಚ್–ಪವರ್ ಕಾರ್ ಕಮ್ ಪಾರ್ಸೆಲ್ ವ್ಯಾನ್–ಬೆಂಕಿ ಹೊತ್ತಿಕೊಂಡಿತು. ಅಪಘಾತದ ಕುರಿತು ಉನ್ನತ ಮಟ್ಟದ ತನಿಖೆಗೆ ರೈಲ್ವೆ ಆದೇಶಿಸಿದೆ.


ನಿಧನ



ಎನ್.ಆರ್.ಗಾಯಿತ್ರಿ

ಮೈಸೂರು, ಅ.12– ಮೈಸೂರು ಸರಸ್ವತಿಪುರಂ 12ನೇ ಮುಖ್ಯ ರಸ್ತೆ ನಿವಾಸಿ ಎನ್.ಆರ್.ಗಾಯಿತ್ರಿ(68) ಹೃದಯಾಘಾತದಿಂದ ನಿಧನರಾದರು. ಮೃತರು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಜಯನಗರ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ ನೆರವೇರಿಸಲಾಗಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಎಂ.ಮಹದೇವು



ಮೈಸೂರು, ಅ.12– ಮೈಸೂರು ಜೆ.ಪಿ.ನಗರ ನಿವಾಸಿ, ಅರಣ್ಯ ಇಲಾಖೆ ನಿವೃತ್ತ ಅಧಿಕಾರಿ ಎಂ.ಮಹದೇವು(82) ಶನಿವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬೆಳಗ್ಗೆ 10.30ಕ್ಕೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶುಭ ಮುಹೂರ್ತದ ಬಳಿಕ ಪುಷ್ಪಾರ್ಚನೆ!



ಅರಮನೆ ಆವರಣದಲ್ಲಿ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ಅಧಿದೇವತೆ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಪುಷ್ಪಾರ್ಚನೆ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸಚಿವ ಶಿವರಾಜ್ ತಂಗಡಗಿ, ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ ಹಾಗೂ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ. 12(ಆರ್‌ಕೆ)– ಇಂದು ದಸರಾ ಪ್ರಮುಖ ಘಟ್ಟ ಜಂಬೂ ಸವಾರಿ ವೇಳೆ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಿದ್ದ ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಶುಭ ಘಳಿಗೆ ಮುಕ್ತಾಯದ ಬಳಿಕ ಪುಷ್ಪಾರ್ಚನೆ ಮಾಡಲಾಯಿತು. ಪುಷ್ಪಾರ್ಚನೆಗೆ ಸಂಜೆ 4ರಿಂದ 4.30 ಗಂಟೆವರೆಗೆ ಶುಭ ಕುಂಭ ಲಗ್ನ ವೇಳೆ ಪ್ರಶಸ್ತ ಸಮಯವೆಂದು ಪರಿಗಣಿತವಾಗಿತ್ತು. ಆ ಶುಭ ಕಾಲ ಎಂಬುದು ಧಾರ್ಮಿಕ ಆಚರಣೆಯ ಪದ್ಧತಿ. ಅಷ್ಟರಲ್ಲಿ ಜಾನಪದ ತಂಡಗಳು, ಸ್ತಬ್ಧಚಿತ್ರಗಳು ಮುಂದೆ ಸಾಗಿ ಅಂಬಾರಿ ಹೊತ್ತ ಆನೆ ಗಣ್ಯರ ವೇದಿಕೆ ಬಳಿ ಆಗಮಿಸಬೇಕಾಗಿತ್ತು. ಆದರೆ ಇಂದು ಸಂಜೆ 5 ಗಂಟೆಯಾದರೂ, ಕಲಾತಂಡಗಳು, ಸ್ತಬ್ಧಚಿತ್ರಗಳು ಇನ್ನೂ ಪ್ರದರ್ಶನ ನೀಡುತ್ತಿದ್ದವು. ಕಡೆಗೆ ಚಿನ್ನದ ಅಂಬಾರಿಯಲ್ಲಿ ಶ್ರೀ ಚಾಮುಂಡೇಶ್ವರಿ ಉತ್ಸವಮೂರ್ತಿ ಹೊತ್ತ ಅಭಿಮನ್ಯು, ಕುಮ್ಕಿ ಆನೆಗಳಾದ ಲಕ್ಷ್ಮಿ ಮತ್ತು ಹಿರಣ್ಯರೊಂದಿಗೆ ತ್ರಿನೇಶ್ವರ ಮತ್ತು ಗಾಯತ್ರಿ ದೇವಿ ದೇವಸ್ಥಾನದ ಮಾರ್ಗವಾಗಿ ಅರಮನೆ ಮುಂಭಾಗಕ್ಕೆ ಬಂದು ನಿಲ್ಲುತ್ತಿದ್ದಂತೆಯೇ ಸಂಜೆ 5.02 ಗಂಟೆ. ಆಗ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿದರು. ಅದಾಗಲೇ ಶುಭಲಗ್ನ ಮೀರಿತ್ತು ಜಿಲ್ಲಾಡಳಿತವೇ ನಿಗದಿ ಮಾಡಿದ್ದ ಶುಭ ವೇಳೆ ಮುಗಿದು ಅರ್ಧ ಗಂಟೆ ನಂತರ ಆತುರಾತುರವಾಗಿ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಲಾಯಿತು. ಅರ್ಧ ಗಂಟೆ ತಡವಾಗಲು ಅಭಿಮನ್ಯು ಮೇಲೆ ಅಂಬಾರಿ ಕಟ್ಟುವ ಪ್ರಕ್ರಿಯೆ ಮತ್ತು ಜಾನಪದ ಕಲಾ ಪ್ರದರ್ಶನ ಹಾಗೂ ಸ್ತಬ್ಧಚಿತ್ರಗಳು ಸಾಗುವಲ್ಲಿ ಆದ ವಿಳಂಬ ಪ್ರಮುಖ ಕಾರಣ. ಹೆಚ್ಚಿನ ಸಂಖ್ಯೆಯಲ್ಲಿ ಕಲಾತಂಡಗಳು, ಸ್ತಬ್ಧಚಿತ್ರಗಳಿರುವುದು ಗೊತ್ತಿದ್ದರೂ ವೇಗವಾಗಿ ಸಾಗುವಂತೆ ಕ್ರಮ ವಹಿಸದಿರುವುದು ಶುಭಲಗ್ನ ಮುಗಿದ ಬಳಿಕ ಪುಷ್ಪಾರ್ಚನೆ ಮಾಡಲು ಕಾರಣವಾಯಿತು. ಇದೇ ಮೊದಲ ಬಾರಿ ವಿಜಯದಶಮಿ ಮೆರವಣಿಗೆಯಲ್ಲಿ ಚಾಮುಂಡೇಶ್ವರಿಗೆ ತಡವಾಗಿ ಶುಭಲಗ್ನ ಮುಗಿದ ಬಳಿಕ ಪುಷ್ಪಾರ್ಚನೆ ಮಾಡಲಾಗಿದೆ ಎಂದು ಹಿರಿಯರು ಬೇಸರ ವ್ಯಕ್ತಪಡಿಸಿದರು.

ವಿದ್ಯುತ್ ದೀಪಾಲಂಕಾರ ವೀಕ್ಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ...



ಶುಕ್ರವಾರ ರಾತ್ರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶ್ವವಿಖ್ಯಾತ ಮೈಸೂರು ದಸರಾ ವಿದ್ಯುತ್ ದೀಪಾಲಂಕಾರವನ್ನು ಅಂಬಾರಿ ಬಸ್‌ನಲ್ಲಿ ವೀಕ್ಷಿಸಿದರು. ಸಚಿವರಾದ ಕೆ.ಜೆ.ಜಾರ್ಜ್, ಡಾ.ಹೆಚ್.ಸಿ.ಮಹದೇವಪ್ಪ, ಲಕ್ಷ್ಮಿ ಹೆಬ್ಬಾಳ್ಕರ್, ಡಾ.ಎಂ.ಸಿ.ಸುಧಾಕರ್, ಚೆಸ್ಕಾಂ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ತಾಂತ್ರಿಕ ನಿರ್ದೇಶಕ ಮುನಿಗೋಪಾಲ್‌ರಾಜು ಮತ್ತಿತರರಿದ್ದರು.

ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮೇಲೇರಿಯೂ ವೀಕ್ಷಣೆ

ಮೈಸೂರು,ಅ.12(ಪಿಎಂ)– ಕುಸಿತ ಉಂಟಾಗಿ ಪ್ರಾಣ ಹಾನಿಯೂ ಸಂಭವಿಸಿದ್ದ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಲ್ಲಿ ಮಳಿಗೆದಾರರು ಇಲ್ಲದೇ ಖಾಲಿಯಾಗಿದೆ. ಈ ಕಟ್ಟಡದತ್ತ ಜನ ಸುಳಿಯದಂತೆ ಬೇಲಿ ಸಹ ಹಾಕಲಾಗಿದೆ. ಅದಾಗ್ಯೂ ಈ ಕಟ್ಟಡದ ಮೇಲೇರಿಯೂ ಜನ ಜಂಬೂ ಸವಾರಿ ವೀಕ್ಷಣೆ ಮಾಡಿದ್ದಾರೆ.

ಪ್ರಾಣದ ಹಂಗು ತೊರೆದು ಹೀಗೆ ಶಿಥಿಲಗೊಂಡಿರುವ ಕಟ್ಟಡ ಮೇಲೇರಿದ್ದು ಎಂತಹ ಹುಚ್ಚಾಟ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಅಲ್ಲದೆ, ಆ ಕಟ್ಟಡದ ಮೇಲೇರಿವುದಕ್ಕೆ ಅವಕಾಶ ಕೊಟ್ಟಿದ್ದು ಯಾರು? ಈ ಕಟ್ಟಡದತ್ತ ಯಾರೂ ಸುಳಿಯದಂತೆ ಪೊಲೀಸರು ಕ್ರಮ ವಹಿಸಬೇಕಿತ್ತು ಎಂದು ಬೇಸರವೂ ವ್ಯಕ್ತವಾಗಿದೆ. ಅದೃಷ್ಟವಶಾತ್ ಸಾವು–ನೋವು ಸಂಭವಿಸಿಲ್ಲ. ಒಂದು ವೇಳೆ ಅನಾಹುತ ಉಂಟಾಗಿದ್ದರೆ, ಅದೆಷ್ಟು ಸಾವು ನೋವು ಉಂಟಾಗುತ್ತಿತ್ತು ಎಂದು ಪ್ರಜ್ಞಾವಂತ ನಾಗರಿಕರು ಆತಂಕ ವ್ಯಕ್ತಪಡಿಸಿದರು. ಅಂತೆಯೇ 2016ರಲ್ಲಿ ದೇವರಾಜ ಮಾರುಕಟ್ಟೆಯ ಒಂದು ಭಾಗ ಕುಸಿತವಾಗಿತ್ತು. ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮತ್ತು ದೇವರಾಜ ಮಾರುಕಟ್ಟೆ ಕಟ್ಟಡಗಳು ಶತಮಾನ ಪೂರೈಸಿರುವ ಪಾರಂಪರಿಕ ಕಟ್ಟಡಗಳಾಗಿದ್ದು, ಅವುಗಳ ಸಂರಕ್ಷಣೆ ಹಾಗೂ ನೆಲಸಮ, ಪುನರ್ ನಿರ್ಮಾಣ ಸೇರಿದಂತೆ ಇನ್ನಿತರೆ ಆಯಾಮಗಳಲ್ಲಿ ಚರ್ಚೆಗಳು ಸಹ ನಡೆಯುತ್ತಿವೆ. ಇಂತಹ ಸನ್ನಿವೇಶದಲ್ಲಿ ದೇವರಾಜ ಮಾರುಕಟ್ಟೆಯ ಕಟ್ಟಡದ ಮೇಲೂ ಕುಳಿತು ಜಂಬೂ ಸವಾರಿ ನೋಡಿರುವುದು ಆತಂಕಕಾರಿ ವಿಚಾರವಾಗಿದೆ.

ಜಂಬೂ ಸವಾರಿ ಮಾರ್ಗದಲ್ಲಿ ಉಕ್ಕಿ ಹರಿದ ಒಳಚರಂಡಿ ನೀರು




ಸಯ್ಯಾಜಿರಾವ್ ರಸ್ತೆಯಲ್ಲಿ ಹರಿಯುತ್ತಿರುವ ಒಳಚರಂಡಿ ನೀರು.

ಮೈಸೂರು, ಅ.12(ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂ ಸವಾರಿ ಆರಂಭವಾಗುತ್ತಿದ್ದಂತೆ ಸುರಿದ ಮಳೆಯಿಂದಾಗಿ ಅಂಬಾರಿ ಸಾಗುವ ಸಯ್ಯಾಜಿರಾವ್ ರಸ್ತೆಯಲ್ಲಿ ಒಳ ಚರಂಡಿ ನೀರು ಉಕ್ಕಿ ಹರಿದು, ಕೆಲಕಾಲ ರಸ್ತೆ ಬದಿಯಲ್ಲಿ ನಿಂತಿದ್ದ ಭಕ್ತರು ಹಾಗೂ ಕರ್ತವ್ಯ ನಿರತ ಪೊಲೀಸರಿಗೆ ತೊಂದರೆಯುಂಟಾಯಿತು.

ಆಯುರ್ವೇದಿಕ್ ಸರ್ಕಲ್ ಕೆ.ಆರ್. ವೃತ್ತ ಕಡೆಗೆ ರಸ್ತೆ ಬದಿಯಲ್ಲಿ ಹರಿಯುತ್ತಿದ್ದ ಕೊಳಚೆ ನೀರಿನಿಂದ ಮಕ್ಕಳು, ಮಹಿಳೆಯರು ಮೂಗು ಮುಚ್ಚಿಕೊಂಡು ನಿಲ್ಲುವಂತಾಯಿತು. ಅಲ್ಲದೆ ಹರಿಯುತ್ತಿದ್ದ ಕೊಳಚೆ ನೀರಿನ ಮೇಲೆಯೇ ಮಕ್ಕಳು ನಡೆಯುತ್ತಿದ್ದು, ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದೆ ಇರುವುದರಿಂದ ಈ ರೀತಿ ಕೊಳಚೆ ನೀರು ರಸ್ತೆಯಲ್ಲಿ ಹರಿಯುತ್ತಿದೆ ಎಂದು ಹಲವರು ಪಾಲಿಕೆ ಅಧಿಕಾರಿ–ಸಿಬ್ಬಂದಿಗೆ ಹಿಡಿಶಾಪ ಹಾಕಿದರು.

ಒಂದೆಡೆ ಕೊಳಚೆ ನೀರು ಹರಿಯುತ್ತಿದ್ದರೆ ಅದರ ನಡುವೆ ನಾಡದೇವಿ ದರ್ಶನ ಪಡೆಯಲು ಗಂಟೆಗಟ್ಟಲೇ ನಿಂತಿದ್ದ ಭಕ್ತ ಸಮೂಹದ ಸ್ಥಿತಿ ಶೋಚನೀಯವಾಗಿತ್ತು. ಆಗಲೇ ಮಳೆಯಲ್ಲಿ ನೆಂದು ಒದ್ದೆಯಾಗಿದ್ದ ಮಕ್ಕಳನ್ನು ಹರಿಯುತ್ತಿದ್ದ ಚರಂಡಿ ನೀರಿನಲ್ಲಿ ಚೇರ್ ಹಾಕಿ ಕೂರಿಸಿದ್ದರೂ ಬಿಕ್ಕಿ ಬಿಕ್ಕಿ ಅಳುತ್ತಿದ್ದ ದೃಶ್ಯಗಳು ಮನ ಕಲಕುವಂತಿತ್ತು. 30 ನಿಮಿಷ ಸುರಿದ ಮಳೆಗೆ ಚರಂಡಿಗಳು ಉಕ್ಕಿ ಹರಿದರೆ, ಇನ್ನೂ ಗಂಟೆ ಗಟ್ಟಲೆ ಮಳೆ ಸುರಿದರೆ ಇನ್ನೆಂತಹ ದುಸ್ಥಿತಿ ನಿರ್ಮಾಣವಾಗಬಹುದು. ಅಲ್ಲದೆ ಮಳೆ ನೀರಿನೊಂದಿಗೆ ತೇಲಿ ಬಂದ ಪ್ಲಾಸ್ಟಿಕ್ ಕಸ ರಸ್ತೆಯಲೆಲ್ಲಾ ಚೆಲ್ಲಿಪಿಲ್ಲಿಯಾಗಿ ಬಿದ್ದಿದ್ದರಿಂದ ಅಸಹ್ಯವಾಗಿ ಪರಿಣಮಿಸಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.10.2024 ಭಾನುವಾರ, ಮಳೆ ನಕ್ಷತ್ರ: ಚಿತ್ತ, 10.10.2024ರಿಂದ 23.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಯ 50ನೇ ಬ್ರಹ್ಮೋತ್ಸವ, 9ನೇ ತಿರುನಾಳ್, ಮುಂಜಾನೆಯಿಂದ ಚತುಃಸ್ಥಾನಾರ್ಚನೆ, ಸುದರ್ಶನ ಸಹಸ್ರನಾಮ ಹೋಮ, ಪ್ರಾಕಾರೋತ್ಸವ, ನಿವೇದನೆ, ಮಂಗಳಾರತಿ, ಸಂಜೆ: ಡೋಲೋತ್ಸವ, ಆಳ್ವಾರ್ ಸಂದರ್ಶನ, ಶಾತ್ತುಮೊರೈ, ತೀರ್ಥ ಪ್ರಸಾದ ವಿನಿಯೋಗ. ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆಯಿಂದ ತೀರ್ಥಸ್ನಾನ, ಉತ್ಸವ, ಸಂಜೆ ಪೂರ್ಣಾಹುತಿ, ಧ್ವಜಾರೋಹಣ, ಮಹಾ ಮಂಗಳಾರತಿ, ಸ್ಥಳ: ದೇವಸ್ಥಾನ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಬೆಳಗ್ಗೆಯಿಂದ ಏಕಾದಶಿ, ದೇವಿಗೆ ಶ್ರೀ ಶಾಖಾಂಬರಿ ಅಲಂಕಾರ, ಶ್ರೀ ಲಕ್ಷ್ಮಿ ನಾರಾಯಣ ಹೃದಯ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ವ್ಯವಸ್ಥಾಪಕರು:** ಶ್ರೀಮತಿ ಹೇಮಲತಾ ಕುಮಾರಸ್ವಾಮಿ ಅವರ ನಿವಾಸದಲ್ಲಿ ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್ :** ಶರನ್ನವರಾತ್ರಿ ಉತ್ಸವ–2024, ಅಮ್ಮನವರಿಗೆ ಶತಕಲಾಭಿಷೇಕ, ಪುಷ್ಪಾಲಂಕಾರ, ಸಪ್ತಶತಿ ಪಾರಾಯಣ, ಸುಮಂಗಲಿಯರಿಂದ ಕುಂಕುಮಾರ್ಚನೆ, ಸ್ಥಳ: ದೇವಸ್ಥಾನದ ಪ್ರಾಂಗಣ, ವಾಣಿವಿಲಾಸ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಮತ್ತು ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ಪ್ರತ್ಯೇಕ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ವ್ಯವಸ್ಥಾಪಕರು :** ಕೆ.ಎಸ್.ರಾಘವೇಂದ್ರ ಅವರಿಂದ ಪೇಪರ್ ಪಲ್ಸ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ರಂಗಾಯಣ:** ವಾರಾಂತ್ಯ ರಂಗ ಪ್ರದರ್ಶನದಲ್ಲಿ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿಯಿಂದ ಮಾನ್ಯತೆ ಪಡೆದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ 'ಅಭಿಮನ್ಯು ಕಾಳಗ' ನಾಟಕ, ನಿರ್ದೇಶನ ಮತ್ತು ಭಾಗವತರು: ದಿಗ್ವಿಜಯ ಹೆಗ್ಗೋಡು, ಸ್ಥಳ: ಭೂಮಿಗೀತ ರಂಗಮಂದಿರ, ರಂಗಾಯಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಶಾಂತಕುಮಾರಿ, 6.15–ಗೀತಾರಾಧನ, 6.35 ಮತ್ತು ಸಂಜೆ 6.10– ಸಿನೆಮಾ ಯಾನ, ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40–ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ–ಡಾ.ಜಿ.ಆರ್.ತಿಪ್ಪೇಸ್ವಾಮಿ, 6.50–ರೈತರಿಗೆ ಸಲಹೆ, 7.15 –ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ವಿಕಾಸ ಅಕಾಡೆಮಿ, ಕಲಬುರ್ಗಿ, 7.45–ಶರಣ ಸಂಸ್ಕೃತಿ ಉತ್ಸವ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, 8.30–ಕನ್ನಡ ಚಿತ್ರಗೀತೆಗಳು, 9.05–ನಮ್ಮ ಆರೋಗ್ಯ–'ಆಯಿಷ್ ಯಶೋಗಾಥೆ' ಸರಣಿಯಲ್ಲಿ 'ಧ್ವನಿ ಸಮಸ್ಯೆ' ಮತ್ತು 'ತೊದಲುವಿಕೆ' ಕುರಿತು ಕಾರ್ಯಕ್ರಮ. ಭಾಗವಹಿಸುತ್ತಾರೆ: ಡಾ.ಗೋಪಿಶಂಕರ್. ಆರ್, ವರ್ಷಾ ಎಸ್.ಆರ್., ವೇದಾ. ಪಿ, ಹಿತೇಶ್. ಎಸ್.ನಾಯಕ್ ಮತ್ತು ಸಿದ್ದಪ್ಪ, ಪ್ರಸ್ತುತಿ: ಬೇದ್ರೆ ಮಂಜುನಾಥ್ ಮತ್ತು ದಿಗ್ವಿಜಯ್. ಬಿ, ಪ್ರಾಯೋಜಕರು–ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35–ಸ್ತನ ಕ್ಯಾನ್ಸರ್ ಜಾಗೃತಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.40–ಚಿತ್ರಗೀತೆಗಳು, 10.00–ಕೇಳಿ ಗಿಳಿಗಳೇ: ಕಥೆ ಕೇಳು ಪುಟ್ಟ –ಕಥೆ ಹೇಳುತ್ತಾರೆ ಬಿ. ಜಿ. ಕವಿತಾ, 10.30–ಮಕ್ಕಳ ಮಂಟಪ: ಮೈಸೂರಿನ ಶಕ್ತಿಧಾಮ ವಿದ್ಯಾಶಾಲೆಯ ಮಕ್ಕಳಿಂದ ಕಾರ್ಯಕ್ರಮ, ವೈವಿಧ್ಯದ ಮೂರನೇ ಭಾಗ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿಯಲ್ಲಿ ಮಿಶ್ರಮಾಧುರ್ಯ, 12.05–ವನಿತಾ ವಿಹಾರ–ರಾಷ್ಟ್ರೀಯ ಜೀವನೋಪಾಯ ಅಭಿಯಾನದ ನಿರ್ದೇಶಕರಾದ ಪಿ.ಐ.ಶ್ರೀವಿದ್ಯಾ ಅವರೊಂದಿಗೆ ಸಂದರ್ಶನ, ಸಂದರ್ಶಕರು – ಹೆಚ್.ಜಿ.ಶೋಭಾ, 12.30–ದೇವರನಾಮ–ಪಿ.ಎಸ್.ರಂಜನಿ, 12.45–ಜನಪದ ಸಂಗೀತ–ಹೆಗ್ಗಡಹಳ್ಳಿ ಕೃಷ್ಣೇಗೌಡ ಹಾಗೂ ಸಂಗಡಿಗರು ಹಾಡಿರುವ ಸೋಬಾನೆ ಪದ. 1.20–ಭಾವಗೀತೆಗಳು–ದೀಪಾ ಸತ್ಯನಾರಾಯಣ, 2.40–ಕನ್ನಡ ಚಲನಚಿತ್ರ ಧ್ವನಿವಾಹಿನಿ–ಕೊಲ್ಲೂರು ಮೂಕಾಂಬಿಕೆ, 3.40–ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45–ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ: ಪಂ.ಜಸ್ರಾಜ್–ಹಾಡುಗಾರಿಕೆ, 4.45–ಚಿತ್ರಗೀತೆಗಳು, 6.51–ಕೃಷಿರಂಗ: ಕೃಷಿ ಹಾಡುಗಳು, 7.00–ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವೆ ಶಾರ್ಜಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಐ.ಸಿ.ಸಿ ಮಹಿಳೆಯರ ಟಿ–20 ವರ್ಲ್ಡ್ ಕಪ್ ಕ್ರಿಕೆಟ್ ಪಂದ್ಯಾವಳಿಯ ನೇರ ವೀಕ್ಷಕ ವಿವರಣೆ.

ಮೈಸೂರು ಮಿತ್ರ



ಶ್ರೀ ಚಾಮುಂಡೇಶ್ವರಿ ತಾಯಿ ವಿರಾಜಮಾನಳಾಗಿರುವ 750 ಕೆಜಿ ತೂಕದ ಚಿನ್ನದ ಅಂಬಾರಿಯನ್ನು ಹೊತ್ತು ಅಭಿಮನ್ಯು ಆನೆ ಮೈಸೂರಿನ ರಾಜಮಾರ್ಗದಲ್ಲಿ ಲಕ್ಷಾಂತರ ಮಂದಿಯ ಮುಂದೆ ಗಾಂಭೀರ್ಯದೊಂದಿಗೆ ಹೆಜ್ಜೆ ಹಾಕಿತು.

ಜಂಬೂಸವಾರಿ ಉದ್ದಕ್ಕೂ ಅಶಿಸ್ತು, ಅದ್ವಾನ

ಹೇಳುವವರು-ಕೇಳುವವರು ಯಾರೂ ಇಲ್ಲದೆ ಜಾತ್ರೆ ನೆನಪಿಗೆ ತಂದ ದೃಶ್ಯ

ಮೈಸೂರು, ಅ. 12(ಆರ್‌ಕೆ)- ಇಂದು ನಡೆದ ವಿಶ್ವ ಪ್ರಸಿದ್ಧ ವಿಜಯದಶಮಿ ಮೆರವಣಿಗೆಯಲ್ಲಿನ ಅಶಿಸ್ತು, ಅದ್ವಾನಕ್ಕೆ ಜನರು ಮೆರವಣಿಗೆ ಉಪ ಸಮಿತಿಗೆ ಹಿಡಿಶಾಪ ಹಾಕಿದರು.

ಅರಮನೆ ಆವರಣದಲ್ಲಿ ಜಂಬೂ ಸವಾರಿ ಆರಂಭವಾಗುತ್ತಿದ್ದಂತೆಯೇ ಜಾನಪದ ಕಲಾತಂಡಗಳು ಹಾಗೂ ಸ್ತಬ್ಧಚಿತ್ರಗಳು ಸಾಗುವ ಮಾರ್ಗದಲ್ಲಿ ಮೆರವಣಿಗೆ ಉಪ ಸಮಿತಿ ಸದಸ್ಯರು ಕೊರಳಿಗೆ ಟ್ಯಾಗ್ ಧರಿಸಿ ದಂಡು ದಂಡಾಗಿ ಸುತ್ತಾಡುತ್ತಿದ್ದರು. ಜಂಬೂ ಸವಾರಿ ಸಾಗುವ ಮಾರ್ಗದ ಎರಡೂ ಬದಿಗಳಲ್ಲಿ ಗುಂಪು ಕಟ್ಟಿ ನಿಂತಿದ್ದರು. ಹಾಗಾಗಿ ನೆರೆದಿದ್ದ ಆಹ್ವಾನಿತರಿಗೆ ಮೆರವಣಿಗೆ ನೋಡಲು ತೀವ್ರ ಅಡ್ಡಿ ಉಂಟಾಗಿದ್ದರಿಂದ ಗದ್ದಲ, ಗೊಂದಲ ಉಂಟಾಯಿತು. ಪೊಲೀಸ ರಾಗಲೀ, ಸಂಬಂಧಪಟ್ಟ ಅಧಿಕಾರಿಗಳಾಗಲೀ ಕ್ರಮ ಕೈಗೊಳ್ಳದೆ, ಮೂಕ ಪ್ರೇಕ್ಷಕರಂತೆ ನಿಂತಿದ್ದು ಕಂಡುಬಂದಿತು.

ಆರಂಭದಿಂದ ಅಂತ್ಯದವರೆಗೂ ಉಪಸಮಿತಿ ಸದಸ್ಯರು, ಗುರುತಿನ ಚೀಟಿ ಅಥವಾ ಪಾಸ್ ಇಲ್ಲದವರು ನೂರಾರು ಸಂಖ್ಯೆಯಲ್ಲಿ ನೆರೆದಿದ್ದರಾದರೂ ಯಾರೊಬ್ಬರೂ ಅವರನ್ನು ಪ್ರಶ್ನಿಸದೇ ಇದ್ದ ಕಾರಣ ಮೆರವಣಿಗೆ ಮಾರ್ಗದಲ್ಲಿ ಅವರು ಅತ್ತಿಂದಿತ್ತ ಓಡಾಡುತ್ತಾ, ಸೆಲ್ಫಿ ತೆಗೆದುಕೊಳ್ಳುವುದರಲ್ಲಿ ನಿರತರಾಗಿದ್ದುದು ಗೋಲ್ಡ್ ಕಾರ್ಡ್, ಟಿಕೆಟ್ ಹಾಗೂ ಪಾಸ್ ಹೊಂದಿದ್ದವರ ಆಕ್ರೋಶಕ್ಕೆ ಕಾರಣವಾಯಿತು. ಮೆರವಣಿಗೆ ವೀಕ್ಷಿಸಲು ಸಾಧ್ಯವಾಗದ ಆಹ್ವಾನಿತರು ಜೋರಾಗಿ ಕೂಗಿ, ಗಲಾಟೆ-ಗದ್ದಲ ಮಾಡಿದರೂ ಸ್ಥಳದಲ್ಲಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸರು ಸ್ತಬ್ಧ ಚಿತ್ರದಂತೆಯೇ ನಿಂತಿದ್ದರು.

ಜಿಲ್ಲಾಡಳಿತ, ನಗರಪಾಲಿಕೆ, ಜಿಲ್ಲಾ ಪಂಚಾಯ್ತಿ, ಕಂದಾಯ ಇಲಾಖೆ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರಾದರೂ, ಈ ಅವ್ಯವಸ್ಥೆ ಸರಿಪಡಿಸುವತ್ತ ಗಮನಹರಿಸಲಿಲ್ಲ. ಚಿನ್ನದ ಅಂಬಾರಿಯನ್ನು ಹೊತ್ತ ಅಭಿಮನ್ಯು ಅರಮನೆ ಮುಂಭಾಗಕ್ಕೆ ಆಗಮಿಸಿದಾಗಲಂತೂ ಸಾವಿರಾರು ಮಂದಿ ಸುತ್ತುವರಿದು ಪುಷ್ಪಾರ್ಚನೆಗೂ ಅಡ್ಡಿಯಾಯಿತು. ವೇದಿಕೆ ಏರಿದ್ದ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಸಹ ಮಾರ್ಗದಲ್ಲಿ ಗುಂಪಾಗಿ ನೆರೆದಿದ್ದ ಜನರನ್ನು ಕಂಡು ಅಶಿಸ್ತಿನ ಬಗ್ಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದು ಕಂಡುಬಂತು.

ಕೆಲವರಂತೂ ಜಾನಪದ ಕಲಾತಂಡಗಳು ಹಾಗೂ ಸ್ತಬ್ಧಚಿತ್ರಗಳ ನಡುವೆಯೂ ಗುಂಪು ಗುಂಪಾಗಿ ಓಡಾಡಿದ ಕಾರಣ ಪ್ರದರ್ಶನಕ್ಕೆ ಅಡ್ಡಿ ಉಂಟಾಯಿತು. ಮತ್ತೊಂದೆಡೆ ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿದ್ದ ಸಿವಿಲ್ ಪೊಲೀಸ್, ಎನ್‌ಸಿಸಿ ಕೆಡೆಟ್‌ಗಳು ಇಕ್ಕೆಲಗಳಲ್ಲಿ ಸಾಲಾಗಿ ನಿಂತಿದ್ದರಿಂದ ವೀಕ್ಷಕರಿಗೆ ದಸರಾ ಮೆರವಣಿಗೆ ನೋಡಲು ಅಡ್ಡಿ ಉಂಟಾಗಿ, ತೀವ್ರ ಕಿರಿಕಿರಿ ಉಂಟಾಯಿತು. ಇದೂವರೆಗೆ ಮೆರವಣಿಗೆ ಮಾರ್ಗದಲ್ಲಿ ಕಲಾವಿದರು, ಸ್ತಬ್ಧಚಿತ್ರಗಳನ್ನು ಹೊರತುಪಡಿಸಿ ಬೇರೆ ಯಾರೂ ಇರದಂತೆ ಕ್ರಮ ವಹಿಸಲಾಗುತ್ತಿತ್ತು. ಆದರೆ, ಇಂದಿನ ವಿಜಯದಶಮಿ ಮೆರವಣಿಗೆಯಲ್ಲಿ ಜನರಿಗೆ ಸ್ತಬ್ಧ ಚಿತ್ರಗಳನ್ನು ನೋಡುವ ಬದಲು ಮೆರವಣಿಗೆ ಉಪಸಮಿತಿ ಸದಸ್ಯರು, ಎನ್‌ಸಿಸಿ ಕೆಡೆಟ್‌ಗಳನ್ನು ನೋಡುವಂತಾಗಿದ್ದು ಆಕ್ರೋಶಕ್ಕೆ ಕಾರಣವಾಯಿತು. ಕಡೆಗೆ ಈ ಕಿರಿಕಿರಿ ಅತಿರೇಕಕ್ಕೆ ಹೋದಾಗ ಸ್ಥಳದಲ್ಲಿದ್ದ ಹಿರಿಯ ಪೊಲೀಸ್ ಅಧಿಕಾರಿಗಳು ಮೆರವಣಿಗೆ ಉಪಸಮಿತಿ ಸದಸ್ಯರನ್ನು ಹೊರಕ್ಕೆ ಕಳಿಸುವ ಪ್ರಯತ್ನ ಮಾಡಿದರಾದರೂ ಮತ್ತೆ ಮತ್ತೆ ಅದೇ ಸಮಸ್ಯೆ ಮರುಕಳಿಸಿದ ಪರಿಣಾಮ ಇಡೀ ಮೆರವಣಿಗೆಯು ಅಶಿಸ್ತಿನಿಂದ ಕೂಡಿದ್ದು, ಅದ್ವಾನವಾಗಿ ಹೋಯಿತು. ಅರಮನೆ ಆವರಣವಷ್ಟೇ ಅಲ್ಲದೇ ಹೊರ ಭಾಗದ ರಾಜಮಾರ್ಗದಲ್ಲೂ ಮೆರವಣಿಗೆ ಉಪ ಸಮಿತಿ ಸದಸ್ಯರೇ ಸಾಗಿ ಜನಸ್ತೋಮಕ್ಕೆ ತೀವ್ರ ಕಿರಿಕಿರಿ ಉಂಟಾಯಿತು.





ಮಳೆಯ ನಡುವೆಯೂ ಸಂಭ್ರಮ ಕಣ್ತುಂಬಿಕೊಂಡ ಪ್ರವಾಸಿಗರು





ಛತ್ರಿ ಹಿಡಿದು ದಸರಾ ಮೆರವಣಿಗೆ ವೀಕ್ಷಿಸಿದ ಪ್ರವಾಸಿಗರು, ಜಾಹೀರಾತು ಬ್ಯಾನರ್ ಹಿಡಿದು ಮಳೆಯಿಂದ ತಪ್ಪಿಸಿಕೊಳ್ಳುತ್ತಿರುವುದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ.12(ಜಿಎ)-ಮಳೆರಾಯನಿಗೆ ಸೆಡ್ಡು ಹೊಡೆದ ಪ್ರವಾಸಿಗರು ಛತ್ರಿ, ಬ್ಯಾನರ್, ಹೋಲ್ಡಿಂಗ್ಸ್ ಸೇರಿದಂತೆ ಇತರ ವಸ್ತುಗಳ ಸಹಾಯದಿಂದ ಜಂಬೂ ಸವಾರಿ ಕಣ್ತುಂಬಿಕೊಂಡರು.

ಹೌದು ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ನಂದಿಪೂಜೆ ಸಲ್ಲಿಸಿ, ಮೆರವಣಿಗೆ ಆರಂಭವಾಗುತ್ತಿದ್ದಂತೆ ತುಂತುರು ಮಳೆ ಆರಂಭವಾಗಿ ನಂತರ ನೌಪತ್, ನಿಶಾನೆ ಆನೆ ಕೋಟೆ ಆಂಜನೇಯ ದೇವಸ್ಥಾನದ ಬಳಿ ಆಗಮಿಸುತ್ತಿದ್ದಂತೆ ಮಳೆ ಜೋರಾಯಿತು. ಜನರು ಮಳೆಗೆ ಕದಲದೇ ಮೆರವಣಿಗೆ ನೋಡಿ ಹರ್ಷೋದ್ಗಾರ ಮೂಡಿಸಿದರು.

ಜನರು ಮುನ್ನೆಚ್ಚರಿಕೆ ಕ್ರಮವಾಗಿ ಛತ್ರಿ, ರೈನ್ ಕೋಟ್‌ಗಳನ್ನು ತೆಗೆದುಕೊಂಡು ಬಂದಿದ್ದರು. ಬಿಸಿಲ ಬೇಗೆ ಹೆಚ್ಚಾಗುತ್ತದೆ ಎಂಬ ದೃಷ್ಟಿಯಿಂದ ವಿವಿಧ ಸಂಘ-ಸಂಸ್ಥೆಗಳು ಟೋಪಿಗಳನ್ನು ವಿತರಿಸಿದ್ದವು. ಎರಡು ಗಂಟೆವರೆಗೆ ಸುದೀರ್ಘ ಬಿಸಿಲು ಜಳಪಿಸಿತ್ತು. ಆದರೆ, ಎರಡು ಗಂಟೆ ನಂತರ ಮಳೆ ಸಣ್ಣ ಪ್ರಮಾಣದಲ್ಲಿ ಆರಂಭವಾಗಿ ನಂತರ ಮಳೆ ಪ್ರಮಾಣ ಹೆಚ್ಚಾಗಿ ಇಡೀ ವಾತಾವರಣವನ್ನೇ ತಂಪು ಮಾಡಿತು.

ಅರಮನೆ ಒಳ ಹಾಗೂ ಹೊರ ಭಾಗದಲ್ಲಿ ಸೇರಿದ್ದ ಲಕ್ಷಾಂತರ ಮಂದಿ ಪ್ರವಾಸಿಗರು ಮಳೆ ಆರಂಭವಾಗುತ್ತಿದ್ದಂತೆ ತಾವು ತಂದಿದ್ದ ಛತ್ರಿ, ರೈನ್ ಕೋಟ್ ಬಳಸಿಕೊಂಡು ಮಳೆಯಿಂದ ರಕ್ಷಿಸಿಕೊಂಡರೆ, ಯಾವುದೇ ರಕ್ಷಣೆ ಇಲ್ಲದ ಕೆಲವರು ಕುರ್ಚಿಗಳನ್ನು ತಲೆ ಮೇಲೆ ಇಟ್ಟುಕೊಂಡು ಜಂಬೂಸವಾರಿ ವೀಕ್ಷಿಸಿದರು. ದಸರಾ ವಿವಿಧ ಉಪ ಸಮಿತಿಯ ಕೆಲ ಸದಸ್ಯರು ಚಾಮರಾಜ ಒಡೆಯರ್ ವೃತ್ತದ ಬಳಿ ನಿಂತು ಮೆರವಣಿಗೆ ವೀಕ್ಷಿಸುತ್ತಿದ್ದರು. ಮಳೆ ಆರಂಭವಾಗುತ್ತಿದ್ದಂತೆ ವೃತ್ತಕ್ಕೆ ಅಳವಡಿಸಿದ್ದ ಸೈಕಲ್ ಪ್ಯೂರ್ ಅಗರಬತ್ತಿಯ ಬ್ಯಾನರ್‌ಗಳನ್ನು ತೆಗೆದುಕೊಂಡು ಮಳೆಯಿಂದ ತಪ್ಪಿಸಿಕೊಳ್ಳಲು ಮುಂದಾದರು.

ಕಲಾತಂಡಗಳು ಮಳೆಯನ್ನು ಲೆಕ್ಕಿಸದೇ ಜಂಬೂಸವಾರಿ ಮೆರವಣಿಗೆಯಲ್ಲಿ ಹೆಜ್ಜೆ ಹಾಕುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಮಳೆ ಪ್ರಮಾಣ ಹೆಚ್ಚಾಗುತ್ತಿದ್ದಂತೆ ಕಲಾವಿದರ ಉತ್ಸಾಹವೂ ಹೆಚ್ಚಾಯಿತು.

ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ರಾಜ್ಯ ವಿವಿಧ ಭಾಗಗಳಿಂದ ಆಗಮಿಸಿದ್ದ ಕಲಾವಿದರು ಮಳೆಯ ನಡುವೆಯೇ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿ ಜನರ ಉತ್ಸಾಹವನ್ನು ಇಮ್ಮಡಿಗೊಳಿಸಿ, ಮಳೆಯಿಂದ ರಕ್ಷಿಸಿಕೊಳ್ಳದೆ ಗಮನ ಸೆಳೆದರು.



ನಕ್ಕರೆ ಅದೇ ಸ್ವರ್ಗ

ಜಡ್ಜ್ : ಹೆಂಡತಿ ಕೆನ್ನೆಗೆ ಹೊಡೆದಿದ್ದಕ್ಕೆ ನಿಂಗೆ 1000 ರೂ. ದಂಡ... (ನ್ಯಾಯಾಲಯದ ಕಟಕಟೆಯಿಂದ ಇಳಿದು ಬಂದ ರಂಗ ಎದುರು ನಿಂತಿದ್ದ ತನ್ನ ಹೆಂಡತಿ ಕೆನ್ನೆಗೆ ಇನ್ನೊಂದು ಏಟು ಕೊಟ್ಟ).

ಜಡ್ಜ್ : (ಕೋಪದಿಂದ) ಮತ್ತೆ ಏಕೆ ಹೊಡೆದೆ?

ರಂಗ : ಚಿಲ್ಲರೆ ಇಲ್ಲ ಸ್ವಾಮಿ, 2000 ರೂ. ಹೊಸ ನೋಟು... ಅದಕ್ಕೆ ಹೊಡೆದೆ. ತಗೊಳ್ಳಿ 2000 ರೂ.

ಮೈಸೂರು ಮಿತ್ರ

ಭಾನುವಾರ, 13 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಗುರುವೆ ನಾನು ಒಂದು ಸೊನ್ನೆ, ಸೊನ್ನೆಗೆಲ್ಲಿ ಬೆಲೆಯಿದೆ. ಇದ್ದರಂಕಿ ಸೊನ್ನೆಗಾಗ ಬೆಲೆಯಿದೆ. ಗುರುವೆ ನೀವು ನನ್ನ ಹಿಂದೆ ಅಂಕಿಯಾಗಿ ಬನ್ನಿರಿ, ಸೊನ್ನೆಯಾದ ನನ್ನ ಬಾಳಿಗೆ ಬೆಳಕ ತನ್ನಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕಾಸು ಕೊಟ್ಟಾಯ್ತು, ಬಂಗಿ ಸುಟ್ಟಾಯಿತು'

ನಿಮ್ಮ ಪತ್ರಗಳು

ಸರ್ಕಾರದ ದಸರಾ ಆಕ್ಷೇಪಾರ್ಹ ಜಾಹೀರಾತು, ತಾರತಮ್ಯ ನೀತಿ

ಮಾನ್ಯರೆ,

ಮೈಸೂರಿನಲ್ಲಿ ವಿಜಯದಶಮಿಯಂದು ನಡೆದ ಜಂಬೂಸವಾರಿಯ ನಿಮಿತ್ತ ಸರ್ಕಾರ ಕೆಲ ಪತ್ರಿಕೆಗಳಿಗೆ ಮುಖಪುಟದಲ್ಲಿ ನೀಡಿರುವ ಜಹೀರಾತು ತೀವ್ರ ಆಕ್ಷೇಪದ ಪದಗಳು ಹಾಗೂ ದ್ವೇಷದ ಅಂಶಗಳನ್ನು ಹೊಂದಿದ್ದು, ಇದು ಬಿಜೆಪಿ ಹಾಗೂ ಹಿಂದೂಗಳನ್ನೇ ಉದ್ದೇಶಿಸಿ ನೀಡಿರುವ ಹಾಗೂ ಒಂದು ಜನಾಂಗದ ಹಿತವನ್ನು ಕಾಪಾಡಲು ನಮ್ಮ ಸರ್ಕಾರ ಕಟಿ ಬದ್ಧ ಎಂದು ಬಿಂಬಿಸುವಂತಿದೆ. ನಾಡಿನ ಜನತೆಗೆ ಶುಭ ಕೋರಿ ನಾಡಿನ ಸಮೃದ್ಧಿಗೆ ಹಾರೈಸಬೇಕಿದ್ದ ಸರ್ಕಾರದ ಜಾಹೀರಾತು ನಿಜಕ್ಕೂ ದ್ವೇಷ ಕಾರುವಂತಿದೆ. ಅಲ್ಲಿರುವ ಕೆಲ ಒಕ್ಕಣೆಗಳನ್ನು ನೋಡಿ :ಶಾಂತಿಭಂಗ–ಸಾಮರಸ್ಯ ಕದಡುವವರ ನಿವಾರಣೆ, ಪ್ರಚೋದನೆ–ಪ್ರೇರೇಪಿಸುವವರ ನಿರ್ಮೂಲನೆ, ಸುಳ್ಳು ವದಂತಿ–ಮೂಲದಿಂದಲೇ ನಾಶ.... ಹೀಗೆ ನವರಾತ್ರಿಯ ಒಂಬತ್ತು ಪದಗಳಿಗೂ ಈ ರೀತಿ ವಿವರಣೆ ನೀಡಲಾಗಿದೆ. ವಿಜಯದಶಮಿ ಸಂದರ್ಭದಲ್ಲಿ ಈ ರೀತಿ ಒಂದು ಪಕ್ಷದ ಅಥವಾ ಬಹುಸಂಖ್ಯಾತ ಜನರ ವಿರುದ್ಧ ಜಾಹೀರಾತು ನೀಡಿರುವುದು ಅಕ್ಷಮ್ಯ.

ಸರ್ಕಾರದ ಜಾಹೀರಾತೊಂದು ಈ ರೀತಿ ಇರುವುದು ಖಂಡನೀಯ. ಅಲ್ಲದೆ ಶಾಂತಿಭಂಗ–ಸಾಮರಸ್ಯ ಕದಡುವವರ ನಿರ್ಮೂಲನೆ ಎಂದು ವಿಜಯದಶಮಿ ಜಾಹೀರಾತಿನಲ್ಲಿ ಹೇಳಿ ಅಂದೇ 2022ರ ಹುಬ್ಬಳ್ಳಿ ಗಲಭೆಗೆ ಸಂಬಂಧಿಸಿದಂತೆ ದಾಖಲಾಗಿದ್ದ 43 ಪ್ರಕರಣಗಳನ್ನು ವಾಪಾಸ್ ಪಡೆದಿರುವುದು ಏನನ್ನು ಸೂಚಿಸುತ್ತದೆ? ಸರ್ಕಾರ ಯಾರ ಮಾರ್ಗದರ್ಶನದಲ್ಲಿ ನಡೆಯುತ್ತಿದೆ ಎಂದು ಇದರಿಂದ ವೇದ್ಯವಾಗುತ್ತದೆ.

ಇನ್ನೊಂದು ಮುಖ್ಯವಾದ ಸಂಗತಿ ಎಂದರೆ ವಿಜಯದಶಮಿ ಮುನ್ನಾ ದಿನವಾದ 11.10.24.ರ ರಾಜ್ಯ ಹಾಗೂ ಪ್ರಾದೇಶಿಕ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿಜಯ ದಶಮಿಯ ಈ ಸರ್ಕಾರಿ ಜಾಹೀರಾತನ್ನು 'ಮೈಸೂರು ಮಿತ್ರ' ಪತ್ರಿಕೆಗೆ ನೀಡಿರುವುದಿಲ್ಲ. ಎಂದರೆ ಯಾರು ಸರ್ಕಾರವನ್ನು, ಕಾಂಗ್ರೆಸ್ ಅನ್ನು ಬೆಂಬಲಿಸುತ್ತಾರೋ ಅವರಿಗೆ ಸರ್ಕಾರಿ ಜಾಹೀರಾತು ನೀಡುವುದು ಹಾಗೂ ಯಾರು ಅವರ ನಡೆಯನ್ನು ಟೀಕಿಸುತ್ತಾರೋ ಅವರಿಗೆ ಸರ್ಕಾರಿ ಜಾಹೀರಾತು ನೀಡದೆ ತಾರತಮ್ಯ ಧೋರಣೆ ಅನುಸರಿಸುತ್ತಿರುವುದು ಇಲ್ಲಿ ಎದ್ದು ಕಾಣುವ ಅಂಶ. ಇದು ಖಂಡನೀಯ.

ಹಿಂದೆ ಬಿಜೆಪಿ ಸರ್ಕಾರವಿದ್ದಾಗ ಬಿಜೆಪಿ ಸರ್ಕಾರದ ಮೇಲೆ ಪತ್ರಿಕೆಗಳಿಗೆ ಜಾಹೀರಾತು ನೀಡುವಲ್ಲಿ ತಾರತಮ್ಯ ಧೋರಣೆ ಅನುಸರಿಸಲಾಗುತ್ತಿದೆ ಎಂದು ಆಪಾದನೆ ಮಾಡಿದ್ದ ಅದೇ ಮಂದಿ, ಈಗ ಅದೇ ನೀತಿ ಅನುಸರಿಸುತ್ತಿರುವುದು ಸಮ ಸಮಾಜದ ಧೋರಣೆಗೆ ವಿರುದ್ಧ. ಸರ್ಕಾರ ಜಾಹೀರಾತಿಗಾಗಿ ನೂರಾರು ಕೋಟಿ ಗಳನ್ನು ಖರ್ಚು ಮಾಡುತ್ತದೆ. ಸರ್ಕಾರ ಎಲ್ಲಾ ಪತ್ರಿಕೆಗಳಿಗೂ ಜಾಹಿರಾತು ನೀಡದೆ ತನ್ನ ಹೊಗಳು ಭಟ್ಟರಿಗೆ ಮಾತ್ರ ಜಾಹೀರಾತು ನೀಡುವುದು ಸರಿಯಲ್ಲ. ಎಲ್ಲವನ್ನೂ ಜನರು ತೀರ್ಮಾನಿಸುತ್ತಾರೆ. **–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.**

ಭಾರತದ ಮಹಾನ್ ಪುತ್ರ ರತನ್ ಟಾಟಾ



ಮಾನ್ಯರೆ,

ಭಾರತ ತನ್ನ ಮಹಾನ್ ಪುತ್ರನನ್ನು ಕಳೆದುಕೊಂಡಿರುವುದು ತುಂಬಾ ನೋವಿನ ಸಂಗತಿ. ಸಿರಿವಂತ ಸರಳ ಜೀವಿ. ಇಂತಹ ಮಹಾನ್ ಸಾಧಕ ಪುತ್ರನಿಗೆ ಭಾರತ ರತ್ನ ಗೌರವ ಸಿಗದಿರುವುದು ಭಾರತೀಯರಾದ ನಮಗೆ ತುಂಬಾ ವಿಷಾದದ ಸಂಗತಿ. ಇದಕ್ಕೆ ಕಾರಣರಾದ ನಮ್ಮ ದೇಶವನ್ನು ಆಳಿದ ಪ್ರತಿಯೊಬ್ಬರೂ ತಲೆ ತಗ್ಗಿಸುವಂತದ್ದು. ಮುಂದಿನ ದಿನಗಳಲ್ಲಿ ನಮ್ಮ ಭಾರತ ಸರ್ಕಾರ ಅವರಿಗೆ ಭಾರತ್ನ ರತ್ನ ಗೌರವ ಕೊಟ್ಟು ಸತ್ಕರಿಸಿದರೂ, ಅವರ ಜೀವಿತಾವಧಿಯಲ್ಲಿ ನೀಡದೆ ಅವರ ಮರಣಾ ನಂತರ ನೀಡಿದರೆ ಏನು ಪ್ರಯೋಜನ. 10,000 ಕೋಟಿ ಆದಾಯ ಹೊಂದಿದ್ದ ಟಾಟಾ ಸಮೂಹ ಸಂಸ್ಥೆಯನ್ನು 30 ಲಕ್ಷ ಕೋಟಿಗೆ ಏರಿಸಿರುವುದರಲ್ಲಿ ಇವರ ಪಾತ್ರ ಪ್ರಮುಖವೇ ಸರಿ. ಟಾಟಾ ಉದ್ಯಮ ಸಮೂಹ ಒಟ್ಟಾರೆ 10 ಲಕ್ಷಕ್ಕೂ ಹೆಚ್ಚಿನ ಜನರಿಗೆ ಉದ್ಯೋಗ ನೀಡಿರುವುದು ತುಂಬಾ ಶ್ಲಾಘನೀಯ. ಇಂತಹ ಲೋಕೋಪಕಾರಿ ಉದ್ಯಮ ರತ್ನ, ಇವರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತನು ಕರುಣಿಸಲಿ, ಓಂ ಶಾಂತಿಃ, ಹೋಗಿ ಬನ್ನಿ ಸರ್.

–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.

ಕಲಾಮಂದಿರವೋ, ಬಾಡೂಟ ಮಂದಿರವೋ...?

ಮಾನ್ಯರೆ,

ಮೈಸೂರು ನಗರದ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳ ಕೇಂದ್ರಬಿಂದು, ಮೈಸೂರು ನಗರಕ್ಕೆ ಮುಕುಟ ಮಣಿಯಂತಿರುವ ಕಲಾಮಂದಿರದಲ್ಲಿ ಕಳೆದ ಗುರುವಾರ ರಾತ್ರಿ ಆಯೋಜಿಸಿದ್ದ, ಈ ವರ್ಷದ ದಸರಾ ಸಾಂಸ್ಕೃತಿಕ ಉಪಸಮಿತಿ ಅಧಿಕಾರೇತ ಸದಸ್ಯರ ಅಭಿನಂದನಾ ಕಾರ್ಯಕ್ರಮದ ನೆಪದಲ್ಲಿ ದಸರಾ ಸಮಿತಿಯ ಅಧಿಕಾರಿಗಳು ಬಾಡೂಟದ ವ್ಯವಸ್ಥೆ ಮಾಡಿದ್ದು, ತೀರಾ ನಾಚಿಕೆಗೇಡಿನ ಸಂಗತಿ.

ಕಲಾಮಂದಿರದಲ್ಲಿ ಎಲ್ಲಾ ಜನಾಂಗದವರು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತಾರೆ ಎಂಬ ಕನಿಷ್ಠ ಜ್ಞಾನವೂ ಅಧಿಕಾರಿಗಳಿಗೆ ಇರಲಿಲ್ಲವೇ? ನಾವು ಏನೇ ಮಾಡಿದರೂ ಯಾರೂ ಕೇಳುವುದಿಲ್ಲ ಎಂಬ ಉದ್ಧಟತನವೇ? ಕಲಾಮಂದಿರವೇನೂ ಕಲ್ಯಾಣ ಮಂಟಪವೇ? ಅಥವಾ ಬಾಡೂಟ ಮಂದಿರವೆ?

ಕಳೆದ ಕೆಲವು ವರ್ಷಗಳ ಹಿಂದೆ ಕಾರ್ಯಕ್ರಮ ನಿರೂಪಿಸಿದ್ದವರು ಮಾಂಸದೂಟ ಏರ್ಪಡಿಸಿದ್ದಾಗ, ನಗರದ ಅನೇಕ ಸಾಹಿತಿಗಳು, ಕಲಾವಿದರು, ಸಾರ್ವಜನಿಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಹೀಗಾಗಿ ಇಲ್ಲಿ ಯಾವುದೇ ರೀತಿಯ ತಿಂಡಿ–ಊಟದ ವ್ಯವಸ್ಥೆ ಮಾಡುವುದಕ್ಕೂ, ಅವಕಾಶ ಇರಲಿಲ್ಲ, ಆದರೆ ಕಲಾಮಂದಿರದ ಹೊರಗೆ ಸಸ್ಯ ಆಹಾರಕ್ಕೆ ಮಾತ್ರ ಅವಕಾಶ ಕೊಡುತ್ತಿದ್ದರು, ಆದರೆ ಈಗ ಮಾಂಸದೂಟಕ್ಕೂ ಅವಕಾಶ ನೀಡಿರುವುದು ಅಧಿಕಾರಿಗಳ ಬೇಜವಾಬ್ದಾರಿತನಕ್ಕೆ ಸಾಕ್ಷಿ,

ಈಗ, ಸಾರ್ವಜನಿಕರು, ಕಲಾವಿದರು, ಸಾಹಿತಿಗಳು ಇದನ್ನು ಪ್ರತಿಭಟಸದಿದ್ದರೇ ಮುಂದೊಂದು ದಿನ ಇದೇ ಕಲಾಮಂದಿರದಲ್ಲಿ ಮದ್ಯ ಸೇವನೆಗೂ ಅವಕಾಶ ಕಲ್ಪಿಸಿ ಕಲಾಮಂದಿರವನ್ನೇ ನಾನ್‌ವೆಜ್ ಕಲ್ಯಾಣ ಮಂಟಪ ಮಾಡುತ್ತಾರೆ, ಇಂತಹ ಅಧಿಕಾರಿಗಳಿಗೆ ಸ್ವಲ್ಪವಾದರೂ ಪರಿಜ್ಞಾನ ಇಲ್ಲವೇ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಕೈಲಿರುವ ಗಡಿಯಾರ ನಮ್ಮದೇ ಆದರೆ ತೋರುವ ಸಮಯ ನಮ್ಮದಲ್ಲ!


ಪರಮೇಶ ಕೆ.ಉತ್ತನಹಳ್ಳಿ
ಕನ್ನಡ ಸಹಾಯಕ ಪ್ರಾಧ್ಯಾಪಕ,
ಮೊ: 77958 62281

ಕಾಲವೆಂಬುದು ನಿತ್ಯವೂ ಹಣ ನೀಡದೆ ನಮಗೆ ಲಭ್ಯವಾಗುವ, ಪ್ರತಿ ದಿನದ ಹಗಲು–ರಾತ್ರಿಗಳ ರೂಪದ ಒಟ್ಟು ಮೊತ್ತವಾಗಿದೆ. ಕಲಾಕೌತುಕದಲ್ಲಿ ಸದಾ ನಮ್ಮನ್ನು ಕಾಡುವ ಎರಡು ವಿಶಿಷ್ಟವಾದ ಪದಕಮಲಗಳು ಒಂದು ಸಮಯ, ಮತ್ತೊಂದು ಸಾವು. ಸಾವು ಕೊನೆಯ ಸತ್ಯವಾದರೆ, ಸಮಯ ಮಾತ್ರ ಅಗೋಚರ–ಅಮೂರ್ತ–ನಿರಾ ಕಾರ–ನಿರ್ಗುಣ. ಸಮಯ ಎಂಬ ಮೂರಕ್ಷರದ ಪದ ಇಡೀ ಜಗತ್ತನ್ನು ತನ್ನ ಕಪಿಮುಷ್ಟಿಯಲ್ಲಿ ಸೆರೆಹಿಡಿದು ಬಂಧಿಸಿದೆ.

ಗಾಳಿಯೊಂದಿಗೆ ಪೈಪೋಟಿ ಒಡ್ಡುವ, ಮನದೊಂದಿಗೆ ಸ್ಪರ್ಧೆಗೆ ಇಳಿಯುವ ಸಮರ ಸಿಂಹವೇ ಈ ಕಾಲ. ಈ ಕಾಲ ತನ್ನ ನೀಳಕಾಲನ್ನು ನಿಡುದಾಗಿ ಹಾಸಿ ಅರಿವಿಲ್ಲದಂತೆ, ಖರ್ಚಾಗುತ್ತಿದ್ದರೆ ವ್ಯರ್ಥವಾಗಿ, ನಡೆದಾಡುತ್ತಿದ್ದರೆ ಲೆಕ್ಕಕ್ಕೆ ಸಿಗದಂತೆ ಸವೆದು ಹೋಗುತ್ತದೆ. ಯಾರಾದರೂ ಮೋಸ ಮಾಡಬಹುದು, ತಾರತಮ್ಯ ಮಾಡಬಹುದು. ಆದರೆ, ಸಮಯ ಮತ್ತು ಸಾವು ಮೋಸ ಮಾಡದೆ ತಾರತಮ್ಯ ಭಾವದಿಂದ ಕಾಣದೆ ಎಲ್ಲರಿಗೂ ಸರಿ ಸಮಾನವಾಗಿ ಹಂಚಿಕೆಯಾಗಿದೆ. ರಾಷ್ಟ್ರದ ಅತ್ಯುನ್ನತ ಸ್ಥಾನದಲ್ಲಿರಲಿ ಅವರಿಗೂ ಇಪ್ಪತ್ತ ನಾಲ್ಕು ಗಂಟೆ ಇರುವಂತೆ ಸಾಮಾನ್ಯ ವ್ಯಕ್ತಿಗೂ ಇಪ್ಪತ್ತ ನಾಲ್ಕು ಗಂಟೆಗಳೇ.

ಅಂತೆಯೇ ಅಪಾರ ಸಿರಿತನ–ಹಣವನ್ನು ಹೊಂದಿದ್ದೇನೆ, ತನಗೆ ಸ್ವಲ್ಪ ಅಧಿಕ ಸಮಯ ಮೀಸಲಾಗಿರಬೇಕು ಎಂದು ಬಯಸಿದರೆ ಲಭ್ಯವಾಗದು. ಹಾಗೆಯೇ ಆತ ಬಡವ–ನಿರ್ಗತಿಕ ಅವನಿಗೇತಕೆ ಇಪ್ಪತ್ತನಾಲ್ಕು ಗಂಟೆ ಸ್ವಲ್ಪ ತಗ್ಗಿಸೋಣ ಎಂದು ತೀರ್ಮಾನಗೈದರೆ ಅದೂ ಸಾಧ್ಯವಾಗದು. ಸಾವಿನ ವಿಚಾರವು ಅಷ್ಟೇ ಬಡವನಾಗಲಿ, ಸಿರಿವಂತನಾಗಲಿ ಸಾವಿಗೆ ಒಳಗಾಗುತ್ತಾರೆ. ಈ ಸಮಯ ನಿಲ್ಲದೆ ನಿರಂತರತೆಯಲ್ಲಿ ಚಲಿಸುತ್ತಾ ಅನಾಯಾಸವಾಗಿ ಸರಿದು ಹೋಗುತ್ತಲೇ ಇರುತ್ತದೆ. ಸಂಚರಿಸುವ ಇಂತಹ ಸಂಚಾರಿಯೊಂದಿಗೆ ಸಾಗುತ್ತಲೇ ಹೆಜ್ಜೆ ಹಾಕುವುದು ನಮ್ಮ ಕೆಲಸವಷ್ಟೇ.

ಕೋರಿಕೆಗೆ ಮನಸೋಲದೆ ವಿಚಲಿತವಾಗದೆ ತನ್ನ ಕಾಯಕ ನಿಷ್ಠೆಯಲ್ಲಿ ತೊಡಗುವ ಅಲ್ಲದೇ ಅರಿತವರ ಪಾಲಿಗೆ ಬೆರಗಿನ ಬೆಳಕು, ಅರಿಯದವರ ಪಾಲಿಗೆ ಕತ್ತಲ ಗಾಢಾಂಧಕಾರದ ಗಹ್ವರ. ಈ ಸಮಯವು ಸರಿದು ಹೋಗುತ್ತದೆ ಎಂಬ ಮಾತಿನಲ್ಲಿ ಈ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ ಕಷ್ಟವಾಗಲಿ–ಸುಖವಾಗಲಿ ಕ್ಷಣಿಕ ಮಾತ್ರವಾಗಿದೆ. ಕೆಲವು ಸಮಯದಲ್ಲಿ ಎದುರಾಗುವ ಸಮಸ್ಯೆಗಳು ಸಮಯದ ಮೇಲೆ ಕತ್ತಿ ಮಸೆಯುತ್ತಿರುತ್ತದೆ. ಆಗ ಆ ಸಮಯ ಎದುರುಗೊಂಡ ಸಮಸ್ಯೆಗಳನ್ನು ಒದ್ದು ಪರಿಹಾರಗಳನ್ನು ಹೊತ್ತು ತಂದು ನಿಲ್ಲಿಸುತ್ತದೆ. ಆ ಪರಿಹಾರಗಳು ಶಾಶ್ವತವೇ? ಅವು ನೀರ ಮೇಲಣ ಗುಳ್ಳೆ ಎದ್ದ ನೀರ ಪರದೆಯಲ್ಲಿ ಅಂತ ರ್ಧಾನ.

ಈಗಿರುವಲ್ಲಿ ಬದುಕುತ್ತಿರುವ ಜೀವರಾಶಿಗಳನ್ನು ಕಟ್ಟಿಹಾಕಿ ಹಾರುತ್ತಿರುವ ಸ್ವಚ್ಛ – ಸ್ವತಂತ್ರ ಹಕ್ಕಿಯ ರೆಕ್ಕೆಗಳನ್ನು ಕಡಿದು ಹಾಕುವಂತೆ ಸಾವಿನ ಕರೆಯೋಲೆ ಸಮಯಕ್ಕೆ ಹೆಚ್ಚು ಮೌಲ್ಯವನ್ನು ಒದಗಿಸಿದೆ. ಗಡಿಯಾರದ ಮುಳ್ಳುಗಳಾಗಲಿ, ಕಾಲಚಕ್ರದ ನಡಿಗೆ ಎಂದಿಗೂ ಹಿಮ್ಮುಖವಾಗಿರದೆ ಮುಂದೆ ಸಾಗುವ ಚಲನಶೀಲತೆಯನ್ನು ಒಳಗೊಂಡಿದೆ. ಅದು ಸಾಗುತ್ತಿರಲಾಗಿ ಮುಂದಿನ ಹೆಜ್ಜೆಯನ್ನು ತಿಳಿಯಲಾಗದೆ ಕಾಲದೊಂದಿಗೆ ಕೆಲವು ವೇಳೆ ಹೊಂದಾಣಿಕೆ ಮಾಡಿಕೊಂಡು ಇನ್ನೂ ಕೆಲವು ವೇಳೆ ಸಮರಕ್ಕೆ ನಿಂತು ತಾನೇ ಸೋತಾಗ ಒಪ್ಪಂದ ಮಾಡಿಕೊಂಡು ಬದುಕಿನ ಗಾಲಿಯನ್ನು ಮುನ್ನಡೆಸಬೇಕಾಗುತ್ತದೆ.

ನೀರವ ಮೌನದಿ ನಿದಿರೆಯ
ದೇವತೆ ಜೋಗುಳವಾಡಲು
ಅಲ್ಲೊಂದು ಗೋಡೆಗೆ ನೇತು ಹಾಕಿರುವ,
ತನ್ನ ಗಡಿಯೊಳಗೆ ಎಲ್ಲರನು ಬಂಧಿಸಿರುವ
ಗಡಿಯಾರದ ಟಿಕ್ ಟಿಕ್ ಟಿಕ್
ರಚ್ಚೆ ಹಿಡಿಸುವ ಶಬ್ದ,
ಕೋಪಕೆ ಎಳೆದು–ಸಿಟ್ಟಿಗೆ ನೂಕಿದ
ಈ ಗಡಿಯಾರವನ್ನು ಕುಕ್ಕಿ ಕುಸುರಿ ಹಾಕುವ
ಎಂದು ಐದಾರು ಬಾರಿ ಪ್ರಯತ್ನಿಸಿದೇನು
ಆದರೂ ಯಾಕೋ ಕಾಲದ ಮುಳ್ಳುಗಳು
ನನ್ನನ್ನು ಚುಚ್ಚಿ ಚುಚ್ಚಿ ಕುಟುಕಿ ಮಾತಾಡಿಸುತ್ತಿದ್ದವು,
ಎದೆಯನ್ನು ಬಗೆದಂತೆಯೇ ನನ್ನೊಳ ಭಾವನೆ,
ಏಕೆ ಹೀಗೆ ಕಾಲ ನಿಲ್ಲದೆ ಎಲ್ಲರ
ಎದೆಯ ಬಡಿತವನ್ನು ಏರಿಸಿ ಹೀಗೆ ದೌಡಾಯಿಸುತ್ತಿದೆ,
ಅವರಿವರೆನ್ನದೆ ಏಕಚಿತ್ತದಿ ಒಕ್ಕೊರಳ ಬೆಸೆದು
ಸಮ ಸಮಾಜದ ಹೊಸ್ತಿಲಲ್ಲಿ ಗಸ್ತು ಹೊಡೆಸಿ,
ತನ್ನ ತೆಕ್ಕೆಯಲ್ಲಿ ಎಲ್ಲರನ್ನು ಬಗ್ಗು ಬಡಿಯುತ್ತಿದೆ,
ಇರುವಂತೆ ಇದ್ದು ಅಗಾಧ ಜೀವನ ಪಾಠವ ಬೋಧಿಸಿ
ಕಲಿಸುವ ಕಾಲ ಇದು, ಕಾಲ ಮೇಲೆ ಕಾಲು ಹಾಕಿ
ಕುಳಿತಿರುವ ಕಲಿಗಾಲ, ಕಾಲಕ್ಕೆ ಕಾಲಿಲ್ಲ ಆದರೂ
ನಿಲ್ಲದೆ ಮುಂದೆ ನಡೆದೋ ಇಲ್ಲವೇ ಮುಂದೆ
ಹರಿದೋ ಸಾಗುವುದು ಅದರ ಗುಣ.
'ಗಡಿ–ಯಾರ ಮನೆಯೊಳಗೆ, ಗಡಿಯೊಳಗೆ
ಇದ್ದರೂ ಒಮ್ಮೆ ಸ್ಮಶಾನದ ಊರಿಗೆ ಗಡಿಪಾರು
ಮಾಡುವುದದು ಎಂದಳು ನನ್ನವ್ವ ಸಾಕವ್ವ'

ನಮ್ಮ ಕೈಲಿರುವ ಗಡಿಯಾರ ನಮ್ಮದೇ. ಆದರೆ ಗಡಿಯಾರ ತೋರುವ ಸಮಯ ನಮ್ಮದಲ್ಲ. ಈ ಜಗತ್ತಿನಲ್ಲಿ ಸಮಯವನ್ನು ನೋಡಿ ಊಟ ಮಾಡುವ, ಕೆಲಸ ಮಾಡುವ, ಏಕೈಕ ಪ್ರಾಣಿ ಎಂದರೆ ಅದು ಮನುಷ್ಯ ಮಾತ್ರ ಹಾಗಾಗಿ ಆತನ ಬದುಕಿನಲ್ಲಿ ಸಮಯ ಬಲು ಪ್ರಧಾನ ಮತ್ತು ಮೌಲ್ಯಯುತವಾದ ಗಣ್ಯ ಪಾತ್ರವನ್ನು ವಹಿಸುತ್ತದೆ. ಸಮಯವನ್ನು ಪೌರಾಣಿಕ ಪಾತ್ರಗಳಾದ ಕೃಷ್ಣ–ಅರ್ಜುನರು ಸಮಯದ ಬಗ್ಗೆ ಚರ್ಚಿಸುವ, ಅದರಿಂದ ಹೊಮ್ಮುವ ಸಂದೇಶದ ಕಡೆ ನಾವು ಗಮನಹರಿಸಬೇಕು.

ಅರ್ಜುನನು ಕೃಷ್ಣನಿಗೆ ಗೋಡೆ ಯಲ್ಲಿನ ಸಂತೋಷ ಮತ್ತು ದುಃಖದ ಪ್ರಶ್ನೆಯನ್ನು ಹೇಳಿಕೊಂಡಾಗ ಕೃಷ್ಣನು ಹೇಳುವ ಮಾತು ನಮ್ಮ ಕಣ್ಣಿನ ಮೇಲೆ ಬಿದ್ದಿರುವ ಪೊರೆಯನ್ನು ಸರಿಸಿ ಜ್ಞಾನದ ಬೆಳಕನ್ನು ಮಿಂಚಿಸುತ್ತದೆ. ಯಾವುದೇ ಕಷ್ಟ–ನಷ್ಟಗಳು, ದುಃಖ–ದುಮ್ಮಾನಗಳು, ನಲಿವು–ಸಂತಸದ ಕ್ಷಣಗಳ ಹೊತ್ತು ತರುವ ಸಮಯ ಸರಿದು ಹೋಗುತ್ತದೆ ಎಂಬರ್ಥದ 'ಈ ಸಮಯ ಕಳೆದು ಹೋಗುತ್ತದೆ' ಎಂಬ ಅದ್ಭುತ ವಿದ್ಯುತ್ ವಾಣಿಯ ಮೂಲಕ ಸಮಯದ ಅನನ್ಯತೆಯನ್ನು–ಅಮೂ ಲ್ಯತೆಯನ್ನು ಸಾರಿ ಹೇಳುತ್ತಾನೆ. ದುಃಖದಲ್ಲಿರುವವರು ಈ ಸಮಯ ಬೇಗ ಕಳೆದು ಹೋಗಲಿ ಎಂದು ಬಯಸಿದರೆ ಸಂತೋಷದಲ್ಲಿದ್ದವರು ಸಂತೋಷ ಇಷ್ಟು ಬೇಗ ಮುಗಿದು ಹೋಯಿತೇ ಎಂದು ಬೇಸರಪಡುತ್ತಾರೆ. ಆದರೆ ಸಮಯ ಹೇಗಿದ್ದರೂ ಕಳೆದು ಹೋಗುತ್ತದೆ. ಆದರೆ ಕಳೆದು ಹೋಗುತ್ತಿರುವ ಸಮಯವನ್ನು ಹೇಗೆ ಅರ್ಥಪೂರ್ಣವಾಗಿ ಬಳಸಿಕೊಳ್ಳಬಹುದು ಎಂಬುದನ್ನು ಮಾನವನ ಬುದ್ಧಿವಂತಿಕೆಗೆ ಬಿಟ್ಟದ್ದು. ಕೃಷ್ಣನ ಈ ಮಾತಿನಲ್ಲಿ ಮತ್ತೊಂದು ಅರ್ಥವು ಹೊಳೆಯಿಸುತ್ತದೆ. ಅದೇನೆಂದರೆ ಏನಾದರು ಸಾಧಿಸುವುದಾದರೆ ಇಂದೇ ಸಾಧಿಸು, ನಾಳೆ ಶಾಶ್ವತವಲ್ಲ.



> **ಸಮಯ ಹೇಗಿದ್ದರೂ ಕಳೆದು ಹೋಗುತ್ತದೆ. ಆದರೆ ಕಳೆದು ಹೋಗುತ್ತಿರುವ ಸಮಯವನ್ನು ಹೇಗೆ ಅರ್ಥಪೂರ್ಣವಾಗಿ ಬಳಸಿಕೊಳ್ಳಬಹುದು ಎಂಬುದು ಮಾನವನ ಬುದ್ಧಿವಂತಿಕೆಗೆ ಬಿಟ್ಟದ್ದು. ಕೃಷ್ಣನ ಈ ಮಾತಿನಲ್ಲಿ ಮತ್ತೊಂದು ಅರ್ಥವು ಹೊಳೆಯುತ್ತದೆ. ಅದೇನೆಂದರೆ ಏನಾದರು ಸಾಧಿಸುವುದಾದರೆ ಇಂದೇ ಸಾಧಿಸು, ನಾಳೆ ಶಾಶ್ವತವಲ್ಲ.**

ವರುಷವೆಂದು ಅರಿಯೆನು, ಮಾಸವೆಂದು ಅರಿಯೆನು,
ದಿನವೆಂದು ಅರಿಯೆನು, ಹಗಲೆಂದು ಅರಿಯೆನು,
ಇರುಳೆಂದು ಅರಿಯೆನು, ತಾಸು–ಗಳಿಗೆಯೆಂದು ಅರಿಯೆನು,
ನಿಮಿಷವೆಂದು ಅರಿಯೆನು, ಕ್ಷಣವೆಂದು ಅರಿಯೆನು,
ಘಟನೆಗಳ ಎಣೆದು, ಸಂಗತಿಗಳ ಬೆಸೆದು,
ವಾಸ್ತವಗಳ ಸುರುಳಿಯಲ್ಲಿ ಒಂದಷ್ಟು ನರಳಿ,
ಎದುರಾಗುವ ನಲಿವುಗಳಿಂದ ಅರಳಿದಂತೆ,
ಕಾಲನು ಒಮ್ಮೊಮ್ಮೆ ಕೆರಳುವುದು ಇದ್ದೇ ಇದೆ,
ಮರಳಿ ಬಾರದೆ ಉರುಳುವಲ್ಲಿ ಗಂಟೆಯು ಗತಿಸಿ,
ಗತವೈಭವವ ಇತಿಹಾಸದಿ ಸೃಜಿಸಿ,
ಏನು ಮಾಡಲಾಗದ ಮನವ ಮತಿಭ್ರಮೆಗೊಳಿಸಿ
ಕಾಲವಾಗಿಸುವ ಕಾಲದ ಈ ಪರಿಯ
ಸೊಬಗಿನ ಭಾವವನ್ನು ಇನ್ನಾವುದರೊಳು
ಕಾಣಲರಿಯೆನು.
'ಕಾಲವು ನಿಲ್ಲುವುದಿಲ್ಲ ಹಗಲೆನ್ನದೆ– ರಾತ್ರಿಯೆನ್ನದೆ
ನಿಚ್ಚ ಬೆಳಗುವ ಬೆಳಕು ಎಂದಳು ನನ್ನವ್ವ ಸಾಕವ್ವ'

ಕಾಲ ಕುರಿತಾದ ನನ್ನ ಮನದಲ್ಲಿ ಅರಳಿದ ಕವನದಂತೆಯೇ ವರಕವಿ ದ.ರಾ. ಬೇಂದ್ರೆಯವರು ಕಾಲವನ್ನು ಹಕ್ಕಿಗೆ ಹೋಲಿಸಿದರೆ, ಗಂಗಾಧರ ಚಿತ್ತಾಲರು ಹರಿವ ನೀರಿದು ಎಂದು ನೀರಿಗೆ ಸಮೀಕರಿಸಿದ್ದಾರೆ. ಚೆನ್ನವೀರ ಕಣವಿಯವರು ಕಾಲ ನಿಲ್ಲುವುದಿಲ್ಲ ಎಂಬ ಕಾವ್ಯ ಕಟ್ಟಿದ್ದಾರೆ. ಅಲ್ಲದೆ ಜಿ.ಎಸ್. ಶಿವರುದ್ರಪ್ಪ ಮಬ್ಬಿನಿಂದ ಮಬ್ಬಿಗೆ ಪದ್ಯದಲ್ಲಿ ಒಂದು ದಿನದ ಕಾಲಗಣನೆಯಲ್ಲಿ ಮನುಷ್ಯನ ಹುಟ್ಟಿನಿಂದ ಚಟ್ಟದೊಂದಿಗೆ ಘಟಿಸುವ ಘಟನೆಗಳ ಸಾಲಂಕೃತ ಸಾಲುಗಳು ನಿಜಕ್ಕೂ ಅದ್ಭುತ ಸಮಯ ಎಂಬ ಮೂರಕ್ಷರದ ಪದ ಇಡೀ ಜಗತ್ತನ್ನು ತನ್ನ ಕಪಿಮುಷ್ಟಿಯಲ್ಲಿ ಸೆರೆಹಿಡಿದು ಬಂಧಿಸಿದೆ. ಗಾಳಿಯೊಂದಿಗೆ ಪೈಪೋಟಿ ಒಡ್ಡುವ, ಮನದೊಂದಿಗೆ ಸ್ಪರ್ಧೆಗೆ ಇಳಿಯುವ ರೂಪವೇ ಕಾಲ. ರಾಷ್ಟ್ರದ ಪ್ರಧಾನಮಂತ್ರಿ ಅವರಿಗೂ ಇಪ್ಪತ್ತ ನಾಲ್ಕು ಗಂಟೆ ಇರುವಂತೆ ಸಾಮಾನ್ಯ ವ್ಯಕ್ತಿಗೂ ಇಪ್ಪತ್ತ ನಾಲ್ಕು ಗಂಟೆಗಳೇ. ಅಂತೆಯೇ ಅಪಾರ ಸಿರಿತನ–ಹಣವನ್ನು ಹೊಂದಿದ್ದೇನೆ ತನಗೆ ಸ್ವಲ್ಪ ಅಧಿಕವಾಗಿ ದಕ್ಕಬೇಕು ಎಂದು ಬಯಸಿದರೆ ಲಭ್ಯವಾಗದು.

ಸತ್ತ ನೆನ್ನೆಯ ಹೊತ್ತು ಈಗದುವು
ಉಳಿದಿಲ್ಲ ಲವಲೇಶ,
ನಾಳೆ ಬರಲಿಹುದು ಅದುವೇ ಮರೀಚಿಕೆಯ ಸಂಪತ್ತು,
ಈ ಕ್ಷಣದ ಹೊತ್ತು ನಮಗದುವೇ ಕೈಯಲ್ಲಿನ ಸೊತ್ತು,
ಕುಂಟು ನೆಪಗಳ ಹೂಡಿ ದೂಡದಿರು ಕಾರ್ಯಗಳ
ಮುಂದಿನ ಅವಧಿಗೆ,
ನಾಳೆ ಮಾಡುವ ಸಕಾರ್ಯಗಳ ಇಂದು ಮಾಡು,
ಇಂದು ಮಾಡುವ ಸಭ್ಯ ಕಾರ್ಯಗಳ
ಈಗಲೇ ಮಾಡು,
ಬೆಂಕಿಯು ನಾಲೆಗೆ ಸುಡುತ ಭಸ್ಮವ ಮಾಡುತಿರೆ;
ವಿಪತ್ತಿನ ಬಲೆಯಲ್ಲಿ ಸಿಲುಕಿದವನ ನಾಳೆ
ರಕ್ಷಿಸುವ ಕನಸು
ಮತಿಗೇಡು, ಅಪಘಾತದಿ ನೊಂದು ನರಳುತಿಹ
ವ್ಯಕ್ತಿಯ ಕಂಡು
ನಾಳೆ ಕರೆದೊಯ್ಯುವೇ ದವಖಾನೆಗೆ ಎನ್ನುವವನು
ಬಲುಮೂರ್ಖನೇ ಸರಿ, ಕಾಲು ಜಾರಿ ನೀರಿನಲಿ
ಮುಳುಗುತಿರುವವನ ನೋಡಿ ಈಜು ಕಲಿತು ನಾಳೆ
ಕಾಪಾಡುವೆನೆಂದರೆ ಉಳಿಯದು ಜೀವಸೆಲೆ; ಅದು
ಹುರುಳಿಲ್ಲದ ತರ್ಕ.

ಅವಸರದ ಹೆಜ್ಜೆಯ ಮೇಲೆ ಸಾಗುವ ಕೊರಳುಗಳು ಜೀವಕೋಶದಲ್ಲಿ ಭಾವಕೋಶವನ್ನು ಇರಿಸಿಕೊಂಡು ಪ್ರತಿ ಬಾಂಧವ್ಯದ ಎಳೆಗಳಿಗೆ ಸಮಯವ ಕೊಟ್ಟು ಸ್ಪಂದನೀಯ ಗುಣವನ್ನು ಹೊಂದಬೇಕು. ಎಲ್ಲವನೂ ಖರೀದಿಸುವ ಕೋಟಿಯ ಹಣವಂತ ಸಮಯವನಂತೂ ಕೊಂಡುಕೊಳ್ಳಲು ಸಾಧ್ಯವಿಲ್ಲ. ಸಮಯವನ್ನು ನಿಲ್ಲಿಸಲಾಗದು ಅಂತೆಯೇ ವೇಗದಿ ನೂಕಲು ಸಾಧ್ಯವಾಗದು. ಸಮಯ ಇರುವಾಗಲೇ ಎಲ್ಲರನ್ನು ಕರುಣೆಯಿಂದ ಕಾಣೋಣ, ಅಕ್ಕರೆಯಿಂದ ಅಪ್ಪಿಕೊಳ್ಳೋಣ, ಖುಷಿಯಿಂದ ಸ್ವಾಗತಿಸೋಣ, ನಗುವಿನಿಂದ ನಮಿಸೋಣ, ನಲಿವಿನಿಂದ ಆರಾಧಿಸೋಣ, ಹಿಂದಣ ಹೆಜ್ಜೆಯನ್ನು ಸ್ಮರಿಸುತ್ತಾ ಮುಂದಣ ಹೆಜ್ಜೆಗಳನ್ನು ಇಡುತ್ತಾ ಉಳಿದಿರುವ ಅಲ್ಪ ಆಯುಷ್ಯವನ್ನು, ಕ್ಷಣಗಳನ್ನು ಅಲಕ್ಷಕ್ಕೆ ಒಳಗು ಮಾಡದೆ ಸದ್ವಿನಿಯೋಗದಲ್ಲಿ ಬದುಕಿದ್ದೇ ಆದರೆ ಬೆಳಕು ಹಾದಿಯ ಹಾಸಿ ನಮ್ಮನ್ನು ತುಂಬು ಮಮತೆಯಿಂದ ಬರಮಾಡಿಕೊಂಡು ಸ್ವಾಗತಿಸುತ್ತದೆ.

ನೆನ್ನೆಗೂ–ನಾಳೆಗೂ–ಇಂದಿಗೂ ಬಹಳಷ್ಟು ವ್ಯತ್ಯಾಸ
ಇದೆ, ನೆನ್ನೆ ಜೀವಿಸಬೇಕಾದ ಬದುಕನ್ನು ಇಂದು
ಜೀವಿಸಲಾಗದು, ನಾಳೆ ಬದುಕಬೇಕಾದ ಬದುಕನು
ಇಂದು ಬದುಕಲಾಗದು,
ಇಂದು ಬಾಳಬೇಕಾದ ಬಾಳನು ನೆನ್ನೆಯಾಗಲಿ–
ನಾಳೆಯಾಗಲಿ ಬಾಳಲಾಗದು, ನೆನ್ನೆಯ–ನಾಳೆಗಳು,
ನಾಳೆಯ–ನೆನ್ನೆಗಳು ಇಂದಿಗೆ ಜೊತೆಯಾಗದ
ಮರೀಚಿಕೆಯ ರೂಪಗಳು, ಕಳೆದ ಕ್ಷಣಗಳೆಲ್ಲವನ್ನೂ
ಎದೆಯ ಕದ ತೆರೆದು ಮೂಟೆಗಳಲ್ಲಿ ಭರ್ತಿ ಮಾಡಿ
ಭದ್ರವಾಗಿ ಶೇಖರಿಸಿದ್ದೇನೆ.
ಅನುಭವಗಳನ್ನು ಹೃದಯ ಬಟ್ಟಲಲಿ ತುಂಬಿ
ಕಾಯ್ದಿರಿಸಿದ್ದೇನೆ, ಇನ್ನು ಎಲ್ಲಿಯದು ನೆನ್ನೆಯ ಬದುಕು
ಇನ್ನು ಎಲ್ಲಿಯದು ನಾಳೆಯ ಬದುಕು,
ಬದುಕುವುದಾದರೆ ನೋವಿರಲಿ ನಲಿವಿರಲಿ ಇಂದು
ಈಗಲೇ ಈ ಕ್ಷಣದಲ್ಲಿ– ನಿಜದ ಸಾರ್ಥಕತೆಯಲ್ಲಿ
ಶ್ರೇಷ್ಠವಾಗಿ ಬದುಕಿ ಬಿಡು ಓ ಮನವೇ,
ಎಲ್ಲಿಯದು ನಿನ್ನೊಂದಿಗಿನ ನಂಟು,
ಇನ್ನೆಲ್ಲಿಯದು ಕಾಲ ಕೌತುಕದ ಗಂಟು,
ಕಾಲದೊಂದಿಗೆ ಹೆಜ್ಜೆ ಹಾಕಿದರೆ ಬಾಳು ಬಂಧುರ,
ನೋವುಗಳ ನುಂಗಿ – ಗೋಳುಗಳ ಇಲ್ಲವಾಗಿಸಿ
ನಲಿವುಗಳ ಜೊತೆ ಜೀವಿಸಲು ಬದುಕು ಸುಂದರ...

ಜಂಬೂ ಸವಾರಿಯಲ್ಲಿ ಸ್ವಚ್ಛತೆಗೆ ಆದ್ಯತೆ



ಮೈಸೂರು ಅರಮನೆ ಒಳಗೆ ಆನೆ ಲದ್ದಿ ತೆರವುಗೊಳಿಸುತ್ತಿರುವ ಸ್ವಚ್ಛತಾ ಸೇನಾನಿ.

ಮೈಸೂರು, ಅ.12(ಜಿಎ)–ಜಂಬೂ ಸವಾರಿ ಮೆರವಣಿಗೆಗೆಯಲ್ಲಿ ಸ್ವಚ್ಛತೆಗೆ ಹೆಚ್ಚಿನ ಮಹತ್ವ ನೀಡಿದ್ದು, ಎಲ್ಲಾ ವೃತ್ತಗಳಲ್ಲಿಯೂ 15ಕ್ಕೂ ಹೆಚ್ಚು ಮಂದಿ ಸ್ವಚ್ಛತಾ ಸೇನಾನಿಗಳನ್ನು ನೇಮಿಸಲಾಗಿತ್ತು.

ದಸರಾ ಮಹೋತ್ಸವದ ಮೆರವಣಿಗೆಗೆ ಪ್ರತ್ಯೇಕವಾಗಿ ಪೌರಕಾರ್ಮಿಕರನ್ನು ನೇಮಿಸಲಾಗಿತ್ತು. ಅದರಲ್ಲೂ ಪ್ರಮುಖವಾಗಿ ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಸ್ವಚ್ಛತೆ ನಿರ್ವಹಣೆ ಮಾಡಲು ಪ್ರತಿ ವೃತ್ತದಲ್ಲಿ ನಿಯೋಜಿಸಿದ್ದ ಪೌರಕಾರ್ಮಿಕರು ಕಸ ಬೀಳುತ್ತಿದ್ದಂತೆ ತೆಗೆದು ಹಾಕಿ, ಸ್ವಚ್ಛಗೊಳಿಸಿದರು.

ಮತ್ತೊಂದೆಡೆ ಅರಮನೆಯೊಳಗೆ ನಿಯೋಜನೆಗೊಂಡಿರುವ ಪೌರಕಾರ್ಮಿಕ ಸಿಬ್ಬಂದಿ ಆನೆಗಳ ಲದ್ದಿ ಹಾಕಿದ ತಕ್ಷಣ ತೆರವುಗೊಳಿಸಿ ಕಲಾ ತಂಡ ಮತ್ತು ಸ್ತಬ್ಧ ಚಿತ್ರ ಸಾಗಲು ಅನುವು ಮಾಡಿಕೊಟ್ಟರು.

ಪೌರಕಾರ್ಮಿಕರು ಕಸವನ್ನು ಸಂಗ್ರಹಿಸಿ ಒಂದೆಡೆ ಶೇಖರಿಸಿದ ನಂತರ ಪಾಲಿಕೆಯ ಕಸದ ವಾಹನವನ್ನು ಸ್ಥಳಕ್ಕೆ ತಂದು ಕಸವನ್ನು ತೆಗೆದುಕೊಂಡು ಮೆರವಣಿಗೆ ಸಾಗುವ ರಸ್ತೆಯುದ್ದಕ್ಕೂ ಸ್ವಚ್ಛತೆಯನ್ನು ಕಾಪಾಡಲು ಶ್ರಮಿಸಿದರು.

ಅಸ್ವಸ್ಥರಾದವರ ನೆರವಿಗೆ ಕ್ಷಣಾರ್ಧದಲ್ಲಿ ಧಾವಿಸಿದ ಆಂಬ್ಯುಲೆನ್ಸ್



ಮೈಸೂರು, ಅ.12(ಜಿಎ)–ನೂಕು–ನುಗಲಲ್ಲಿ ಅಸ್ವಸ್ಥರಾದವರ ನೆರವಿಗೆ ಕ್ಷಣಾರ್ಧದಲ್ಲಿ ದೌಡಾಯಿಸಿದ ಆಂಬ್ಯುಲೆನ್ಸ್‌ಗಳು ಜೀವ ರಕ್ಷಕರಾದರು.

ಮೈಸೂರು ಅರಮನೆಯಿಂದ ಬನ್ನಿ ಮಂಟಪದವರೆಗೆ ಸಾಗುವ ಜಂಬೂ ಸವಾರಿಯನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಜನರು ಆಗಮಿಸಿ, ರಸ್ತೆಯ ಇಕ್ಕೆಲಗಳಲ್ಲಿ ಸ್ಥಳ ಹಿಡಿದು ಕುಳಿತುಕೊಳ್ಳುತ್ತಾರೆ. ಅವರು ನೂಕಾಟದಿಂದ ತಪ್ಪಿಸಿಕೊಳ್ಳುವುದೇ ದೊಡ್ಡ ಸಾಹಸ ಈ ನಡುವೆ ಕೆಲವರು ಅಸ್ವಸ್ಥರಾಗುತ್ತಾರೆ. ಅವರಿಗೆ ಆಂಬ್ಯುಲೆನ್ಸ್‌ಗಳು ಸರಿಯಾದ ಸಮಯಕ್ಕೆ ಆಗಮಿಸುವ ಮೂಲಕ ಜೀವ ರಕ್ಷಕರಾಗಿದ್ದಾರೆ. ಕೆ.ಆರ್.ವೃತ್ತದಲ್ಲಿ ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸು ರಸ್ತೆ ಎರಡು ಕಡೆ ನೂರಾರು ಜನರು ದಸರಾ ಕಣ್ತುಂಬಿಕೊಳ್ಳಲು ನೂಕಾಟ ಆರಂಭಿಸಿದರು. ಈ ವೇಳೆ ಕೆಲವು ಮಹಿಳೆಯರು ಸುಸ್ತಾಗಿ ನಿತ್ರಾಣರಾಗಿದ್ದರು. ಅವರನ್ನು ಗಮನಿಸಿದ ಪೊಲೀಸರು ತಕ್ಷಣ ಸ್ಥಳಕ್ಕೆ ಆಂಬ್ಯುಲೆನ್ಸ್ ಕರೆಸಿ, ಆಸ್ಪತ್ರೆಗಳಿಗೆ ರವಾನಿಸಿದರು.

ಮಳೆಯಲ್ಲಿ ಪುಟ್ಟ ಕಂದಮ್ಮಗಳಿಗೆ ರಕ್ಷಕರಾದ ಎನ್‌ಸಿಸಿ ವಿದ್ಯಾರ್ಥಿಗಳು



ಮಳೆಯಲ್ಲಿ ನೆನೆದ ಮಕ್ಕಳ ತಲೆ ಒರೆಸುತ್ತಿರುವ ಎನ್‌ಸಿಸಿ ವಿದ್ಯಾರ್ಥಿ.

ಮೈಸೂರು, ಅ.12(ಜಿಎ)–ಮಳೆಯಲ್ಲಿ ದಸರಾ ವೀಕ್ಷಿಸುತ್ತಿದ್ದ ಪುಟ್ಟ ಕಂದಮ್ಮಗಳಿಗೆ ರಕ್ಷಕರಾಗಿ ಎಲ್ಲರ ಗಮನ ಸೆಳೆಯುವ ಮೂಲಕ ಎನ್‌ಸಿಸಿ ವಿದ್ಯಾರ್ಥಿಗಳು ಮೆಚ್ಚುಗೆಗೆ ಪಾತ್ರರಾದರು. ಜಂಬೂ ಸವಾರಿ ಆರಂಭಗೊಂಡು ಅರಮನೆ ಆವರಣದಿಂದ ನೌಪತ್, ನಿಶಾನೆ ಆನೆಗಳು ಕೋಟೆ ಆಂಜನೇಯ ಸ್ವಾಮಿ ದೇಸ್ಥಾನದ ಬಳಿ ತಲುಪುತ್ತಿದ್ದಂತೆ ಮಳೆಗೆ ಹೆಚ್ಚಾಯಿತು. ಜೊತೆಗೆ ಆನೆ ನೋಡುತ್ತಿದ್ದಂತೆ ಜನರ ಹರ್ಷೋದ್ಗಾರವು ಹೆಚ್ಚಾಯಿತು. ಈ ವೇಳೆ ವಿಶ್ವ ಅಲ್ಬರ್ಟ್ ರಸ್ತೆಯಲ್ಲಿ ನೂಕು ನುಗ್ಗಲು ಹೆಚ್ಚಾಗಿ ಎನ್‌ಸಿಸಿ ವಿದ್ಯಾರ್ಥಿ ಗಳು ಅದನ್ನು ತಡೆಯಲು ಹರಸಾಹಸಪಟ್ಟರು.

ಪೋಷಕರು ಕೆಲವು ಪುಟ್ಟ ಪುಟ್ಟ ಕಂದಮ್ಮಗಳನ್ನು ಕರೆತಂದ ಹಿನ್ನೆಲೆಯಲ್ಲಿ ಮಕ್ಕಳಿಗೆ ಉಸಿರುಗಟ್ಟುವ ಸ್ಥಿತಿ ನಿರ್ಮಾಣ ವಾಗುತ್ತಿದ್ದಂತೆ ಎನ್‌ಸಿಸಿ ವಿದ್ಯಾರ್ಥಿಗಳು ತಮ್ಮ ಸಮಯ ಪ್ರಜ್ಞೆಯಿಂದ ಪುಟ್ಟ ಮಕ್ಕಳನ್ನು ಪೋಷಕರಿಂದ ಪಡೆದು ಸಮಾಧಾನ ಪಡಿಸಿ, ಮಳೆಯಲ್ಲಿ ನೆನೆಯದಂತೆ ರಕ್ಷಿಸಿ ಮಕ್ಕಳ ತಲೆ ಒರೆಸಿ, ಛತ್ರಿ ಕೆಳಗೆ ಕೂರುವಂತೆ ಅವಕಾಶ ಕಲ್ಪಿಸಿ ಕೊಟ್ಟ ದೃಶ್ಯ ಎಲ್ಲರ ಮೆಚ್ಚುಗೆ ಗಳಿಸಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ರಾಜರ ಕಾಲದ ಗತವೈಭವ ಬಿಂಬಿಸಿದ ಯದುವೀರ್ ವಿಜಯ ಯಾತ್ರೆ

ಸಂಪ್ರದಾಯದಂತೆ ಶಮಿ ಪೂಜೆ ನೆರವೇರಿಸಿದ ರಾಜವಂಶಸ್ಥ



ಮೈಸೂರು ಅರಮನೆ ಆವರಣದಲ್ಲಿ ಶನಿವಾರ ಯದುವೀರ್ ಶಮಿ ಪೂಜೆ ನೆರವೇರಿಸಿದರು.

ಮೈಸೂರು, ಅ.12(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ವಿಜಯದಶಮಿ ದಿನವಾದ ಶನಿವಾರ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನಡೆಸಿದ ವಿಜಯಯಾತ್ರೆ ರಾಜರ ಆಳ್ವಿಕೆಯ ಗತವೈಭವ ಹಾಗೂ ವಿಜಯದಶಮಿಯ ವಿಜಯದ ಸಂಭ್ರಮ ಸಾರಿತು.

ಅರಮನೆಯ ಕಲ್ಯಾಣ ಮಂಟಪದಲ್ಲಿ ಶನಿವಾರ ಬೆಳಗ್ಗೆ ಆಯುಧಗಳಿಗೆ ಪೂಜೆ ಸಲ್ಲಿಸಿದ ನಂತರ ಯದುವೀರ್ ಸವಾರಿ ತೊಟ್ಟಿಗೆ ಆಗಮಿಸಿದರು. ಇಲ್ಲಿ ನಡೆದ ವಜ್ರಮುಷ್ಠಿ ಕಾಳಗ ಮುಕ್ತಾಯದ ತರುವಾಯ ಯದುವೀರ್ ವಿಜಯಯಾತ್ರೆಗೆ ಹೊರಟರು.

ರಾಜರ ಕಾಲದ ಕತ್ತಿ, ಗುರಾಣಿ ಸೇರಿದಂತೆ ಇತರೆ ಆಯುಧಗಳನ್ನು ಚಿನ್ನದ ಪಲ್ಲಕ್ಕಿಯಲ್ಲಿಟ್ಟು ಮಂಗಳ ವಾದ್ಯದ ಹಿಮ್ಮೇಳದೊಂದಿಗೆ ಯದುವೀರ್ ಅವರ ವಿಜಯಯಾತ್ರೆ ಆರಂಭವಾಯಿತು.

ಅರಮನೆಯ ಆನೆ ಬಾಗಿಲಿನಿಂದ ಪಟ್ಟದ ಆನೆ, ಪಟ್ಟದ ಕುದುರೆ ಜೊತೆಗೆ ಸಾಗಿದ ವಿಜಯಯಾತ್ರೆ ಮೆರವಣಿಗೆ ಶ್ರೀ ಭುವನೇಶ್ವರಿ ದೇವಸ್ಥಾನಕ್ಕೆ ಆಗಮಿಸಿತು.

ಇಂದು ಬೆಳಿಗ್ಗೆ 11.20 ರಿಂದ 11.40 ಗಂಟೆಗೆ ಸಲ್ಲುವ ಶುಭ ಲಗ್ನದಲ್ಲಿ ಯದುವೀರ್ ಒಡೆಯರ್ ಅರಮನೆ ಆವರಣದಲ್ಲಿರುವ ಬನ್ನಿ ಮರದ ಬಳಿ ಶಮಿ ಪೂಜೆ ನೆರವೇರಿಸಿದರು. ರಾಜರ ಕಾಲದ ಆಯುಧಗಳನ್ನು ಬನ್ನಿಮರದ ಬಳಿ ಇಟ್ಟು ಪೂಜಾ ಕೈಂಕರ್ಯ ಆರಂಭಿಸಿದರು. ಸುಮಾರು 20 ನಿಮಿಷಗಳ ಕಾಲ ನಡೆದ ಈ ಪೂಜಾ ಕಾರ್ಯದಲ್ಲಿ ಧಾರ್ಮಿಕ ವಿಧಿ–ವಿಧಾನದಂತೆ ಯದುವೀರ್ ಒಡೆಯರ್ ಬನ್ನಿ ಮರಕ್ಕೆ ಪೂಜೆ ಸಲ್ಲಿಸಿದರು. ಮಂಗಳವಾದ್ಯದ ಹಿಮ್ಮೇಳದಲ್ಲಿ ಪುರೋಹಿತರು ಮಂತ್ರಗಳನ್ನು ಪಠಿಸಿದರು. ವೃಕ್ಷರಾಜನ ಪೂಜೆಯ ನಂತರ ಅಂತಿಮವಾಗಿ ಅರ್ಚಕರು ಹಾಗೂ ಹಲವು ದೇವಸ್ಥಾನದ ಪುರೋಹಿತರಿಗೆ ಯದುವೀರ್ ಸಾಂಕೇತಿಕವಾಗಿ ಧನವನ್ನು ನೀಡಿದರು. ನಂತರ ಶಮಿ ಪೂಜೆಯ ಪ್ರಸಾದವನ್ನು ಸಾಂಕೇತಿಕವಾಗಿ ಕೆಲವರಿಗೆ ನೀಡಿದರು.

ಚಾಮುಂಡಿಬೆಟ್ಟದಿಂದ ಅರಮನೆ ತನಕ ನಾಡದೇವತೆ ಉತ್ಸವ ಮೂರ್ತಿಯ ಅದ್ಧೂರಿ ಮೆರವಣಿಗೆ

ರಸ್ತೆ ಉದ್ದಕ್ಕೂ ರಂಗೋಲಿ ಚಿತ್ತಾರ, ತಳಿರು–ತೋರಣ ಕಟ್ಟಿ ಹಬ್ಬದ ಸಂಭ್ರಮ

ಮೈಸೂರು, ಅ.12(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಜಂಬೂ ಸವಾರಿಯಲ್ಲಿ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾನಗೊಳ್ಳುವ ನಾಡ ದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಶನಿವಾರ ಚಾಮುಂಡಿ ಬೆಟ್ಟದಿಂದ ಅರಮನೆಗೆ ಅದ್ಧೂರಿ ಮೆರವಣಿಗೆಯಲ್ಲಿ ತರಲಾಯಿತು.

ವಿಜಯ ದಶಮಿ ದಿನವಾದ ಇಂದು ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಮುಂಜಾನೆ 5.30 ಗಂಟೆಗೆ ರುದ್ರಾಭಿಷೇಕ, ಪಂಚಾಮೃತಾಭಿಷೇಕ, ಕುಂಕುಮಾರ್ಚನೆ ಸೇರಿದಂತೆ ಇತರೆ ಪೂಜಾ ವಿಧಾನಗಳನ್ನು ನೆರವೇರಿಸಲಾಯಿತು.

ತರುವಾಯ ದೇವಿಗೆ ಪುಷ್ಪಾಲಂಕಾರ ಮಾಡಿ ವಿಶೇಷ ಪೂಜೆ ನೆರವೇರಿಸಲಾಯಿತು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಹಾಗೂ ಸೊಸೆ ಸ್ಮಿತಾ, ಚಾಮುಂಡೇಶ್ವರಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ನಂತರ ವಿವಿಧ ಪುಷ್ಪದಿಂದ ಅಲಂಕೃತಗೊಂಡಿದ್ದ ಸಾರೋಟಿನಲ್ಲಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿ ಮೆರವಣಿಗೆ ಆರಂಭವಾಯಿತು. ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ಚಾಮುಂಡೇಶ್ವರಿಗೆ ಜೈಕಾರ ಮೊಳಗಿಸಿದರು.

ನಂತರ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿ ಮೆರವಣಿಗೆ ಸಾಗಿತು. ಚಾಮುಂಡಿಬೆಟ್ಟದ ತಪ್ಪಲಿನ ತಾವರೆಕೆರೆ ಬಳಿ ರಸ್ತೆ ಉದ್ದಕ್ಕೂ ರಂಗೋಲಿಯ ಚಿತ್ತಾರ ಬಿಡಿಸಲಾಗಿತ್ತು. ತಳಿರು–ತೋರಣ ಕಟ್ಟಿ ಹಬ್ಬದ ಸಂಭ್ರಮ ಮನೆ ಮಾಡಿತ್ತು.

ಸಾವಿರಾರು ಭಕ್ತರು ನಾಡದೇವತೆಯ ದರ್ಶನ ಪಡೆದು ಧನ್ಯತಾ ಭಾವ ಮೆರೆದರು. ತಾವರೆಕೆರೆಯಿಂದ ಮುನ್ನಡೆದ ಉತ್ಸವ ಮೂರ್ತಿ ಮೆರವಣಿಗೆ ಸಂಗೊಳ್ಳಿ ರಾಯಣ್ಣ ವೃತ್ತ (ಜಾಕಿ ಕ್ವಾಟ್ರಸ್), ರೇಸ್ ಕೋರ್ಸ್ ರಸ್ತೆ, ಕಾರಂಜಿ ಕೆರೆ ರಸ್ತೆ, ಇಟ್ಟಿಗೆಗೂಡು, ದಸರಾ ವಸ್ತು ಪ್ರದರ್ಶನದ ಮೂಲಕ ಅರಮನೆ ತಲುಪಿತು.



ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಚಾಮುಂಡಿ ಬೆಟ್ಟದಿಂದ ಅರಮನೆಗೆ ಅದ್ಧೂರಿ ಮೆರವಣಿಗೆಯಲ್ಲಿ ತರಲಾಯಿತು.

ದಸರಾ ಜಂಬೂ ಸವಾರಿ ಮೆರವಣಿಗೆ ವೀಕ್ಷಣೆ ವೇಳೆ ಸಾವಿರಾರು ಜನ ದರ್ಶನ ಪಡೆಯಲು ಸಾಧ್ಯವಾಗುವುದಿಲ್ಲ. ಅಂತಹವರು ಉತ್ಸವ ಮೂರ್ತಿಯ ಮೆರವಣಿಗೆಯಲ್ಲಿ ನಾಡ ದೇವತೆಯ ದರ್ಶನ ಪಡೆದು ಪುನೀತರಾದರು.

ಮಧ್ಯಾಹ್ನ 12 ಗಂಟೆ ವೇಳೆಗೆ ಉತ್ಸವ ಮೂರ್ತಿ ಮೆರವಣಿಗೆ ಅರಮನೆ ತಲುಪಿತು. ಉತ್ಸವ ಮೂರ್ತಿಯನ್ನು ಆನೆ ಬಾಗಿಲು ಮೂಲಕ ತಂದು ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲಾಯಿತು.

ನಂತರ ಅರ್ಚಕ ವೃಂದ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪನೆಗೊಂಡಿದ್ದ ಶಕ್ತಿ ದೇವತೆಗೆ ಮತ್ತೊಮ್ಮೆ ಪುಷ್ಪಾಲಂಕಾರ ಮಾಡಿದರು. ಹಸಿರು ಸೀರೆಯಲ್ಲಿ ಕಂಗೊಳಿಸುತ್ತಿದ್ದ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು.

ನಂತರ ಚಾಮುಂಡೇಶ್ವರಿ ಉತ್ಸವ ಮೂರ್ತಿ ಪ್ರತಿಷ್ಠಾಪನೆಗೊಂಡಿದ್ದ ಚಿನ್ನದ ಅಂಬಾರಿಯನ್ನು ಅರಮನೆ ಹಿಂಭಾಗಕ್ಕೆ ತಂದು ಕ್ರೇನ್ ಮೂಲಕ ಅಭಿಮನ್ಯು ಮೇಲಿರಿಸಲಾಯಿತು. ಈ ವೇಳೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸೇರಿದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಭಾಗಿಯಾಗಿದ್ದರು.

ರಾಮದಾಸ್ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಂದರ್ಭದಲ್ಲಿ ಚಾಮುಂಡಿ ಬೆಟ್ಟದಿಂದ ಅರಮನೆ ತನಕ ಉತ್ಸವ ಮೂರ್ತಿಯ ಮೆರವಣಿಗೆಯನ್ನು ಆರಂಭಿಸಲಾಯಿತು. ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗಿಯಾಗಿ ನಾಡದೇವತೆಯ ದರ್ಶನ ಪಡೆಯಲು ಸಾಧ್ಯವಾಗದ ಸಾವಿರಾರು ಜನರಿಗೆ ಚಾಮುಂಡೇಶ್ವರಿ ದರ್ಶನ ಮಾಡಲು ಉತ್ಸವ ಮೂರ್ತಿಯ ಮೆರವಣಿಗೆಯನ್ನು ಅಂದು ಆರಂಭಿಸಲಾಯಿತು. ಇದರಿಂದ ಸಹಸ್ರಾರು ಜನರು ಶಕ್ತಿದೇವತೆಯ ದರ್ಶನ ಪಡೆಯಲು ಅನುಕೂಲವಾಗಿದೆ. ಉತ್ಸವ ಮೂರ್ತಿಯ ಮೆರವಣಿಗೆಯ ವೇಳೆ ಪ್ರತಿ ವರ್ಷ ಹಬ್ಬದ ವಾತಾವರಣ ನಿರ್ಮಾಣವಾಗುತ್ತದೆ.

ಅಂಬಾರಿ ಸ್ಥಿರತೆ ಕಾಯ್ದುಕೊಂಡ ಅಭಿಮನ್ಯು

ಪ್ರತಿ ಬಾರಿ ಚಿನ್ನದ ಅಂಬಾರಿಯನ್ನು ಆನೆ ಮೇಲಿರಿಸಿ ಎಷ್ಟೇ ಎಚ್ಚರಿಕೆ ವಹಿಸಿ ಕಟ್ಟಿದರೂ ಅಲ್ಪ–ಸ್ವಲ್ಪ ವಾಲುವುದು ಸಾಮಾನ್ಯವಾಗಿತ್ತು. ಸರಿಯಾಗಿ ಅಂಬಾರಿ ಕಟ್ಟಿಲ್ಲ ಎಂದು ಅರಣ್ಯ ಇಲಾಖೆ ಸಿಬ್ಬಂದಿಯನ್ನು ದೂರಲಾಗುತ್ತಿತ್ತು.

ಕೆಲವು ವರ್ಷದ ಹಿಂದೆ ಅಂಬಾರಿ ತುಂಬಾ ವಾಲಿದ ಕಾರಣ ಅದು ಎಲ್ಲಿ ಕೆಳಗೆ ಬೀಳುವುದೋ ಎಂಬ ಆತಂಕದಿಂದ ಅರಣ್ಯ ಇಲಾಖೆ ಸಿಬ್ಬಂದಿ ಎರಡು ಕಡೆ ಹಗ್ಗ ಕಟ್ಟಿ ನಿರ್ವಹಿಸಿದ ಉದಾಹರಣೆ ಇತ್ತು. ಆದರೆ ಈ ಬಾರಿ ಗಜನಾಯಕ ಅಭಿಮನ್ಯು ಮೇಲೆ ಕೂರಿಸಿದ್ದ ಚಿನ್ನದ ಅಂಬಾರಿ ಸ್ಥಿರವಾಗಿತ್ತು. ಗಾದಿ ಮೇಲೆ ಬಿಗಿಯಾಗಿ ಅಂಬಾರಿ ಕಟ್ಟಲಾಗಿತ್ತು. ಅಂಬಾರಿ ಸಮತಟ್ಟಾಗಿದ್ದರಿಂದ ಅಭಿಮನ್ಯು ಕೂಡ 750 ಕೆ.ಜಿ.ತೂಕದ ಭಾರ ಹೊತ್ತು ಅರಮನೆಯಿಂದ ಬನ್ನಿಮಂಟಪದ ತನಕ ನಿರಾಯಾಸವಾಗಿ ಸಾಗಿ ಸೈ ಎನಿಸಿಕೊಂಡ.

ಪುತ್ರ ಜನನದ ಪುರುಡು ಹಿನ್ನೆಲೆ

ಚಾಮುಂಡೇಶ್ವರಿ ಪುಷ್ಪಾರ್ಚನೆಗೆ ಯದುವೀರ್ ಒಡೆಯರ್ ಗೈರು

ಮೈಸೂರು, ಅ.12(ಬಿಎಲ್‌ಯು) ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಪುತ್ರ ಜನನದ ಪುರುಡು (ಜನನ ಸೂತಕ) ನಿಮಿತ್ತ ಜಂಬೂ ಸವಾರಿ ಮೆರವಣಿಗೆಯಲ್ಲಿ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಕಾರ್ಯದಲ್ಲಿ ಅವರು ಭಾಗಿಯಾಗಿರಲಿಲ್ಲ.

ಯದುವೀರ್ ಪತ್ನಿ ತ್ರಿಷಿಕಾ ಕುಮಾರಿ ಶುಕ್ರವಾರ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ. ಈಗಾಗಲೇ ಕಂಕಣಧಾರಿಯಾಗಿರುವ ಕಾರಣ ಅರಮನೆ ಪೂಜಾ ವಿಧಿ–ವಿಧಾನಕ್ಕೆ ಯದುವೀರ್ ಜನನ ಪುರುಡು ಇರುವುದಿಲ್ಲ.

ಆದರೆ ವಿಜಯ ದಶಮಿ ದಿನದಂದು ವಿಜಯ ಯಾತ್ರೆ ನಡೆಸಿದ ನಂತರ ಸಂಪ್ರದಾಯದಂತೆ ಕಂಕಣ ವಿಸರ್ಜಿಸಬೇಕು. ಕಂಕಣ ವಿಸರ್ಜಿಸಿದ ತಕ್ಷಣ ಪುರುಡು ಅನ್ವಯಿಸುತ್ತದೆ. ಕಂಕಣ ವಿಸರ್ಜನೆ ಮಾಡಿದ ಹಿನ್ನೆಲೆಯಲ್ಲಿ ಪುರುಡು ಅನ್ವಯವಾದ ಕಾರಣ ಯದುವೀರ್ ನಾಡ ದೇವತೆ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಸಂದರ್ಭದಲ್ಲಿ ಗೈರಾಗಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡುವ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸೇರಿದಂತೆ ಇತರರು ಹಾಜರಿದ್ದರು. ವಿಜಯ ದಶಮಿ ಯಂದು ವಿಜಯ ಯಾತ್ರೆ ನಂತರ ರಾಜವಂಶಸ್ಥರು ಕಂಕಣ ವಿಸರ್ಜಿಸುತ್ತಾರೆ. ಮಾರನೆ ದಿನದಂದು ಅರಮನೆ ಆವರಣದಲ್ಲಿರುವ ಸೋಮೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಅಲ್ಲಿ ದೇವರ ದರ್ಶನ ಪಡೆದು ಬೇರೆ ಕಾರ್ಯದಲ್ಲಿ ಮಗ್ನರಾಗುತ್ತಾರೆ.

ಆದರೆ ಯದುವೀರ್‌ಗೆ ಪುತ್ರ ಜನನದ ಪುರುಡು ಇರುವ ಕಾರಣ ನಾಳೆ ಸೋಮೇಶ್ವರ ದೇವಸ್ಥಾನಕ್ಕೆ ಭೇಟಿ ನೀಡುವುದಿಲ್ಲ. ಪುರುಡು ಮುಗಿದ 11ನೇ ದಿನಕ್ಕೆ ಅರಮನೆಯಲ್ಲಿ ಪುಣ್ಯ ಮಾಡಿಸಿದ ನಂತರ ಯದುವೀರ್ ಸೋಮೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸುವರು.

ವಿಜಯದಶಮಿ: ಯದುವೀರ್ ಪೂಜಾ ಕೈಂಕರ್ಯ



ಮೈಸೂರು, ಅ.12(ಬಿಎಲ್‌ಯು)– ಮೈಸೂರು ದಸರಾ ಮಹೋತ್ಸವದ ಕೊನೆಯ ದಿನವಾದ ವಿಜಯ ದಶಮಿಯಂದು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮುಂಜಾನೆಯಿಂದಲೇ ಹಲವು ಪೂಜಾ ಕೈಂಕರ್ಯ ನೆರವೇರಿಸಿದರು. ಇಂದು ಮುಂಜಾನೆ ಎಣ್ಣೆ ಸ್ನಾನ ಮಾಡಿದ ನಂತರ ಯದುವೀರ್, ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಧಾರ್ಮಿಕ ಹಾಗೂ ಸಾಂಪ್ರದಾಯಿಕ ವಿಧಿ ವಿಧಾನದಂತೆ ಪೂಜೆ ನೆರವೇರಿಸಿದರು. ಆಯುಧಗಳಿಗೆ ಪೂಜೆ ಸಲ್ಲಿಸಿದ ನಂತರ ಕುಷ್ಮಂಡ ಚೇತನ (ಕುಂಬಳಕಾಯಿ) ಫಲ ಪೂಜೆ ನೇರವೇರಿಸಿದರು. ಅಂತಿಮವಾಗಿ ವಿಜಯಯಾತ್ರೆ ನಡೆಸಿ ದಸರಾ ಮಹೋತ್ಸವದ ಎಲ್ಲಾ ಕಾರ್ಯಗಳನ್ನು ಯದುವೀರ್ ಪೂರ್ಣಗೊಳಿಸಿದರು.

ಮೈಸೂರು ಅರಮನೆಯಲ್ಲಿ ಮೈನವಿರೇಳಿಸುವ ವಜ್ರಮುಷ್ಠಿ ಕಾಳಗ

ರಕ್ತ ಚಿಮ್ಮುವವರೆಗೂ ಜೆಟ್ಟಿಗಳ ರೋಮಾಂಚನಕಾರಿ ಸೆಣಸಾಟ

ಐತಿಹಾಸಿಕ ಕಾಳಗ ನೋಡಲು ನೂಕು–ನುಗ್ಗಲು; ಜಗಜೆಟ್ಟಿಗಳಿಗೆ ಯದುವೀರ್ ಭಕ್ಷೀಸ್

ಮೈಸೂರು, ಅ.12(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಜಂಬೂ ಸವಾರಿ ದಿನವಾದ ಇಂದು ಅರಮನೆಯಲ್ಲಿ ನಡೆದ ಮೈನವಿರೇಳಿಸುವ ರೋಮಾಂಚನಕಾರಿ ವಜ್ರಮುಷ್ಠಿ ಜೆಟ್ಟಿ ಕಾಳಗ ವಿಜಯನಗರ ಹಾಗೂ ಮೈಸೂರು ರಾಜಮನೆತನದ ಧಾರ್ಮಿಕ ಹಾಗೂ ಸಾಂಪ್ರದಾಯಿಕ ಸಾಹಸ ಕ್ರೀಡಾ ಶ್ರೀಮಂತಿಕೆಯನ್ನು ಅನಾವರಣಗೊಳಿಸಿತು.

ಮೈಸೂರು ಅರಮನೆಯ ಆನೆ ಬಾಗಿಲು ಬಳಿಯ ಸವಾರಿ ತೊಟ್ಟಿಯಲ್ಲಿ ನಡೆದ ಈ ಸಾಹಸಕಾರಿ ಜಗಜೆಟ್ಟಿಗಳ ಕಾಳಗ ಪ್ರೇಕ್ಷಕರಿಗೆ ವಿಶಿಷ್ಟ ಅನುಭವ ನೀಡಿತು.

ಸವಾರಿ ತೊಟ್ಟಿಯಲ್ಲಿ ಸಿದ್ದಪಡಿಸಿದ್ದ ಅಖಾಡದಲ್ಲಿ ಮೈಸೂರಿನ ಬಲರಾಮ ಜೆಟ್ಟಿ ಹಾಗೂ ಬೆಂಗಳೂರಿನ ನಾರಾಯಣ ಜೆಟ್ಟಿ ನಡುವೆ ಮತ್ತು ಚೆನ್ನಪಟ್ಟಣದ ರಾಘವೇಂದ್ರ ಜೆಟ್ಟಿ ಹಾಗೂ ಚಾಮರಾಜನಗರದ ಶ್ರೀನಿವಾಸ ಜೆಟ್ಟಿ ನಡುವೆ ಸಮರ ಏರ್ಪಟ್ಟಿತ್ತು.

ಕಾಳಗಕ್ಕೆ 20 ನಿಮಿಷಕ್ಕೂ ಮುನ್ನ ಅಖಾಡಕ್ಕೆ ಆಗಮಿಸಿದ ಜೆಟ್ಟಿಗಳು ಸೆಣಸಾಟಕ್ಕೆ ಅಣಿಯಾದರು. ಅರಮನೆಯ ಕಲ್ಯಾಣ ಮಂಟಪದಲ್ಲಿ ಧಾರ್ಮಿಕ ಪೂಜಾ ಕೈಂಕರ್ಯ ಪೂರ್ಣಗೊಳಿಸಿದ ನಂತರ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸವಾರಿ ತೊಟ್ಟಿಗೆ ಆಗಮಿಸಿದರು.

ತರುವಾಯ ಯದುವೀರ್ ಅವರ ಅಪ್ಪಣೆ ಮೇರೆಗೆ ಜೆಟ್ಟಿಗಳ ಕಾಳಗ ಆರಂಭವಾಯಿತು. ಜಗಜೆಟ್ಟಿಗಳ ಈ ಸೆಣಸಾಟ ರೋಮಾಂಚಕಾರಿಯಾಗಿತ್ತು. ಬಲಗೈ ಬೆರಳುಗಳಿಗೆ ಧರಿಸಿದ್ದ ಆನೆ ದಂತದಿಂದ ತಯಾರಿಸಿದ್ದ ವಜ್ರ ನಖ ಪ್ರಯೋಗಿಸಿ ಸೆಣಸಾಡಿದರು.

ರಾಜರ ಕಾಲದ ಕ್ರೀಡಾ ಪರಂಪರೆ ಬಿಂಬಿಸುವ ಈ ವಜ್ರ ಮುಷ್ಠಿ ಕಾಳಗ ನೋಡಲು ನೂಕು–ನುಗ್ಗಲು ಉಂಟಾಯಿತು. ಜೆಟ್ಟಿ ಕಾಳಗ ನಡೆಯುತ್ತಿದ್ದ ಸವಾರಿ ತೊಟ್ಟಿಗೆ ಹೋಗುವ ಜನರ ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಸುಮಾರು ಐದತ್ತು ನಿಮಿಷ ಜೆಟ್ಟಿಗಳು ಸೆಣಸಾಡಿದರು. ಎರಡು ಜೋಡಿಗಳು ರಕ್ತ ಸಮರ್ಪಣೆ ಮಾಡುತ್ತಿದ್ದಂತೆ ವಸ್ತಾದ್ ಕಾಳಗ ನಿಲ್ಲಿಸಿದರು. ಈ ವೇಳೆ ವಜ್ರನಖ ಕೊಂಚ ತಾಕಿದಾಗ ರಕ್ತ ಭೂಮಿಗೆ ಸಮರ್ಪಣೆಯಾಯಿತು. ಕಾಳಗ ಮುಕ್ತಾಯದೊಂದಿಗೆ ಯದುವೀರ್ ಅವರ ವಿಜಯದಶಮಿಯ ವಿಜಯಯಾತ್ರೆಗೆ ಶುಭ ಸೂಚನೆ ದೊರೆಯಿತು. ಈ ವೇಳೆ ಒಬ್ಬ ಜೆಟ್ಟಿಯ ತಲೆಯಲ್ಲಿ ರಕ್ತ ಚಿಮ್ಮಿ, ಸುರಿಯುತ್ತಲೇ ಇತ್ತು. ಅಖಾಡದಲ್ಲಿದ್ದ ಮಣ್ಣು ಹಾಗೂ ಬಟ್ಟೆಯಿಂದ ಎಷ್ಟೆ ಒತ್ತಿದರೂ ರಕ್ತ ಸುರಿಯುತ್ತಲೆ ಇತ್ತು. ತರುವಾಯ ನಾಲ್ವರು ಜೆಟ್ಟಿಗಳು ಯದುವೀರ್ ಅವರಿಗೆ ನಮಸ್ಕರಿಸಿ, ರಕ್ತ ಸೋರುತ್ತಿರುವುದನ್ನು ಪ್ರದರ್ಶಿಸಿದರು. ನಂತರ ಕಾಳಗ ನಡೆಸಿದ ನಾಲ್ವರು ಜೆಟ್ಟಿಗಳಿಗೆ ಯದುವೀರ್ ಭಕ್ಷೀಸ್ ನೀಡಿದರು.




ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಶನಿವಾರ ಮೈಸೂರು ಅರಮನೆಯಲ್ಲಿ ಮೈನವಿರೇಳಿಸುವ ರೋಮಾಂಚನಕಾರಿ ವಜ್ರಮುಷ್ಠಿ ಜೆಟ್ಟಿ ಕಾಳಗ ನಡೆಯಿತು.

ಕಾಳಗದಲ್ಲಿ ಭಾಗಿಯಾಗುವ ಜೆಟ್ಟಿಗಳು ದಸರಾಗೆ 45 ದಿನ ಇರುವಂತೆ ಪ್ರತಿ ದಿನ ಗರಡಿಯಲ್ಲಿ ಕಸರತ್ತು ನಡೆಸಿ ಕಾಳಗಕ್ಕೆ ಸಜ್ಜಾಗುತ್ತಾರೆ. ಅಖಾಡಕ್ಕೆ ಪಾದ ಸ್ಪರ್ಶ ಮಾಡುತ್ತಿದ್ದಂತೆ ಜೆಟ್ಟಿಗಳಲ್ಲಿ ವೀರಾವೇಷ ಮೈಗೂಡುತ್ತದೆ. ಅಖಾಡದಲ್ಲಿ ಕಾಳಗಕ್ಕೆ ನಿಂತಾಗ ಜೆಟ್ಟಿಗಳಲ್ಲಿ ಗೆಲುವಿನ ಉತ್ಸಾಹವಿರುತ್ತದೆ. ಈ ವೇಳೆ ವೀರಾವೇಷದಿಂದ ಹೋರಾಡುತ್ತಾರೆ. ಕಾಳಗ ಪ್ರಕೋಪ ಹಂತ ತಲುಪಿದಾಗ ರೆಫ್ರಿಯಾಗಿ ಕಾರ್ಯನಿರ್ವಹಿಸುವ ಉಸ್ತಾದ್‌ಗಳು ಯಾವುದೇ ಅನಾಹುತ ಆಗದಂತೆ ಎಚ್ಚರ ವಹಿಸುತ್ತಾರೆ. ಒಟ್ಟಾರೆ ರಾಜ ಪರಂಪರೆಯ ಕ್ರೀಡಾ ಶ್ರೀಮಂತಿಕೆಯ ಪ್ರತೀಕವಾದ ಜೆಟ್ಟಿ ಕಾಳಗ ಇಂದು ಮೈನವಿರೇಳಿಸಿತು. ಜೆಟ್ಟಿಗಳ ಸೆಣಸಾಟ ರೋಮಾಂಚನಕಾರಿಯಾಗಿತ್ತು.

ದೇಶ - ವಿದೇಶ

ಜಪಾನಿನ ನಿಹಾನ್ ಹಿಡಾಂಕ್ಯೊ ಸಂಸ್ಥೆಗೆ ಶಾಂತಿ ನೊಬೆಲ್ ಪ್ರಶಸ್ತಿ



ಜಪಾನ್: ಜಪಾನಿನ ನಿಹಾನ್ ಹಿಡಾಂಕ್ಯೊ ಸಂಸ್ಥೆಗೆ ಈ ಬಾರಿ 2024ನೇ ಶಾಂತಿ ನೊಬೆಲ್ ಪ್ರಶಸ್ತಿ ಬಂದಿದೆ. ಪರಮಾಣು ಶಸ್ತ್ರಾಸ್ತ್ರಗಳಿಂದ ಮುಕ್ತ ಜಗತ್ತನ್ನು ಸಾಧಿಸುವ ಪ್ರಯತ್ನ ಹಾಗೂ ಪರಮಾಣು ಶಸ್ತ್ರಾಸ್ತ್ರಗಳನ್ನು ಮತ್ತೆ ಎಂದಿಗೂ ಬಳಸಬಾರದು ಎಂದು ಸಾಕ್ಷಿ ಸಾಕ್ಷ್ಯದ ಮೂಲಕ ಪ್ರದರ್ಶಿಸುತ್ತಿರುವುದಕ್ಕೆ ಪ್ರಶಸ್ತಿ ನೀಡಲಾಗಿದೆ.

ಹಿರೋಷಿಮಾ ಮತ್ತು ನಾಗಾಸಾಕಿಯಿಂದ ಪರಮಾಣು ಬಾಂಬ್ ದಾಳಿಯಿಂದ ಬದುಕಿ ಜನರ ಸ್ಥಿತಿ ಕಂಡು, ಇನ್ನು ಮುಂದೆ ಯಾವ ದೇಶವು ಪರಮಾಣು ಬಾಂಬ್ ದಾಳಿ ನಡೆಸಬಾರದು ಎಂದು ಈ ಕಂಪನಿ ಜಾಗೃತಿ ಮೂಡಿಸಿದೆ. ನೊಬೆಲ್ ಶಾಂತಿ ಪ್ರಶಸ್ತಿ ಸಮಿತಿಯು ಈ ಪ್ರಶಸ್ತಿ ನೀಡಿದೆ. ನಾರ್ವೆಯ ಓಶೋದಲ್ಲಿ ಶಾಂತಿ ಪ್ರಶಸ್ತಿ ನೀಡಲಾಯಿತು. ಈ ಬಗ್ಗೆ ಪ್ರತಿಕ್ರಿಯಿಸಿದ ನಿಹಾನ್ ಹಿಡಾಂಕ್ಯೊ ಸಹ ಮುಖ್ಯಸ್ಥರು, ಇದು ನಮ್ಮ ಗೆಲುವು, ನೊಬೆಲ್ ಗೆಲ್ಲುತ್ತೇನೆ ಎಂದು ಕನಸು ಕಂಡಿರಲಿಲ್ಲ ಎಂದು ಹೇಳಿದ್ದಾರೆ. ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಮೆರಿಕ ನಡೆಸಿದ ಪರಮಾಣು ದಾಳಿಯ ಸಂತ್ರಸ್ತರ ಬಗ್ಗೆ ಅನೇಕ ಸಾಕ್ಷ್ಯ ಚಿತ್ರಗಳನ್ನು ಮಾಡಿದೆ.

50 ವರ್ಷಗಳ ಬಳಿಕ ಮೊದಲ ಬಾರಿಗೆ ಸಹರಾ ಮರುಭೂಮಿಯಲ್ಲಿ ಪ್ರವಾಹ

ನವದೆಹಲಿ: ವಿಶ್ವದ ಅತಿದೊಡ್ಡ ಮರುಭೂಮಿ ಎಂದು



ಕರೆಯುವ ಸಹರಾ ಮರುಭೂಮಿ ಮರಳುಗಾಡು ಪ್ರದೇಶವಾಗಿದ್ದು, ಇಲ್ಲಿ ಧಾರಾಕಾರ ಮಳೆಯಿಂದ ನೀರು ಹರಿಯುತ್ತಿರುವ ಸೆಟಲೈಟ್ ಚಿತ್ರಗಳು ಎಲ್ಲರ ಹುಬ್ಬೇರಿಸುವಂತೆ ಮಾಡಿದೆ. ಇದು ಕಳೆದ 50 ವರ್ಷಗಳಲ್ಲೇ ಮೊದಲ ಬಾರಿಗೆ ಸಹರಾ ಮರುಭೂಮಿ ಪ್ರವಾಹಕ್ಕೆ ಸಾಕ್ಷಿಯಾಗಿರುವುದಾಗಿ ವರದಿ ತಿಳಿಸಿದೆ. ಇನ್ನು ಆಗ್ನೇಯ ಮೊರಾಕೊದಲ್ಲಿ ಕಳೆದ 2 ದಿನಗಳ ಧಾರಾಕಾರ ಮಳೆ ಸುರಿಯುತ್ತಿದ್ದು, ಇದು ಸುತ್ತಮುತ್ತಲಿನ ಪ್ರದೇಶಗಳಲ್ಲಿ ತೀವ್ರ ಪ್ರವಾಹಕ್ಕೆ ಕಾರಣವಾಗಿದೆ. ಕಳೆದ 2 ದಿನಗಳಲ್ಲಿ ಸುರಿದ ಮಳೆ ಇಲ್ಲಿನ ವಾರ್ಷಿಕ ಸರಾಸರಿಯನ್ನೇ ಮೀರಿಸಿದ್ದು, ರಾಜಧಾನಿ ರಬತ್‌ನ ದಕ್ಷಿಣಕ್ಕೆ 450 ಕಿಮೀ ದೂರದಲ್ಲಿರುವ ಟಗೌನೈಟ್ ಗ್ರಾಮದಲ್ಲಿ ಕೇವಲ 24 ಗಂಟೆಗಳಲ್ಲಿ 100 ಮಿಮೀ ಮಳೆಯಾಗಿದೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ. ಈ ಬಗ್ಗೆ ಮಾತನಾಡಿರುವ ಮೊರಾಕೊದ ಹವಾಮಾನ ಸಂಸ್ಥೆಯ ಅಧಿಕಾರಿ ಹೂಸಿನ್ ಯೂಬೇಬ್, ಕಳೆದ 50 ವರ್ಷಗಳಲ್ಲಿ ಇಷ್ಟು ಕಡಿಮೆ ಸಮಯದಲ್ಲಿ ಈ ಭಾರಿ ಪ್ರಮಾಣದ ಮಳೆಯನ್ನು ನಾವು ನೋಡಿರಲಿಲ್ಲ.

ಪಾಕಿಸ್ತಾನದಲ್ಲಿ ಗಣಿ ಕಾರ್ಮಿಕರ ಮೇಲೆ ಗುಂಡಿನ ದಾಳಿ; 20 ಮಂದಿ ಸಾವು

ಇಸ್ಲಾಮಾಬಾದ್: ಪಾಕಿಸ್ತಾನದ ಬಲೂಚಿಸ್ತಾನದಲ್ಲಿ



ಬಂದೂಕುದಾರಿಗಳು ನಡೆಸಿದ ಗುಂಡಿನ ದಾಳಿಯಲ್ಲಿ 20 ಮಂದಿ ಸಾವನ್ನಪ್ಪಿದ್ದು, 7 ಮಂದಿ ಗಾಯಗೊಂಡಿದ್ದಾರೆ. ದೇಶದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ನಡೆಯಲಿರುವ ಪ್ರಮುಖ ಭದ್ರತಾ ಶೃಂಗಸಭೆಗೆ ಕೆಲವು ದಿನಗಳ ಮೊದಲು ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ದಾಳಿ ನಡೆದಿದೆ.

ಗುರುವಾರ ತಡರಾತ್ರಿ ದುಕಿ ಜಿಲ್ಲೆಯ ಕಲ್ಲಿದ್ದಲು ಗಣಿ ಬಳಿಯಿರುವ ಮನೆಗಳ ಮೇಲೆ ಬಂದೂಕುಧಾರಿಗಳು ದಾಳಿ ನಡೆಸಿದ್ದಾರೆ. ಬಲಿಪಶುಗಳಲ್ಲಿ ಹೆಚ್ಚಿನವರು ಬಲೂಚಿಸ್ತಾನ ಮೂಲದವರೇ ಆಗಿದ್ದಾರೆ. ಸತ್ತವರಲ್ಲಿ ಮೂವರು ಮತ್ತು ಗಾಯಗೊಂಡವರಲ್ಲಿ ನಾಲ್ವರು ಅಫ್ಘಾನ್ ಮೂಲದವರು ಎಂದು ಹೇಳಲಾಗಿದೆ. ಸದ್ಯ ಈ ದಾಳಿಯ ಹೊಣೆಯನ್ನು ಯಾವುದೇ ಸಂಘಟನೆ ಹೊತ್ತುಕೊಂಡಿಲ್ಲ. ಈ ಪ್ರಾಂತ್ಯವು ಸ್ವಾತಂತ್ರ್ಯವನ್ನು ಬಯಸುವ ಪ್ರತ್ಯೇಕತಾವಾದಿ ಗುಂಪುಗಳ ಭದ್ರಕೋಟೆಯಾಗಿದೆ. ಬಲೂಚ್ ಲಿಬರೇಶನ್ ಆರ್ಮಿ ಎಂಬ ಗುಂಪು ಪಾಕಿಸ್ತಾನದ ಅತೀ ದೊಡ್ಡ ವಿಮಾನ ನಿಲ್ದಾಣದ ಹೊರಗೆ ಚೀನಾದ ನಾಗರಿಕರ ಮೇಲೆ ದಾಳಿ ಮಾಡಿತ್ತು.

ಫೈರಿಂಗ್ ಅಭ್ಯಾಸದ ವೇಳೆ ಇಬ್ಬರು ಅಗ್ನಿವೀರರು ಹುತಾತ್ಮ

ನಾಸಿಕ್: ಫೈರಿಂಗ್ ಅಭ್ಯಾಸದ ವೇಳೆಯಲ್ಲಿ ಇಬ್ಬರು



ಅಗ್ನಿವೀರರು ಹುತಾತ್ಮರಾದ ಘಟನೆ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿ ಶುಕ್ರವಾರ ನಡೆದಿದ್ದು, ಘಟನೆಗೆ ಕಾರಣ ಪತ್ತೆಗೆ ಮಿಲಿಟರಿ ನ್ಯಾಯಾಲಯದಿಂದ ತನಿಖೆಗೆ ಸೇನೆ ಆದೇಶಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆರ್ಟಿಲರಿ ಸೆಂಟರ್ ಹೈದರಾಬಾದ್‌ನ ಗೋಹಿಲ್ ವಿಶ್ವರಾಜ್‌ಸಿನ್ಹ (20) ಮತ್ತು ಸೈಕತ್ (21) ನಾಸಿಕ್ ಜಿಲ್ಲೆಯ ಡಿಯೋಲಾಲಿ ಫೀಲ್ಡ್ ಫೈರಿಂಗ್ ರೇಂಜ್‌ನಲ್ಲಿ ಗುಂಡಿನ ಅಭ್ಯಾಸದ ವೇಳೆಯಲ್ಲಿ ಹುತಾತ್ಮರಾಗಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಅಗ್ನಿವೀರ್‌ಗಳ ತಂಡ ಫೀಲ್ಡ್ ಗನ್‌ನಿಂದ ಗುಂಡು ಹಾರಿಸುತ್ತಿದ್ದಾಗ ಶೆಲ್‌ಗಳಲ್ಲಿ ಒಂದು ಸ್ಫೋಟಗೊಂಡಿತು. ಪರಿಣಾಮ ಗಾಯಗೊಂಡ ಇಬ್ಬರನ್ನು ಡಿಯೋಲಾಲಿಯಲ್ಲಿರುವ ಮಿಲಿಟರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಅವರು ಹುತಾತ್ಮರಾಗಿರುವುದಾಗಿ ಘೋಷಿಸಲಾಯಿತು. ಈ ಸಂಬಂಧ ಹವಾಲ್ದಾರ್ ಅಜಿತ್ ಕುಮಾರ್ ನೀಡಿದ ದೂರಿನ ಮೇರೆಗೆ ದೇವಾಲಿ ಕ್ಯಾಂಪ್ ಪೊಲೀಸ್ ಠಾಣೆಯಲ್ಲಿ ಆಕಸ್ಮಿಕ ಸಾವು ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ಕೈಗೊಂಡಿದ್ದಾರೆ.

ಬಾಂಗ್ಲಾದೇಶದ ದೇವಸ್ಥಾನಕ್ಕೆ ಪ್ರಧಾನಿ ಮೋದಿ ನೀಡಿದ ಕಿರೀಟ ಕಳ್ಳತನ

ಡಾಕಾ: ಪ್ರಧಾನಿ ನರೇಂದ್ರ ಮೋದಿಯವರು ನೇಪಾಳದ



ದೇವಸ್ಥಾನವೊಂದಕ್ಕೆ ಉಡುಗೊರೆಯಾಗಿ ನೀಡಿದ್ದ ಕಿರೀಟ ಕಳ್ಳತನವಾಗಿರುವ ಬಗ್ಗೆ ಢಾಕಾದಲ್ಲಿರುವ ಭಾರತೀಯ ಹೈಕಮಿಷನ್ ಕಳವಳ ವ್ಯಕ್ತಪಡಿಸಿದೆ.

2021ರಲ್ಲಿ ಮೋದಿಯವರು ತಮ್ಮ ಢಾಕಾ ಭೇಟಿಯ ಸಂದರ್ಭದಲ್ಲಿ ಜೆಶೋರೇಶ್ವರಿ ಕಾಳಿ ದೇವಸ್ಥಾನಕ್ಕೆ (ಸತ್ಖಿರಾ) ಉಡುಗೊರೆಯಾಗಿ ನೀಡಿದ್ದ ಕಿರೀಟದ ಕಳ್ಳತನವಾಗಿದೆ ಎಂಬ ವಿಷಯ ಕೇಳಿ ತೀವ್ರ ಬೇಸರವಾಗಿದೆ. ಈ ಬಗ್ಗೆ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳುವಂತೆ ದುಷ್ಕರ್ಮಿಗಳನ್ನು ಪತ್ತೆಹಚ್ಚುವಂತೆ ಬಾಂಗ್ಲಾದೇಶ ಸರ್ಕಾರವನ್ನು ಒತ್ತಾಯಿಸುತ್ತೇವೆ ಎಂದು ಢಾಕಾದಲ್ಲಿರುವ ಭಾರತೀಯ ಹೈಕಮಿಷನ್ ಹೇಳಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸಿಸಿಟಿವಿ ದೃಶ್ಯಾವಳಿಯಲ್ಲಿ ಬಿಳಿ ಟೀ ಶರ್ಟ್ ಮತ್ತು ಜೀನ್ಸ್ ಪ್ಯಾಂಟ್ ಧರಿಸಿದ್ದ ಅಪರಿಚಿತ ವ್ಯಕ್ತಿಯೊಬ್ಬ ದೇವಸ್ಥಾನದೊಳಗೆ ಕಾಲಿಟ್ಟಿದ್ದು, ತನ್ನ ಟಿ ಶರ್ಟ್‌ನಲ್ಲಿ ಸಿಕ್ಕಿಸಿಕೊಂಡಿದ್ದ ಕಿರೀಟವನ್ನು ತೆಗೆದ ನಂತರ ಗರ್ಭಗುಡಿಯಿಂದ ದೇವಾಲಯ ಆವರಣ ಮೂಲಕ ಹೊರನಡೆದಿದ್ದಾನೆ. ಮೊನ್ನೆ ಅ.10ರಂದು ಕಳ್ಳತನ ನಡೆದಿದೆ ಎನ್ನಲಾಗಿದೆ.

ಮೈಸೂರು ಮಿತ್ರ

ಭಾನುವಾರ 13 ಅಕ್ಟೋಬರ್ 2024

ರಾಜ್ಯದ ಸಂಸ್ಕೃತಿ ಬಿಂಬಿಸಿದ ಸ್ತಬ್ಧಚಿತ್ರಗಳ ದಿಬ್ಬಣ

ಮೈಸೂರು,ಅ.12(ಎಂಟಿವೈ)– ಜಂಬೂಸವಾರಿ ಮೆರವಣಿಗೆಯಲ್ಲಿ ಇದೇ ಮೊದಲ ಬಾರಿಗೆ 52 ಸ್ತಬ್ಧ ಚಿತ್ರಗಳು ಸಾಗಿ ಮೆರವಣಿಗೆ ಮೆರಗು ಹೆಚ್ಚಿಸಿದವು.

ಪ್ರತಿ ವರ್ಷ ಜಂಬೂಸವಾರಿ ಮೆರವಣಿಗೆಯಲ್ಲಿ 28 ರಿಂದ 35 ಸ್ತಬ್ಧಚಿತ್ರಗಳು ಸಾಗುತ್ತಿದ್ದವು. ಆದರೆ, ಈ ಬಾರಿ ಅತೀ ಹೆಚ್ಚು ಸ್ತಬ್ಧಚಿತ್ರಗಳು ಸಾಗಿದ ದಾಖಲೆ ನಿರ್ಮಾಣವಾಯಿತು. ಒಂದಕ್ಕಿಂತ ಒಂದು ಸ್ತಬ್ಧಚಿತ್ರಗಳು ಜನಾಕರ್ಷಣೀಯ ಕೇಂದ್ರ ಬಿಂದುವಾಗಿ ಗಮನ ಸೆಳೆದವು. ವಿವಿಧ ಜಿಲ್ಲೆಗಳು, ನಿಗಮ ಮಂಡಳಿ ವತಿಯಿಂದ ನಿರ್ಮಿಸಲಾಗಿದ್ದ ಸ್ತಬ್ಧಚಿತ್ರಗಳಲ್ಲಿ ಧಾರ್ಮಿಕ ಕ್ಷೇತ್ರ, ಪ್ರವಾಸಿ ತಾಣ, ಸರ್ಕಾರದ ವಿವಿಧ ಯೋಜನೆಗಳ ಮಾಹಿತಿ ಒದಗಿಸುವ ಮೂಲಕ ಜನರಿಗೆ ಸಂದೇಶ ಸಾರಿದವು.

ಯಾದಗಿರಿ ಜಿಲ್ಲೆಯ ತಿಂಥಣಿ ಮೌನೇಶ್ವರ ದೇವಾಲಯ, ಕೊಡಗು ಜಿಲ್ಲೆಯಿಂದ ಹಾರಂಗಿ ಜಲಾಶಯ, ಭೂ ಸಂರಕ್ಷಣೆ, ಕಾಫಿ–ಕಾಳು ಮೆಣಸು ತೋಟ ಹಾಗೂ ಆನೆ ಕ್ಯಾಂಪ್ ಚಿತ್ರಣವುಳ್ಳ ಸ್ತಬ್ಧಚಿತ್ರ ನಿರ್ಮಿಸಿತ್ತು. ರಾಯಚೂರು ಜಿಲ್ಲೆಯ ಮುದ್ಗಲ್ ಕೋಟೆ, ಚಾಮರಾಜನಗರ ಜಿಲ್ಲೆಯ ಸೋಲಿಗರ ಸೊಗಡು ಒಮ್ಮೆ ನೀ ಬಂದು ನೋಡು ಸ್ತಬ್ಧಚಿತ್ರ, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತವು ಕ್ಷೀರ ಭಾಗ್ಯ, ಕ್ಷೀರ ಸಂಜೀವಿನಿ ಯೋಜನೆಗಳ ಯಶಸ್ವಿ ಪಥ ಕುರಿತ ಸ್ತಬ್ಧಚಿತ್ರ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಿಂದ 'ಮೈಸೂರು ಸ್ಯಾಂಡಲ್ ಸೋಪ್' ಪರಿಚಯಿಸುವ ಸ್ತಬ್ಧಚಿತ್ರ, ವಿಜಯನಗರ ಜಿಲ್ಲೆಯಿಂದ ವಿಜಯನಗರ ಸಾಮ್ರಾಜ್ಯದ ವೈಭವ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ಸಾಗಿತು.

ಬೆಂಗಳೂರು ನಗರ ಜಿಲ್ಲೆಯ ಕರ್ನಾಟಕದ ಆಡಳಿತ ಶಕ್ತಿ ಕೇಂದ್ರ–ವಿಧಾನಸೌಧ, ಬೀದರ್ ಜಿಲ್ಲೆಯ ಕನ್ನಡ ಪಟ್ಟದೇವರು, ಕೊಪ್ಪಳ ಜಿಲ್ಲೆಯ ಕಿನ್ನಾಳ ಕಲೆ, ಪ್ರವಾಸೋದ್ಯಮ ಇಲಾಖೆಯ ಒಂದು ರಾಜ್ಯ ಹಲವು ಜಗತ್ತು, ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಲಿಡ್ಕರ್ ಉತ್ಪನ್ನಗಳ ಕುರಿತ ಸ್ತಬ್ಧಚಿತ್ರ, ಉತ್ತರ ಕನ್ನಡ ಜಿಲ್ಲೆಯ ಮುರುಡೇಶ್ವರದ ಬೃಹತ್ ಶಿವನಮೂರ್ತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೆಗ್ಗುಂದದ ರಾಮದೇವರ ಬೆಟ್ಟ, ದಾವಣಗೆರೆ ಜಿಲ್ಲೆಯ 'ನಾವು ಮನುಜರು', ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 'ಕರ್ನಾಟಕ ರೇಷ್ಮೆ ನಮ್ಮ ಹೆಮ್ಮೆ' ಸ್ತಬ್ಧಚಿತ್ರ, ಕಾರ್ಮಿಕ ಇಲಾಖೆಯ ಸ್ತಬ್ಧಚಿತ್ರ, ಉಡುಪಿ ಜಿಲ್ಲೆಯ ಸಾಂಸ್ಕೃತಿಕ ವೈಭವ ಹಾಗೂ ಕರಾವಳಿಯ ಸೊಬಗು, ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕಿನ ಕೋಟಿಪುರ ಕೈತಭೇಶ್ವರ ದೇವಾಲಯ, ಬಳ್ಳಾರಿ ಜಿಲ್ಲೆಯ ಕುರುಗೋಡು ದೇವಾಲಯ ಪ್ರತಿಬಿಂಬದ ಸ್ತಬ್ಧಚಿತ್ರ ಗಮನ ಸೆಳೆಯಿತು.

ಬಾಗಲಕೋಟೆ ಜಿಲ್ಲೆಯ ರನ್ನನ ಕಾವ್ಯ ಗದಾಯುದ್ಧ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಗ್ರಾಮೀಣ ಜನರ ಆರೋಗ್ಯದಲ್ಲಿ ಸುಸ್ಥಿರತೆ ಕುರಿತ ಸ್ತಬ್ಧಚಿತ್ರ, ಸಮಾಜ ಕಲ್ಯಾಣ ಇಲಾಖೆಯ ಸಮ ಸಮಾಜ ನಿರ್ಮಾಣ, ಹಾವೇರಿ ಜಿಲ್ಲೆಯ ಏಲಕ್ಕಿ ಕಂಪಿನಾಡು ಹಾಗೂ ಸಂತರ–ಸಾಹಿತಿಗಳ ನೆಲೆಬೀಡು, ರಾಮನಗರ ಜಿಲ್ಲೆಯ ಜಿಲ್ಲಾ ವೈವಿಧ್ಯತೆಗಳು, ಕಲಬುರ್ಗಿ ಜಿಲ್ಲೆಯ ಅಭಿವೃದ್ಧಿಯತ್ತ ದಾಪುಗಾಲು ಸ್ತಬ್ಧಚಿತ್ರ, ಕಾವೇರಿ ನೀರಾವರಿ ನಿಗಮದ ಏಕತೆಯಲ್ಲಿ ಅನೇಕತೆ ಸಾರುವ ಅಣೆಕಟ್ಟು, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಯ ವನ್ಯಜೀವಿ ಸಂರಕ್ಷಣೆ ನಮ್ಮೆಲ್ಲರ ಹೊಣೆ, ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ನಂದಿ ಬಸವೇಶ್ವರ ದೇವಾಲಯ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ವಾಣಿಜ್ಯ ಮತ್ತು ಪ್ರವಾಸೋದ್ಯಮ, ಮೈಸೂರು ಜಿಲ್ಲೆಯ ಮಾನವಕುಲದ ಸಮಾನತೆ, ಬೆಳಗಾವಿ ಜಿಲ್ಲೆಯ ಕಿತ್ತೂರು ಕದನಕ್ಕೆ 200 ವರ್ಷ, ಸಿಎಫ್‌ಟಿಆರ್‌ಐ ಸಂಸ್ಥೆಯ ಕೃಷಿ ಸರಕುಗಳ ಮೌಲ್ಯವರ್ಧನೆ, ಕೃಷಿ ಕ್ಷೇತ್ರಕ್ಕೆ ಕೊಡುಗೆ, ಪೊಲೀಸ್ ಇಲಾಖೆ ಸೈಬರ್ ಕ್ರೈಂ ಸೇರಿದಂತೆ ಇಲಾಖಾ ಕಾರ್ಯವೈಖರಿ ಕುರಿತ ಸ್ತಬ್ಧಚಿತ್ರ, ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗದ ಕೋಟೆ ಮತ್ತು ಗಾಳಿ ಯಂತ್ರಗಳು, ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ರೋಪ್ ವೇ, ಗದಗ ಜಿಲ್ಲೆಯ ಗ್ರಾಮ ಸಭೆ, ಧಾರವಾಡ ಜಿಲ್ಲೆಯ ಇಸ್ರೋ ಗಗನಯಾನದಲ್ಲಿ ಹಣ್ಣಿನ ನೊಣಗಳು ಸ್ತಬ್ಧಚಿತ್ರಗಳು ಜನಾಕರ್ಷಿಸಿದವು.

ಭಾರತೀಯ ರೈಲ್ವೆ ಇಲಾಖೆಯ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಸ್ತಬ್ಧಚಿತ್ರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೆಣ್ಣು ಭ್ರೂಣಹತ್ಯೆ ತಡೆ, ಹಾಸನ ಜಿಲ್ಲೆಯ ವಿಶ್ವ ಪಾರಂಪರಿಕ ತಾಣ ಬೇಲೂರು, ಹಳೇಬೀಡು, ಚಿಕ್ಕಮಗಳೂರು ಜಿಲ್ಲೆಯ ತೇಜಸ್ವಿ ವಿಸ್ಮಯ ಲೋಕ, ತುಮಕೂರು ಜಿಲ್ಲೆಯ ಔಷಧ ಸಸ್ಯಗಳ ಸಂಜೀವಿನಿ ಸಿದ್ದರಬೆಟ್ಟ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು, ವಾರ್ತಾ ಇಲಾಖೆಯಿಂದ ವಿಶ್ವಗುರು ಬಸವಣ್ಣ, ಮಹಾತ್ಮ ಗಾಂಧೀಜಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ನಿಮ್ಮ ಮನೆಯೇ ನಿರಂತರ ಪಾಠಶಾಲೆ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯ ಕೌಶಲ್ಯ ಕರ್ನಾಟಕ, ಸ್ತಬ್ಧಚಿತ್ರ ಉಪಸಮಿತಿಯಿಂದ ಸಾಮಾಜಿಕ ನ್ಯಾಯದ ರುವಾರಿಗಳು ಕುರಿತ ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಸಾಗಿದವು.



ವಾರ್ತಾ ಇಲಾಖೆಯ ವಿಶ್ವಗುರು ಬಸವಣ್ಣ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಸ್ತಬ್ಧಚಿತ್ರ



ಬೆಂಗಳೂರು ನಗರ ಜಿಲ್ಲೆಯ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ವಿಧಾನಸೌಧ ಸ್ತಬ್ಧಚಿತ್ರ



ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಸ್ವಸ್ಥ ಮೆದುಳು ಸ್ವಸ್ಥ ಮಾತು



ಚಿತ್ರದುರ್ಗದ ಕೋಟೆ ಮತ್ತು ಗಾಳಿ ಯಂತ್ರಗಳು



ಗದಗ ಜಿಲ್ಲೆಯ ಗ್ರಾಮಸಭೆ- ಹಳ್ಳಿಯ ವಿಧಾನಸಭೆ



ಕೌಶಲಾಭಿವೃದ್ಧಿ ಇಲಾಖೆ ಕೌಶಲ್ಯ ಕರ್ನಾಟಕ



ಕರ್ನಾಟಕ ರೇಷ್ಮೆ ಉದ್ಯಮ ನಿಗಮದ 'ಕರ್ನಾಟಕ ರೇಷ್ಮೆ ನಮ್ಮ ಹೆಮ್ಮೆ'



ಮೈಸೂರು ಜಿಲ್ಲಾ ಪಂಚಾಯಿತಿಯ ಮಾನವ ಕುಲದ ಸಮಾನತೆ ಧಾರ್ಮಿಕ ಬೆಳಕಿನಿಂದ ಸಂವಿಧಾನದ ನ್ಯಾಯದವರೆಗೆ



ಪ್ರವಾಸೋದ್ಯಮ ಇಲಾಖೆಯ ಒಂದು ರಾಜ್ಯ ಹಲವು ಜಗತ್ತು



ಸಮಾಜ ಕಲ್ಯಾಣ ಇಲಾಖೆಯ ಸಮಸಮಾಜ ನಿರ್ಮಾಣ ಸ್ತಬ್ಧಚಿತ್ರ



ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ವಾಣಿಜ್ಯ ಮತ್ತು ಪ್ರವಾಸೋದ್ಯಮ



ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರ ಇಲಾಖೆಯ ಚೆಲ್ಲದಿರಿ ಅನ್ನ ಬಡವರಿಗೆ ಅದೇ ಚಿನ್ನ



ಚಾಮರಾಜನಗರದ ಸೋಲಿಗರ ಸೊಗಡು ಒಮ್ಮೆ ಬಂದು ನೀ ನೋಡು

ರಾಜ್ಯದ ಸಂಸ್ಕೃತಿ ಬಿಂಬಿಸಿದ ಸ್ತಬ್ಧಚಿತ್ರಗಳ ದಿಬ್ಬಣ


ಕೊಪ್ಪಳ ಜಿಲ್ಲೆಯ ಕಿನ್ನಾಳ ಕಲೆ, ಶ್ರೀ ಹುಲಿಗೆಮ್ಮ ದೇವಸ್ಥಾನ ಹಾಗೂ ಇತರೆ ಪ್ರವಾಸಿತಾಣಗಳು


ಹಾವೇರಿ ಜಿಲ್ಲೆಯ ಏಲಕ್ಕಿ ಕಂಪಿನ ನಾಡು, ಸಂತರು-ಸಾಹಿತಿಗಳ ನೆಲೆಬೀಡು


ಶಿವಮೊಗ್ಗ ಸೊರಬ ತಾಲೂಕಿನ ಕೋಟಿಪುರ ಕೈತಭೇಶ್ವರ ದೇವಾಲಯ


ಬಳ್ಳಾರಿಯ ಕುರುಗೋಡು ದೇವಸ್ಥಾನ


ಬೀದರ್‌ನ ಕನ್ನಡ ಪಟ್ಟದೇವರು ಪೂಜ್ಯಶ್ರೀ ಮದ್‌ಘನಲಿಂಗ ಚಕ್ರವರ್ತಿ ಚನ್ನಬಸಪ್ಪ ಪಟ್ಟದೇವರು


ಸ್ತಬ್ಧಚಿತ್ರ ಉಪಸಮಿತಿಯ ಆನೆಬಂಡಿ


ವಿಜಯನಗರ ಸಾಮ್ರಾಜ್ಯದ ವೈಭವ

ಅದ್ಧೂರಿ ಜಂಬೂಸವಾರಿ

ಒಂದನೇ ಪುಟದಿಂದ

ಭಕ್ತಿಪೂರ್ವಕ ವಾಗಿ ಚಾಮುಂಡೇಶ್ವರಿಗೆ ನಮಿಸಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹ ದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀ ಕಾಂತರೆಡ್ಡಿ ಹಾಗೂ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ವೇದಿಕೆಯಲ್ಲಿ ಉಪಸ್ಥಿತರಿದ್ದು

ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ನೆರವೇರಿಸಿದರು. ಪೊಲೀಸ್ ಬ್ಯಾಂಡ್ ತಂಡದಿಂದ ಮೊಳಗಿದ ರಾಷ್ಟ್ರಗೀತೆಗೆ ನೆರೆದಿದ್ದ ಜನರು ಗೌರವ ವಂದನೆ ಸಲ್ಲಿಸಿದರು. ಇದಕ್ಕೂ ಮೊದಲು ಮಧ್ಯಾಹ್ನ 1.52 ಗಂಟೆಗೆ ಕೆಎಸ್‌ಆರ್‌ಟಿಸಿ ಐರಾವತ ಬಸ್‌ನಲ್ಲಿ ಸಂಪುಟ ಸಹೋದ್ಯೋಗಿಗಳೊಂದಿಗೆ ಆಗಮಿಸಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಮಧ್ಯಾಹ್ನ 1.55ರಲ್ಲಿ ಸಲ್ಲುವ ಶುಭ ಮಕರ ಲಗ್ನದಲ್ಲಿ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ವೈಭವದ ವಿಜಯದಶಮಿ ಮೆರವಣಿಗೆಗೆ ವಿಧ್ಯುಕ್ತ ಚಾಲನೆ ನೀಡಿದರು. ಆರಂಭದಲ್ಲಿ ತಿ.ನರಸೀಪುರ ತಾಲೂಕು ಯಡ ಹಳ್ಳಿಯ ಮೌನೇಶ್ ತಂಡದಿಂದ ವೀರಭದ್ರ ಕುಣಿತ, ನಂತರ ನಿಶಾನೆ ಹಾಗೂ ನೌಫತ್ ಆನೆಗಳಾದ ಧನಂಜಯ, ಗೋಪಿ ಮೆರವಣಿಗೆಯ ಮುಂಚೂಣಿಯಲ್ಲಿ ಸಾಗಿದರೆ, ಸಾಲಾನೆಗಳಾದ ಪ್ರಶಾಂತ, ಮಹೇಂದ್ರ, ಕಂಜನ್, ಏಕಲವ್ಯ, ಭೀಮ ಕೆಲ ಕಲಾತಂಡಗಳ ನಂತರ ಗಂಭೀರ ಹೆಜ್ಜೆ ಹಾಕಿದವು. ವಿವಿಧ ಕಲಾತಂಡಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯ್ತಿಗಳು ಹಾಗೂ ವಿವಿಧ ಇಲಾಖೆಗಳ ಆಕರ್ಷಕ ಸ್ತಬ್ಧ ಚಿತ್ರಗಳು ಮೆರವಣಿಗೆಗೆ ಮೆರಗು ನೀಡಿದವು.

ಅರಮನೆ ಆವರಣದಲ್ಲಿ ಹರ್ಷೋದ್ಗಾರ: ಅರಮನೆ ಆವರಣದಲ್ಲಿ ಜಾನಪದ ತಂಡಗಳು ಸ್ತಬ್ಧಚಿತ್ರಗಳು ಸಾಗಿದ ಬಳಿಕ ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯ ಉತ್ಸವಮೂರ್ತಿಯನ್ನು ಹೊತ್ತು ಅಭಿಮನ್ಯು ಹೆಜ್ಜೆ ಹಾಕುತ್ತಿದ್ದಂತೆಯೇ ಅಲ್ಲಿ ನೆರೆದಿದ್ದ ಜನರು ಜೈಕಾರ ಕೂಗಿ ಹರ್ಷೋದ್ಗಾರಗೈದರು. ಕೆಎಸ್‌ಆರ್‌ಪಿ ಮೌಂಟೆಡ್ ಪೊಲೀಸ್‌ನ ಇಂಗ್ಲಿಷ್ ಬ್ಯಾಂಡ್, ಅಶ್ವದಳ, ಪೊಲೀಸ್ ಪಥಸಂಚಲನ, ವಿದ್ವಾನ್ ಎ. ಪುಟ್ಟಸ್ವಾಮಿ ನೇತೃತ್ವದಲ್ಲಿ ನಾದಸ್ವರ ವಾದನ, ರಾಜಲಾಂಛನಗಳೊಂದಿಗೆ ದರ್ಬಾರಿಗಳ ಕವಾಯತು, ಫಿರಂಗಿ ಗಾಡಿಗಳು, ಅಗ್ನಿಶಾಮಕ ದಳ, ಆಂಬುಲೆನ್ಸ್ ಹಾಗೂ ಎತ್ತಿನ ಗಾಡಿಗಳು, ಚಿನ್ನದ ಅಂಬಾರಿಯನ್ನು ಹೊತ್ತ ಅಭಿಮನ್ಯುವಿನ ಹಿಂದೆ ಸಾಗಿ ಜನರ ಮನ ಸೆಳೆದವು. ಅರಮನೆಯಿಂದ ಹೊರಟ ಜಂಬೂ ಸವಾರಿ ಮೆರವಣಿಗೆಯು ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಬಂಬೂಬಜಾರ್, ಹೈವೇ ಸರ್ಕಲ್ ಮೂಲಕ ರಾತ್ರಿ 7.04 ಗಂಟೆಗೆ ಬನ್ನಿಮಂಟಪ ತಲುಪಿತು. ದಸರಾ ವೈಭವ, ಇತಿಹಾಸ, ರಾಜಮನೆತನದ ಆಳ್ವಿಕೆ, ಮೈಸೂರಿನ ಪಾರಂಪರಿಕ ವೈವಿಧ್ಯತೆಗಳನ್ನು ಈ ಸಂದರ್ಭ ಧ್ವನಿವರ್ಧಕದ ಮೂಲಕ ನಿರೂಪಕರು ಅರ್ಥಗರ್ಭಿತವಾಗಿ ವಿವರಿಸುತ್ತಿದ್ದರು. ಅರಮನೆ ಆವರಣದಲ್ಲಿ ಅತೀ ಗಣ್ಯರು, ಗಣ್ಯರು, ವಿಶೇಷ ಆಹ್ವಾನಿತರು ಹಾಗೂ ಆಹ್ವಾನಿತರಿಗಾಗಿ ಪ್ರತ್ಯೇಕ ಎನ್‌ಕ್ಲೋಸರ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನ 12 ಗಂಟೆಯಿಂದಲೇ ಎಲ್ಲಾ ದ್ವಾರಗಳ ಮೂಲಕ ಪ್ರವೇಶಾವಕಾಶ ಕಲ್ಪಿಸಲಾಗಿತ್ತು. ಅಲ್ಲಲ್ಲಿ ಪಾಸ್ ಗೊಂದಲ, ಪಾರ್ಕಿಂಗ್ ಅವ್ಯವಸ್ಥೆ, ಟ್ರಾಫಿಕ್ ಜಾಮ್ ಉಂಟಾಗಿ ಜನರಿಗೆ ತೊಂದರೆ ಉಂಟಾಯಿತು. ವಿಜಯದಶಮಿ ಮೆರವಣಿಗೆಯುದ್ದಕ್ಕೂ ಸಾವಿರಾರು ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು. ಒಟ್ಟಾರೆ ಮಳೆಯನ್ನು ಹೊರತುಪಡಿಸಿ ಯಾವುದೇ ಅಹಿತಕರ ಘಟನೆಗಳು ನಡೆಯದೆ ವಿಜೃಂಭಣೆಯಿಂದ ಶಾಂತಿಯುತ ಜಂಬೂ ಸವಾರಿ ಸಂಪನ್ನಗೊಂಡಿತು.

ಮಾರ್ಗದುದ್ದಕ್ಕೂ ಮೊಬೈಲ್‌ನಲ್ಲಿ ಜಂಬೂ ಸವಾರಿ ಚಿತ್ರೀಕರಿಸಿ ಸಂಭ್ರಮ



ಮೈಸೂರು, ಅ.12(ಎಂಕೆ)- ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಕೇಂದ್ರ ಬಿಂದುವಾದ ಜಂಬೂಸವಾರಿ ಮೆರವಣಿಗೆ ಕಣ್ತುಂಬಿಕೊಂಡು ಭಕ್ತರು ತಮ್ಮ ಮೊಬೈಲ್‌ಗಳಲ್ಲಿ ಫೋಟೋ, ವಿಡಿಯೋ ತೆಗೆದು ಸಂಭ್ರಮಿಸಿದರು. ಮಳೆಯ ನಡುವೆಯೂ ಅತ್ತಿತ್ತ ಸರಿಯದೆ ನೆರೆದಿದ್ದ ಭಕ್ತ ಸಮೂಹ, ನಾಡದೇವಿ ಚಾಮುಂಡೇಶ್ವರಿಯನ್ನು ಹೊತ್ತ ಅಂಬಾರಿ ಆನೆ ಅಭಿಮನ್ಯು ಕಾಣುತ್ತಿದ್ದಂತೆಯೇ ಜಯಘೋಷ ಮೊಳಗಿಸಿದರು. ಅಲ್ಲದೆ ಪ್ರತಿಯೊಬ್ಬರು ದೇವಿಯನ್ನು ವೈಭವದ ದರ್ಶನವನ್ನು ತಮ್ಮ ಮೊಬೈಲ್‌ಗಳಲ್ಲಿ ಸೆರೆಹಿಡಿದರು.

ಭಕ್ತರ ಕಣ್ಣುಗಳ ಜೊತೆಗೆ ಮೊಬೈಲ್ ಕ್ಯಾಮರಾ ಕಣ್ಣುಗಳು ಅವಿಸ್ಮರಣೀಯ ದೃಶ್ಯವನ್ನು ಸೆರೆಹಿಡಿದವು. ಅಲ್ಲದೆ ಕಲಾತಂಡಗಳ ನೃತ್ಯ ಪ್ರದರ್ಶನ, ಸ್ತಬ್ಧ ಚಿತ್ರಗಳ ಆತ್ಯಾಕರ್ಷಕ ವಿನ್ಯಾಸಗಳನ್ನು ಕ್ಲಿಕ್ಕಿಸಿಕೊಂಡು ಸಂತಸಪಟ್ಟರು. ಹಾಗೆಯೇ ನಿಂತಲ್ಲೇ, ಕೂತಲ್ಲೇ ಸೆಲ್ಫಿ ತೆಗೆದುಕೊಳ್ಳುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಪೊಲೀಸರು ಫೋಟೋ ತೆಗೆಯುವಲ್ಲಿ ತಲ್ಲೀನ: ಜಂಬೂ ಸವಾರಿ ಮಾರ್ಗದುದ್ದಕ್ಕೂ ಬಂದೋಬಸ್ತ್‌ಗಾಗಿ ನಿಯೋಜಿಸಿದ್ದ ಬಹುತೇಕ ಪೊಲೀಸರು ನಾಡದೇವಿಯನ್ನು ಕಂಡು ಪುಳಕಗೊಂಡರಲ್ಲದೆ ಅಂಬಾರಿ ಜೊತೆಗೆ ತಾವು ಕಾಣುವಂತೆ ಫೋಟೋ ಹಾಗೂ ಸೆಲ್ಫಿಗಳನ್ನು ತೆಗೆದುಕೊಂಡು ಖುಷಿಪಟ್ಟರು. ಕೆಲವರು ಶೂಗಳನ್ನು ಕಳಚಿ ಕೈ ಮುಗಿದು ನಾಡದೇವಿಗೆ ನಮಿಸಿದರು.

ಟಾರ್ಚ್‌ಲೈಟ್ ಆಫ್ ಮಾಡಿ: ಚಿನ್ನದ ಅಂಬಾರಿ ಬರುತ್ತಿದ್ದಂತೆ ಮೊಬೈಲ್‌ನಲ್ಲಿ ಫೋಟೊ ಕ್ಲಿಕ್ಕಿಸುವ ಭರದಲ್ಲಿ ಟಾರ್ಚ್‌ಲೈಟ್ ಆನ್ ಮಾಡಿದ್ದವರಿಗೆ ಗದರುತ್ತಿದ್ದ ನಿಯೋಜಿತ ಸಿಬ್ಬಂದಿ, ಮೊಬೈಲ್ ಟಾರ್ಚ್‌ಲೈಟ್ ಆಫ್ ಮಾಡುವಂತೆ ಸೂಚಿಸುತ್ತಿದ್ದರು. ಟಾರ್ಚ್ ಲೈಟ್ ಆನ್ ಮಾಡಬೇಡಿ. ಆನೆಗಳು, ಕುದುರೆಗಳು ಗಾಬರಿಯಾಗುವ ಹಿನ್ನಲೆಯಲ್ಲಿ ಮಾರ್ಗದುದ್ದಕ್ಕೂ ಮೊಬೈಲ್ ಟಾರ್ಚ್‌ಲೈಟ್ ಆಫ್ ಮಾಡಿಸಿದರು.

ಮಂಗಳವಾದ್ಯಗೋಷ್ಠಿ ಕಲಾವಿದರು-ಪೊಲೀಸರ ನಡುವೆ ಪಿರಿಪಿರಿ!

ಮೈಸೂರು, ಅ.12(ಎಂಕೆ)- ಅಂಬಾರಿ ಆನೆ ಮುಂದೆ ಸಾಗಲು ಅವಕಾಶ ಮಾಡಿಕೊಡುವಂತೆ ಮಂಗಳ ವಾದ್ಯಗೋಷ್ಠಿ ಕಲಾವಿದರು ಪೊಲೀಸರೊಂದಿಗೆ ವಾಗ್ವಾದಕ್ಕಿಳಿದ ಘಟನೆ ಕೆ.ಆರ್.ವೃತ್ತದಲ್ಲಿ ನಡೆಯಿತು.

ಅಂಬಾರಿ ಆನೆ ಮುಂದೆ ಮಂಗಳವಾದ್ಯ ಸಾಗುವುದು ಸಂಪ್ರದಾಯ. ಆದರೆ ಅಂಬಾರಿಯನ್ನು ಪೊಲೀಸರೇ ಸುತ್ತುವರಿದಿರುತ್ತೀರಿ. ನಮಗೂ ಅವಕಾಶ ಮಾಡಿಕೊಡಿ ಎಂದು ಕಲಾವಿದರು ರೊಚ್ಚಿಗೆದ್ದರು. ಅಲ್ಲದೆ ಹೋಗಲಿ ಎಂದು ಸ್ವಲ್ಪ ಮುಂದೆಯೇ ಸಾಗುತ್ತಿದ್ದರೆ ಅದಕ್ಕೂ ಅವಕಾಶ ಕೊಡದೆ ಹಿಂದಿನಿಂದ ಬಂದು ತಳ್ಳುತ್ತೀರಿ ಎಂದು ರೇಗಾಡಿದರು. ಇದರಿಂದ ಐದಾರು ನಿಮಿಷಗಳ ಕಾಲ ಸ್ಥಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಯಿತು. ಪೊಲೀಸರು ಹಾಗೂ ಕಲಾವಿದರ ಜಗಳ ಕಂಡು ಸ್ಥಳಕ್ಕಾಗಮಿಸಿದ ಹಿರಿಯ ಪೊಲೀಸ್ ಅಧಿಕಾರಿಗಳು, ಕಲಾವಿದರನ್ನು ಸಮಾದಾನ ಪಡಿಸಿದರು. ಸ್ವಲ್ಪ



ಮುಂದೆಯೇ ಸಾಗಿ. ನಿಮ್ಮನ್ನು ಇನ್ಯಾರು ತಳ್ಳುವುದಿಲ್ಲ ಎಂದು ಹೇಳಿದ್ದರಿಂದ ಮಂಗಳವಾದ್ಯಗೋಷ್ಠಿ ಕಲಾವಿದರು ಮೆರವಣಿಗೆಯಲ್ಲಿ ಮುನ್ನಡೆದರು.


ಭಾರತೀಯ ರೈಲ್ವೆಯ ವಂದೇ ಭಾರತ್ ಎಕ್ಸ್‌ಪ್ರೆಸ್


ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಕಿರುಪರಿಚಯ ಸ್ತಬ್ಧಚಿತ್ರ


ಕೆಎಂಎಫ್‌ನ ಕ್ಷೀರಭಾಗ್ಯ, ಕ್ಷೀರ ಸಂಜೀವಿನಿ ಯೋಜನೆಗಳ ಪ್ರಗತಿಪಥ


ಕೊಡಗಿನ ಹಾರಂಗಿ ಜಲಾಶಯ


ಸ್ತಬ್ಧಚಿತ್ರ ಉಪಸಮಿತಿಯ ಸಾಮಾಜಿಕ ನ್ಯಾಯ


ಧಾರವಾಡ ಜಿಪಂನ ಇಸ್ರೋ ಗಗನಯಾನದಲ್ಲಿ ಹಣ್ಣಿನ ನೊಣಗಳು


ಉತ್ತರ ಕನ್ನಡದ ಮುರುಡೇಶ್ವರ ಬೃಹತ್ ಶಿವನ ಮೂರ್ತಿ

ವಿಜಯದಶಮಿಗೆ ಭಾರೀ ಪೊಲೀಸ್ ಭದ್ರತೆ

ನಿರ್ವಿಘ್ನವಾಗಿ ನೆರವೇರಿದ ದಸರಾ ಜಂಬೂ ಸವಾರಿ

ಮೈಸೂರು, ಅ. 12(ಆರ್‌ಕೆ)- ಸಾಂಸ್ಕೃತಿಕ ನಗರಿಯಲ್ಲಿ ಇಂದು ನಡೆದ ವಿಶ್ವವಿಖ್ಯಾತ ದಸರಾ ಜಂಬೂ ಸವಾರಿ ಮೆರವಣಿಗೆಗೆ ಭಾರೀ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ವಿಜಯದಶಮಿ ಮೆರವಣಿಗೆಯಲ್ಲಿ ಲಕ್ಷಾಂತರ ಮಂದಿ ಪಾಲ್ಗೊಂಡಿದ್ದ ಕಾರಣ ಅರಮನೆ ಆವರಣ, ಹೊರಭಾಗದ ದ್ವಾರಗಳು, ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಬಂಬೂ ಬಜಾರ್, ಹೈವೇ ಸರ್ಕಲ್ ಸೇರಿದಂತೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ರಾಜಮಾರ್ಗದಲ್ಲಿ ಸಾವಿರಾರು ಪೊಲೀಸರನ್ನು ನಿಯೋಜಿಸಲಾಗಿತ್ತು. ಅದೇ ರೀತಿ ಬನ್ನಿಮಂಟಪದಲ್ಲಿ ನಡೆದ ಪಂಜಿನ ಕವಾಯತು ಮತ್ತು ಡ್ರೋಣ್ ಪ್ರದರ್ಶನಕ್ಕೂ ಇನ್ನಿಲ್ಲದ ಭದ್ರತೆ ಒದಗಿಸಿ, ಕಟ್ಟೆಚ್ಚರ ವಹಿಸಲಾಗಿತ್ತು.

ಓರ್ವ ಎಡಿಜಿಪಿ, ಮೂವರು ಡಿಐಜಿ, 10 ಮಂದಿ ಎಸ್ಪಿ ಮಟ್ಟದ ಅಧಿಕಾರಿಗಳು, 20 ಮಂದಿ ಅಡಿಷನಲ್ ಎಸ್ಪಿಗಳು, 40 ಮಂದಿ ಡಿವೈಎಸ್ಪಿಗಳು, 200ಕ್ಕೂ ಹೆಚ್ಚು ಇನ್‌ಸ್ಪೆಕ್ಟರ್‌ಗಳು ಸೇರಿದಂತೆ ವಿಜಯದಶಮಿ ಮೆರವಣಿಗೆಗೆ ಸುಮಾರು 7 ಸಾವಿರ ಪೊಲೀಸ್ ಸಿಬ್ಬಂದಿಯನ್ನು ವಿಶೇಷ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಕೆಎಸ್‌ಆರ್‌ಪಿ, ಮೌಂಟೆಡ್ ಅಶ್ವಾರೋಹಿದಳ, ನಗರ ಸಶಸ್ತ್ರ ಮೀಸಲು ಪಡೆ, ಚಾಮುಂಡಿ ಕಮಾಂಡೋ ಪಡೆ, ಡಿಎಆರ್, ರಾಜ್ಯ ಕೈಗಾರಿಕಾ ಭದ್ರತಾ ಪಡೆ, ಎನ್‌ಸಿಸಿ, ಗೃಹರಕ್ಷಕ ದಳ, ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳ, ಶ್ವಾನ ದಳದ ಸಿಬ್ಬಂದಿಗಳನ್ನು ಇಂದಿನ ಜಂಬೂ ಸವಾರಿ ಮೆರವಣಿಗೆ ಭದ್ರತೆಗಾಗಿ ಬಳಸಿಕೊಳ್ಳಲಾಗಿತ್ತು.

ದಕ್ಷಿಣ ವಲಯ ಡಿಐಜಿ ಡಾ. ಬೋರಲಿಂಗಯ್ಯ, ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಸ್ಪಿ ಎನ್. ವಿಷ್ಣುವರ್ಧನ, ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾಹ್ನವಿ, ಎ. ನಾಗಪ್ಪ ಅವರ ನೇತೃತ್ವದಲ್ಲಿ ಕಳೆದ ಒಂದು ವಾರದಿಂದ ದಸರಾ ವಿಶೇಷ ಬಂದೋಬಸ್ತ್‌ಗೆ ಆಗಮಿಸಿದ್ದ ಹೊರ ಜಿಲ್ಲೆಗಳ ಹೆಚ್ಚುವರಿ ಪೊಲೀಸ್ ಸಿಬ್ಬಂದಿಗೆ ಭದ್ರತಾ ಕರ್ತವ್ಯದ ಬಗ್ಗೆ ಕೆಪಿಎ ಮತ್ತು ಸಿಎಆರ್ ಮೈದಾನದಲ್ಲಿ ತರಬೇತಿ ನೀಡಿ, ಸಜ್ಜುಗೊಳಿಸಲಾಗಿತ್ತು. ಅಲ್ಲದೇ, ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿ, ರಾಜ್ಯಪಾಲರು, ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳು, ಸಚಿವರು, ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಸೇರಿದಂತೆ ಅತೀ ಗಣ್ಯರು ಹಾಗೂ ಗಣ್ಯರು ಸಾಗುವ ಮಾರ್ಗದಲ್ಲಿ ಸುಗಮ ಸಂಚಾರ ವ್ಯವಸ್ಥೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿತ್ತು.

ಅರಮನೆ ಆವರಣ, ಸುತ್ತಮುತ್ತಲಿನ ರಸ್ತೆಗಳು, ವಿಜಯದಶಮಿ ಮೆರವಣಿಗೆ ಸಾಗುವ ಮಾರ್ಗ ಹಾಗೂ ಪಂಜಿನ ಕವಾಯತು ಮೈದಾನದಲ್ಲಿ ಅಳವಡಿಸಿರುವ ಹೆಚ್ಚುವರಿ ಸಿಸಿ ಕ್ಯಾಮರಾಗಳು, ಎಐ ಕ್ಯಾಮರಾಗಳಲ್ಲಿ ಸೆರೆ ಹಿಡಿದ ನೇರ ದೃಶ್ಯಾವಳಿಗಳನ್ನು ನಜರ್ ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿಯ ಕಂಟ್ರೋಲ್ ರೂಂನಲ್ಲಿ ವೀಕ್ಷಿಸಿ, ಏನೇ ಲೋಪ-ದೋಷ ಕಂಡು ಬಂದರೆ ಕರ್ತವ್ಯನಿರತ ಸಮೀಪದ ಪೊಲೀಸ್ ಅಧಿಕಾರಿಗಳಿಗೆ ರವಾನಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಅಲ್ಲದೇ, ಸುಮಾರು 500ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಮಫ್ತಿಯಲ್ಲಿ ಕರ್ತವ್ಯ ನಿರ್ವಹಿಸಿ ಜನಜಂಗುಳಿಯಲ್ಲಿ ಉಂಟಾಗಬಹುದಾದ ತೊಂದರೆಯನ್ನು ಗಮನಿಸಿ, ಅಹಿತಕರ ಘಟನೆಯನ್ನು ತಪ್ಪಿಸುವ ನಿಟ್ಟಿನಲ್ಲಿ ನಿಗಾ ವಹಿಸಿದ್ದರಲ್ಲದೇ ಮೊಬೈಲ್ ಕಮಾಂಡ್ ವಾಹನದಲ್ಲಿ ಅಳವಡಿಸಿದ್ದ ಕ್ಯಾಮರಾಗಳ ಮೂಲಕ ಪರಿಸ್ಥಿತಿ ನಿಭಾಯಿಸುವ ಮೂಲಕ ಇಂದಿನ ವಿಶ್ವವಿಖ್ಯಾತ ವಿಜಯದಶಮಿ ಮೆರವಣಿಗೆ ಶಾಂತಿಯುತವಾಗಿ ನಡೆಯುವಲ್ಲಿ ವಿಶೇಷ ಪೊಲೀಸ್ ಭದ್ರತಾ ವ್ಯವಸ್ಥೆ ಯಶಸ್ವಿಯಾಗಿದೆ.

ಮುಂಜಾಗ್ರತಾ ಕ್ರಮವಾಗಿ ಮೆರವಣಿಗೆ ಮಾರ್ಗದಲ್ಲಿ ಅಗ್ನಿಶಾಮಕ ದಳ, ಆಂಬುಲೆನ್ಸ್, ಸೆಸ್ಕ್, ಅರಣ್ಯ ಇಲಾಖೆ ಸಿಬ್ಬಂದಿ ಸಾಗಿ ಯಾವುದೇ ಸಂದರ್ಭದಲ್ಲೂ ತಕ್ಷಣ ಕ್ರಮ ಕೈಗೊಳ್ಳಲು ಸಜ್ಜಾಗಿದ್ದವು. ಜೊತೆಗೆ ಕೆಆರ್, ಚೆಲುವಾಂಬ, ಜೆಎಸ್‌ಎಸ್, ಸೂಪರ್ ಸ್ಪೆಷಾಲಿಟಿ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ವಾರ್ಡ್‌ಗಳು, ಹಾಸಿಗೆಗಳು, ವೈದ್ಯರು, ಸಿಬ್ಬಂದಿ, ಔಷಧಿಗಳನ್ನು ಮೀಸಲಾಗಿರಿಸಲಾಗಿತ್ತು. ನಗರ ಪೊಲೀಸ್ ಘಟಕದ ವತಿಯಿಂದ ಮೈಸೂರಿನ ಲಾಡ್ಜ್, ವಸತಿಗೃಹಗಳು, ಪೇಯಿಂಗ್ ಗೆಸ್ಟ್‌ಗಳು ಹಾಗೂ ಮೆರವಣಿಗೆ ಮಾರ್ಗದ ಇಕ್ಕೆಲಗಳ 200 ಮೀಟರ್ ವ್ಯಾಪ್ತಿಯಲ್ಲಿ ಇರುವ ವಸತಿ ಮನೆಗಳಲ್ಲಿ ವಾಸ್ತವ್ಯವಿದ್ದ ಅತಿಥಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅವರ ಚಲನವಲನಗಳ ಬಗ್ಗೆ ನಿಗಾ ವಹಿಸಲಾಗಿತ್ತು. ಒಟ್ಟಾರೆ ಈ ಬಾರಿಯ ದಸರಾ ಮಹೋತ್ಸವವು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಶಾಂತಿಯುತವಾಗಿ ಪೂರ್ಣಗೊಂಡಿದ್ದು, ದೇಶ ವಿದೇಶಗಳಿಂದ ಆಗಮಿಸಿದ್ದ ಪ್ರವಾಸಿಗರು, ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ವಿಶ್ವವಿಖ್ಯಾತ ನವರಾತ್ರಿ ಉತ್ಸವದಲ್ಲಿ ಪಾಲ್ಗೊಂಡು ಸುರಕ್ಷಿತವಾಗಿ ಹಿಂತಿರುಗುವಂತಾಗಿದೆ.



ಮೈಸೂರು ಮಿತ್ರ ಭಾನುವಾರ 13 ಅಕ್ಟೋಬರ್ 2024

ಮಡಿಕೇರಿಯಲ್ಲಿ ವಿಜೃಂಭಣೆಯ ದಸರಾ ಶೋಭಾಯಾತ್ರೆ



ನೆರೆದಿದ್ದ ಜನಸ್ತೋಮವನ್ನು ಆಕರ್ಷಿಸಿದ ಶ್ರೀ ಕುಂದೂರು ಮೊಟ್ಟೆ ಚೌಟಿ ಮಾರಿಯಮ್ಮ ಮಂಟಪ.

ಮಡಿಕೇರಿ, ಅ.12– ಕೊಡಗನ್ನಾಳಿದ ಹಾಲೇರಿ ರಾಜವಂಶಸ್ಥರ ಅವಧಿಯಲ್ಲಿ ಆರಂಭಗೊಂಡು ಎರಡು ಶತಮಾನಕ್ಕೂ ಹೆಚ್ಚಿನ ಐತಿಹಾಸಿಕ ಹಿನ್ನೆಲೆಯ ಮಡಿಕೇರಿ ದಸರಾ ಉತ್ಸವದ ದಶಮಂಟಪಗಳ ಶೋಭಾಯಾತ್ರೆ ವಿಜೃಂಭಣೆಯಿಂದ ನಡೆಯಿತು. ಕಾಲಿಡಲು ಸ್ಥಳವಿಲ್ಲದಂತೆ ಕಿಕ್ಕಿರಿದು ನೆರೆದಿದ್ದ ಸಹಸ್ರಾರು ಪ್ರೇಕ್ಷಕರ ಸಮ್ಮುಖದಲ್ಲಿ ದಶ ಮಂಟಪಗಳು ದೇವ ಲೋಕವನ್ನೇ ಧರೆಗಿಳಿಸುವ ಮೂಲಕ 'ದುಷ್ಟ ಸಂಹಾರ ಶಿಷ್ಟ ಪರಿಪಾಲನೆಯ' ಸಂದೇಶ ಸಾರಿದವು. ಆ ಮೂಲಕ ದಸರಾ ವೀಕ್ಷಣೆಗೆ ಆಗಮಿಸಿದ್ದ ಮಂದಿ ಮಡಿಕೇರಿ ದಸರಾ ವೈಭವವನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು. ಈ ಬಾರಿ ಅದ್ದೂರಿಯ ಉತ್ಸವ ನಡೆಸಲು ಮಡಿಕೇರಿ ದಸರಾ ಸಮಿತಿ ಹಾಗೂ ದಶ ಮಂಟಪಗಳು ನಿರ್ಧರಿಸಿದ್ದರಿಂದ ದಸರಾ ಉತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಸಂಪ್ರದಾಯದಂತೆ ನಗರದ ಪೇಟೆ ಶ್ರೀರಾಮ ಮಂದಿರದ ಆಕರ್ಷಕ ಮಂಟಪಕ್ಕೆ ಶನಿವಾರ ರಾತ್ರಿ ಪೂಜೆ ಸಲ್ಲಿಸುವ ಮೂಲಕ ದಶ ಮಂಟಪಗಳ ಶೋಭಾಯಾತ್ರೆ ಆರಂಭ ಕಂಡಿತು. ಒಂದೂವರೆ ಶತಮಾನದ ಭವ್ಯ ಇತಿಹಾಸ ಹೊಂದಿರುವ ಪೇಟೆ ಶ್ರೀರಾಮ ಮಂದಿರದ 'ಲೋಕ ಕಲ್ಯಾಣಕ್ಕಾಗಿ ವಿಷ್ಣುವಿನ ಮತ್ಸ್ಯ ಅವತಾರ' ಪೌರಾಣಿಕ ಕಥೆಯನ್ನಾಧರಿಸಿದ ಮಂಟಪ ಶಕ್ತಿ ದೇವತೆಗಳ ಹಿರಿಯ ಅಕ್ಕಳಾದ ಕುಂದುರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ ದೇವಾಲಯಕ್ಕೆ ತೆರಳಿ ಅಲ್ಲಿ ಪೂಜೆ ಸಲ್ಲಿಸಿ ಎಲ್ಲಾ ಮಂಟಪಗಳನ್ನು ಶೋಭಾಯಾತ್ರೆಗೆ ಆಹ್ವಾನಿಸಿತು.

ವಿಜೃಂಭಣೆಯ ಶೋಭಾಯಾತ್ರೆ: ಪೇಟೆ ಶ್ರೀರಾಮಮಂದಿರ ಮಂಟಪದ ಆಗಮನದೊಂದಿಗೆ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ ದೇವಾಲಯದಿಂದ ಆರಂಭಗೊಂಡ ಮಂಟಪ 'ಕದಂಬ ಕೌಶಿಕೆ ಕಥಾ ಭಾಗವನ್ನಾಧರಿಸಿದ ಕಲಾಕೃತಿಗಳೊಂದಿಗೆ ಶೋಭಾಯಾತ್ರೆ ನಡೆಸಿತು. ಶ್ರೀಕಂಚಿ ಕಾಮಾಕ್ಷಿಯಮ್ಮ ದೇವಾಲಯದ ಮಂಟಪದಲ್ಲಿ ಈ ಬಾರಿ 'ಸಿಂಧೂರ ಗಣಪತಿ' ಎಂಬ ಕಥಾ ಹಂದರವನ್ನು ಅಳವಡಿಸಲಾಗಿತ್ತು. ಶ್ರೀಕೋಟೆ ಮಾರಿಯಮ್ಮ ದೇವಾಲಯ 'ಶ್ರೀ ಕೃಷ್ಣ ಬಾಲ ಲೀಲೆ ಕಂಸ ವಧೆ' ಎಂಬ ಪೌರಾಣಿಕ ಹಿನ್ನೆಲೆಯ ಮಂಟಪ ಸಿದ್ಧಪಡಿಸಿ ಶೋಭಾಯಾತ್ರೆಯಲ್ಲಿ ಪಾಲ್ಗೊಂಡರೆ, ಶ್ರೀ ದಂಡಿನ ಮಾರಿಯಮ್ಮ ದೇವಾಲಯದ 'ಕೌಶಿಕೆ ಮಹಾತ್ಮೆ' ಎಂಬ ಕಥಾಭಾಗವನ್ನು ಮಂಟಪದಲ್ಲಿ ಅಳವಡಿಸಿಕೊಂಡು ಶೋಭಾಯಾತ್ರೆ ನಡೆಸಿತು. ಶ್ರೀಕೋಟೆ ಮಹಾಗಣಪತಿ ದೇವಾಲಯ ಮಂಟಪದಲ್ಲಿ 'ಶ್ರೀ ಮಹಾ ಗಣಪತಿಯಿಂದ ಅಜಗರ ಮತ್ತು ಶಲಭಾಸುರ ದೈತ್ಯರ ಸಂಹಾರ' ಎಂಬ ಕಥಾ ಸಾರಾಂಶವನ್ನು ಅಳವಡಿಸಲಾಗಿತ್ತು. ಶ್ರೀ ಕೋದಂಡ ರಾಮ ದೇವಾಲಯ 'ಶ್ರೀ ರಾಮನಿಂದ ರಾವಣ ಸಂಹಾರ' ಎಂಬ ಸಾರಾಂಶ ಹೊಂದಿದ್ದರೆ, ಶ್ರೀಕರವಲೆ ಭಗವತಿ ಮಹಿಷ ಮರ್ಧಿನಿ ದೇವಾಲಯದ 'ಶ್ರೀ ಕೊಲ್ಲೂರು ಮೂಕಾಂಬಿಕೆ ಮಹಿಮೆ' ದೇಚೂರು ಶ್ರೀ ರಾಮ ಮಂದಿರದ 'ಕಾಳಿಂಗ ಮರ್ಧನ', ಶ್ರೀ ಚೌಡೇಶ್ವರಿ ದೇವಾಲಯದ ಮಂಟಪದಲ್ಲಿ 'ಅರುಣಾಸುರನ ವಧೆ' ಕಥಾಭಾಗವನ್ನು ಹೊಂದಿದ ಮಂಟಪಗಳು ಜನ ಮನವನ್ನು ಸೂರೆಗೊಂಡವು.

ಎಲ್ಲಾ 10 ಮಂಟಪಗಳಲ್ಲೂ ಪೌರಾಣಿಕ ಕಥಾ ಹಂದರಕ್ಕೆ ತಕ್ಕಂತೆ ಕಲಾಕೃತಿಗಳನ್ನು ಅಳವಡಿಸಲಾಗಿತ್ತು. ಆಕರ್ಷಕ ದಿಂಡಿಗಲ್ ಲೈಟ್ ಬೋರ್ಡ್, ಕಥಾ ಸಾರಾಂಶದ ಕಲಾಕೃತಿಗಳ ಚಲನ ವಲನ ಆಧರಿಸಿ ಸ್ಪಾಟ್‌ಲೈಟ್‌ಗಳು, ದೇವಾನು ದೇವತೆಗಳು ಹಾಗೂ ಅಸುರ ಶಕ್ತಿಗಳ ನಡುವಿನ ಸಂಹಾರ ಯುದ್ಧದ ಸನ್ನಿವೇಶಗಳಲ್ಲಿ ಭೂಮಿಯನ್ನೇ ನಡುಗಿಸುವ ರೀತಿಯಲ್ಲಿದ್ದ ಸಂಭಾಷಣೆಗೆ ಹೊಂದಿಕೆಯಾಗುವ ಧ್ವನಿವರ್ಧಕಗಳು, ಕೂಲ್ ಫೈಯರ್, ಪೇಪರ್ ಬ್ಲಾಸ್ಟ್‌ಗಳನ್ನು ಅಳವಡಿಸಲಾಗಿತ್ತು. ದಶ ಮಂಟಪಗಳು ದುಷ್ಟ ಸಂಹಾರದ ಸಂದೇಶ ನೀಡಿದ ಬಳಿಕ ಎಲ್ಲೆಡೆ ಶಾಂತಿ ಮಂತ್ರ ಘೋಷ ಮೊಳಗಿದವು.

ವಿಜಯದಶಮಿಯ ದಿನವಾದ ಶನಿವಾರ ಮಧ್ಯಾಹ್ನದವರೆಗೆ ಇದ್ದ ಬಿಸಿಲು ಬಳಿಕ ಮರೆಯಾಗಿ ಮಳೆ ಸುರಿಯಿತು. ದಶ ಮಂಟಪಗಳಲ್ಲಿ ಅಂತಿಮ ಹಂತದ ತಯಾರಿ ನಡೆಸುತ್ತಿದ್ದ ಮಂಟಪ ಸಮಿತಿ ನೂರಾರು ಸದಸ್ಯರು ಸುರಿಯುವ ಮಳೆಯನ್ನೂ ಲೆಕ್ಕಿಸದೇ ತಮ್ಮ ಕಾರ್ಯದಲ್ಲಿ ಮಗ್ನರಾಗಿದ್ದು ಕಂಡು ಬಂತು. ಹೀಗಿದ್ದರೂ ನಿರೀಕ್ಷೆಯಂತೆ ಸಂಜೆಯ ಬಳಿಕ ಜಿಲ್ಲೆ ಹಾಗೂ ಹೊರ ಜಿಲ್ಲೆಗಳ ಸಹಸ್ರಾರು ಮಂದಿ ಐತಿಹಾಸಿಕ ನಗರಿ ಮಡಿಕೇರಿಗೆ ಆಗಮಿಸುವುದರೊಂದಿಗೆ ಮಂಜಿನ ನಗರಿಯ ದಸರಾ ಸಂಭ್ರಮದಲ್ಲಿ ತೇಲಿದರು.

ದೇವಲೋಕ ಸೃಷ್ಟಿಸಿದ ದಶಮಂಟಪಗಳು, ಅಪಾರ ಜನಸಾಗರ



ಶ್ರೀ ದಂಡಿನ ಮಾರಿಯಮ್ಮ ಮಂಟಪ.



ಶ್ರೀ ಕೋಟೆ ಮಾರಿಯಮ್ಮ ಮಂಟಪ.

"ಮಡಿಕೇರಿ ದಸರಾದ ಮೂಲ ಕೇಂದ್ರ ಬಿಂದುವಾದ 4 ಶಕ್ತಿ ದೇವತೆಗಳ ಕರಗಗಳು ಬಣ್ಣ ಬಣ್ಣದ ಪುಷ್ಪಗಳಿಂದ ಅಲಂಕೃತಗೊಂಡು ತಮ್ಮ ಮೂಲ ಸ್ಥಾನದಲ್ಲಿ ಪೂಜೆ ಸಲ್ಲಿಸಿ ಬನ್ನಿ ಮಂಟಪದತ್ತ ತೆರಳಿದವು. ಶೋಭಾಯಾತ್ರೆಯಲ್ಲಿ ಸಾಗುತ್ತಿದ್ದ ದಶಮಂಟಪದಿಂದ ಕರಗಗಳು ಪೂಜೆಯನ್ನೂ ಸ್ವೀಕರಿಸಿ ನರ್ತಿಸಿ ಹರಸಿದವು. ಬೆಳಗಿನ ಜಾವ ಬನ್ನಿ ಮಂಟಪಕ್ಕೆ ತೆರಳಿದ ಕರಗಗಳು ಮೊದಲು ಬನ್ನಿ ಕಡಿದು ತಮ್ಮ ಮೂಲ ಸ್ಥಾನಕ್ಕೆ ಆಗಮಿಸಿದವು. ಬಳಿಕ ದಶ ಮಂಟಪಗಳು ಬನ್ನಿ ಕಡಿಯುವ ಮೂಲಕ ದಸರಾ ಉತ್ಸವಕ್ಕೆ ತೆರೆ ಎಳೆದವು.



ಶ್ರೀ ದೇಚೂರು ರಾಮಮಂದಿರ ಮಂಟಪ.



ಶ್ರೀ ಪೇಟೆ ಶ್ರೀರಾಮಮಂದಿರ ಮಂಟಪ.

ಬಿಗಿ ಬಂದೋಬಸ್ತ್

ಮಡಿಕೇರಿ ದಸರಾಕ್ಕೆ ಜನ ಪ್ರವಾಹವೇ ಹರಿದು ಬಂದ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿತ್ತು. ನಗರ ಪ್ರವೇಶಿಸುವ ಎಲ್ಲಾ ರಸ್ತೆಗಳಲ್ಲೂ ಚೆಕ್ ಪೋಸ್ಟ್, ಸಿ.ಸಿ. ಕ್ಯಾಮರಾ ಅಳವಡಿಕೆ ಮಾಡಲಾಗಿತ್ತು. ಮಂಟಪಗಳು ಹಾಗೂ ಜನ ದಟ್ಟಣೆ ಉಂಟಾಗುವ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು. ಶೋಭಾಯಾತ್ರೆ ಸುಗಮವಾಗಿ ಸಾಗಲು ಅನುಕೂಲವಾಗುವಂತೆ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಎಲ್ಲಾ ವಾಹನಗಳನ್ನು ತೆರವು ಮಾಡಲಾಗಿತ್ತು. ಮಾತ್ರವಲ್ಲದೇ ಶನಿವಾರ ಮಧ್ಯಾಹ್ನದ ಬಳಿಕ ವಾಹನಗಳ ನಗರ ಪ್ರವೇಶವನ್ನು ತಡೆ ಹಿಡಿಯಲಾಗಿತ್ತು. ಸ್ಥಳೀಯರು ಮತ್ತು ತುರ್ತು ಸಂದರ್ಭಕ್ಕೆ ಮಾತ್ರವೇ ವಾಹನ ಸಂಚಾರಕ್ಕೆ ಅನುವು ಮಾಡಲಾಗಿತ್ತು. ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ, ಆರ್.ಎಂ.ಸಿ. ಮೈದಾನ, ಸಂತ ಜೋಸೆಫರ ಶಾಲಾ ಮೈದಾನ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮೈದಾನಗಳಲ್ಲಿ ಹೊರ ಊರಿನ ಪ್ರವಾಸಿಗರ ವಾಹನಗಳ ಪಾರ್ಕಿಂಗ್ ಮಾಡಲು ಅವಕಾಶ ನೀಡಲಾಗಿತ್ತು.



ಮಡಿಕೇರಿಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಶಕ್ತಿದೇವತೆ ಪೂಜೆ ಸಲ್ಲಿಸಿದರು.

ಶಕ್ತಿ ದೇವತೆಗಳು, ದಶ ಮಂಟಪಕ್ಕೆ ಡಿಸಿಎಂ ವಿಶೇಷ ಪೂಜೆ

ಮಡಿಕೇರಿ, ಅ.12– ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಅವರು ದಸರಾ ಹಿನ್ನೆಲೆಯಲ್ಲಿ ಶುಕ್ರವಾರ ಮಡಿಕೇರಿಗೆ ಆಗಮಿಸಿದ್ದಾರೆ. ಬಳಿಕ ನಗರದ ನಾಲ್ಕು ಶಕ್ತಿ ದೇವತೆಗಳ ದೇವಾಲಯಗಳು ಮತ್ತು ವಿವಿಧ ದಶ ಮಂಟಪ ದೇವಾಲಯಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್ ನಾಡಿನಲ್ಲೆಡೆ ಆಯುಧ ಪೂಜೆ ಮಾಡಲಾಗುತ್ತಿದೆ. ಹಾಗೆಯೇ ವಿಜಯದಶಮಿ ಉತ್ಸವ ಆಚರಿಸಲಾಗುತ್ತಿದೆ. ಎಲ್ಲೆಡೆ ದಸರಾ ಹಬ್ಬವನ್ನು ವಿಶೇಷವಾಗಿ ಆಚರಿಸಲಾಗುತ್ತಿದ್ದು, ತಾಯಿ ಕಾವೇರಿ ಮಾತೆ ಎಲ್ಲರಿಗೂ ಸಮೃದ್ಧಿ ತುಂಬಲಿ ಎಂದು ಪ್ರಾರ್ಥಿಸಿದ್ದೇನೆ ನಾಡಿನಲ್ಲಿ ಹಿಂದಿನಿಂದಲೂ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬರಲಾಗಿದೆ. ದಸರಾ ಹಬ್ಬವನ್ನು ವಿಶೇಷವಾಗಿ ಆಚರಿಸಲಾಗುತ್ತಿದೆ. ಈ ಬಾರಿ ಉತ್ತಮ ಮಳೆ, ಬೆಳೆಯಾಗಿದ್ದು ಎಲ್ಲರಲ್ಲಿ ಸಂತಸ ತಂದಿದೆ ಎಂದರು.

ನಗರದ ಶಕ್ತಿ ದೇವತೆಗಳಾದ ಕುಂದೂರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ, ದಂಡಿನ ಮಾರಿಯಮ್ಮ, ಕೋಟೆ ಮಾರಿಯಮ್ಮ, ಕಂಚಿ ಕಾಮಾಕ್ಷಿ, ಶ್ರೀ ಕೋಟೆ ಗಣಪತಿ, ಪೇಟೆ ಶ್ರೀ ರಾಮಮಂದಿರ, ಶ್ರೀ ಕೋದಂಡರಾಮ ದೇವಾಲಯ, ಶ್ರೀ ಮುತ್ತಪ್ಪ ದೇವಾಲಯ, ಕರವಾಲೇ ಭಗವತಿ ದೇವಾಲಯ, ಶ್ರೀ ಚೌಡೇಶ್ವರಿ ದೇವಾಲಯ, ವಿಜಯ ವಿನಾಯಕ, ದೇಚೂರು ಶ್ರೀರಾಮ ಮಂದಿರ ಹೀಗೆ ವಿವಿಧ ದೇವಸ್ಥಾನಗಳಿಗೆ ಭೇಟಿ ನೀಡಿ ವಿಶೇಷಪೂಜೆ ಸಲ್ಲಿಸಿದರು. ಇದೇ ಸಂದರ್ಭ ದಶ ಮಂಟಪ ಹಾಗೂ ದೇವಾಲಯ ಸಮಿತಿಗಳಿಂದ ಡಿ.ಕೆ.ಶಿವಕುಮಾರ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಉಸ್ತುವಾರಿ ಸಚಿವ ಬೋಸರಾಜು, ಶಾಸಕರುಗಳಾದ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಡಾ.ಮಂತರ್‌ಗೌಡ ಹಾಜರಿದ್ದರು.

ಜಿಲ್ಲೆಯಲ್ಲಿ ಆಯುಧ ಪೂಜೆ, ವಿಜಯದಶಮಿ ಆಚರಣೆ



ಆಯುಧಪೂಜೆಗೆ ಹೂವು, ಹಣ್ಣು ಖರೀದಿಸುತ್ತಿರುವುದು.



ವೆಂಕಟಯ್ಯನ ಛತ್ರ ಗ್ರಾಮದಲ್ಲಿ ಕ್ರೀಡಾ ಸಾಮಾಗ್ರಿಗಳಿಗೆ ಪೂಜೆ ಸಲ್ಲಿಸುವ ಮೂಲಕ ಆಯುಧಪೂಜೆ.

ಚಾಮರಾಜನಗರ, ಅ.12– ಜಿಲ್ಲೆಯಾದ್ಯಂತ ಶುಕ್ರವಾರ ಆಯುಧ ಪೂಜೆ ಮತ್ತು ಶನಿವಾರ ವಿಜಯದಶಮಿ ಹಬ್ಬವನ್ನು ಸಂಭ್ರಮ-ಸಡಗರದಿಂದ ಆಚರಿಸಲಾಯಿತು.

ಆಯುಧಪೂಜೆ ಅಂಗವಾಗಿ ಸರ್ಕಾರಿ ಕಚೇರಿಗಳು, ಬಸ್ ಡಿಪೋ ನೌಕರರು, ಲಾರಿ, ಆಟೋ ನಿಲ್ದಾಣದಲ್ಲಿ ಚಾಲಕರು, ಮನೆ, ಅಂಗಡಿ-ಮುಂಗಟ್ಟುಗಳಲ್ಲಿ ವರ್ತಕರು ಹಾಗೂ ಕುಟುಂಬಸ್ಥರು ಪೂಜೆ ಸಲ್ಲಿಸಿ, ಸಿಹಿ ಹಂಚಿದರು. ಜಿಲ್ಲೆಯಾದ್ಯಂತ ಎಲ್ಲಾ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆಯಿತು.

ಹಬ್ಬದ ಅಂಗವಾಗಿ ಮನೆಗಳ ಮುಂದೆ ಮಹಿಳೆಯರು ಬಣ್ಣ-ಬಣ್ಣದ ರಂಗೋಲಿಗಳನ್ನು ಬಿಡಿಸಿ, ಮನೆ ಬಾಗಿಲಿಗೆ ಮಾವಿನ ಸೊಪ್ಪಿನ ತೋರಣ ಹಾಕಿ ಅಲಂಕರಿಸಿದ್ದರು.

ಪುರುಷರು ವಾಹನ, ಯಂತ್ರೋಪಕರಣಗಳನ್ನು, ಹಾಗೂ ಆಯುಧಗಳನ್ನು ಸ್ವಚ್ಛಗೊಳಿಸಿ, ಬಾಳೆಕಂದು, ಹೂವಿನ ಹಾರಗಳಿಂದ ವಾಹನಗಳನ್ನು ಸಿಂಗರಿಸಿದ್ದರು. ವಾಹನಗಳಿಗೆ ವಿಭೂತಿ, ಕುಂಕುಮ, ಅರಿಸಿನ ಹಚ್ಚಿ, ಮಂಗಳಾರತಿ ಮಾಡಿ, ತೆಂಗಿನಕಾಯಿ, ಕುಂಬಳಕಾಯಿ ಒಡೆದು ಪೂಜೆ ಸಲ್ಲಿಸಿದರು.

ಬಳಿಕ, ದೇವಾಲಯಗಳಿಗೆ ಕುಟುಂಬ ಸಮೇತರಾಗಿ ತೆರಳಿ ಪೂಜೆ ಸಲ್ಲಿಸಿದರು. ಸ್ನೇಹಿತರು, ನೆಂಟರಿಷ್ಟರೊಂದಿಗೆ ಸೇರಿ ಅವಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಕ್ರೀಡಾ ಸಾಮಗ್ರಿಗೆ ಪೂಜೆ: ಆಯುಧ ಪೂಜೆ ಹಬ್ಬದ ಪ್ರಯುಕ್ತ ತಾಲೂಕಿನ ವೆಂಕಟಯ್ಯನಛತ್ರ ಗ್ರಾಮದಲ್ಲಿ ಯುವಕರು ಖೋ-ಖೋ ಹಾಗೂ ವಾಲಿಬಾಲ್ ಅಂಕಣವನ್ನು ಹಾಗೂ ಕ್ರೀಡಾ ಸಾಮಗ್ರಿಗಳನ್ನು ಸ್ವಚ್ಛಗೊಳಿಸಿ, ಅಲಂಕರಿಸಿ ಪೂಜೆ ಸಲ್ಲಿಸಿದರು.

ಈ ವೇಳೆ ಗ್ರಾಪಂ ಸದಸ್ಯ ಕೃಷ್ಣಮೂರ್ತಿ, ಮುಖಂಡರಾದ ಗೌಡಿಕೆ ನಂಜುಂಡಸಾಮಿ, ಗೌಡಿಕೆ ರಾಘವೇಂದ್ರ, ಮಹೇಶ್, ಪ್ರಭು, ಮಂಜು, ನವೀನ್, ತರಬೇತಿದಾರರಾದ ಸತೀಶ್, ರಾಜು ಹೊಸೂರು, ಭುವನೇಶ್, ಕ್ಲಬ್ ಸದಸ್ಯರಾದ ಮಣಿಕಂಠ, ಚಂದು, ಪ್ರಸಾದ್, ಆನಂದ್, ಸೂರ್ಯ, ಅರ್ಜುನ್, ದರ್ಶನ್, ಕೆಂಪರಾಜು, ವೆಂಕಟೇಶ್, ಮಹೇಶ್ ಸೇರಿದಂತೆ ಕ್ರೀಡಾಪಟುಗಳು, ಗ್ರಾಮಸ್ಥರು ಹಾಜರಿದ್ದರು.

ಮಾಂಸದ ವ್ಯಾಪಾರ ಜೋರು: ನಗರದ ಮಾಂಸದ ಮಾರುಕಟ್ಟೆಯಲ್ಲಿ ಕುರಿ, ಮೇಕೆ, ಆಡು, ಕೋಳಿ ಮಾಂಸ ವ್ಯಾಪಾರ ಜೋರಾಗಿತ್ತು

ಆಯುಧಪೂಜೆ ಮುಗಿದ ನಂತರ ಬಹುತೇಕರು ಮಾರನೇ ದಿನ ಮನೆಯಲ್ಲಿ ಮಾಂಸದ ಅಡುಗೆ ಮಾಡುವುದು ವಾಡಿಕೆ. ಹೀಗಾಗಿ, ಶನಿವಾರ ಬೆಳಿಗ್ಗೆಯಿಂದಲೇ ಕುರಿ, ಮೇಕೆ, ಆಡು, ಕೋಳಿ ಮಾಂಸದ ವ್ಯಾಪಾರ ಜೋರಾಗಿತ್ತು. ಕೆಲವರು ಶನಿವಾರ ಮಾಂಸ ಸೇವನೆ ಮಾಡುವುದಿಲ್ಲ. ಹೀಗಾಗಿ, ಭಾನುವಾ ರವೂ ಉತ್ತಮ ವ್ಯಾಪಾರವಾಗುವ ನಿರೀಕ್ಷೆ ಯಲ್ಲಿ ವ್ಯಾಪಾರಿಗಳು ಇದ್ದಾರೆ. ಕೋಳಿ ಮಾಂಸಕ್ಕೆ ಕೆಜಿಗೆ 200ರೂ., ಕುರಿ ಮಾಂಸ ಕೆಜಿಗೆ 700ರೂ.ಗೆ ಮಾರಾಟವಾಗುತ್ತಿದೆ.

ಇನ್ನೂ ಮೈಸೂರಿನ ದಸರಾ ಜಂಬೂ ಸವಾರಿಯನ್ನು ಕಣ್ತುಂಬಿಕೊಳ್ಳಲು ಜಿಲ್ಲಾ ಕೇಂದ್ರ ಸೇರಿದಂತೆ ಜಿಲ್ಲೆಯಿಂದ ಸಾವಿರಾರು ಮಂದಿ ತೆರಳಿದ್ದರು. ಹೀಗಾಗಿ, ಮೈಸೂರಿನತ್ತ ಪ್ರಯಾಣ ಮಾಡಿದ ಬಸ್‌ಗಳು ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದವು.

ಅಲ್ಲದೇ ಶುಕ್ರವಾರ, ಶನಿವಾರ ಆಯುಧ ಪೂಜೆ, ವಿಜಯದಶಮಿ ಭಾನುವಾರ ಸರ್ಕಾರಿ ರಜೆ ಹಿನ್ನೆಲೆಯಲ್ಲಿ ಜಿಲ್ಲೆಯ ಪ್ರವಾಸಿತಾಣಗಳು, ಧಾರ್ಮಿಕ ಕ್ಷೇತ್ರಗಳಿಗೆ ನೂರಾರು ಸಂಖ್ಯೆಯಲ್ಲಿ ಜನರು ಭೇಟಿ ನೀಡಿದ್ದರು.

ಚೆಂಡು ಸಂಸ್ಕರಣ ಘಟಕ ವಿರೋಧಿಸಿ ಪ್ರತಿಭಟನೆ

ಚಾಮರಾಜನಗರ, ಅ.12– ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಗುರುವಿನಪುರ ಗ್ರಾಮದಲ್ಲಿ ಚೆಂಡು ಸಂಸ್ಕರಣ ಘಟಕ ಪ್ರಾರಂಭಿಸದಂತೆ ಒತ್ತಾಯಿಸಿ ನಗರದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಂಘಟನೆಯ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಚೆಂಡು ಸಂಸ್ಕರಣ ಘಟಕಕ್ಕೆ ಅನುಮೋದನೆ ನೀಡಲು ಮುಂದಾದರೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ನಿರಂತರವಾಗಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಯಾವುದೇ ಕಾರಣಕ್ಕೂ ಗುರುವಿನಪುರ ಗ್ರಾಮದಲ್ಲಿ ಘಟಕ ಪ್ರಾರಂಭಕ್ಕೆ ಅವಕಾಶ ನೀಡಬಾರದು. ಇದರಿಂದ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಅಂತರ್ಜಲ ಕಲುಷಿತಗೊಂಡು ಗ್ರಾಮಸ್ಥರ ಆರೋಗ್ಯದ ಮೇಲೆ ದುಷ್ಪರಿಣಾಮ ಹಾಗೂ ಗಬ್ಬು ವಾಸನೆ ಬರುವ ಸಾಧ್ಯತೆ ಇರುತ್ತದೆ. ಹೀಗಾಗಿ, ಜಿಲ್ಲಾಡಳಿತ ಮತ್ತು ಸರ್ಕಾರ ನಿಗದಿಗೊಳಿಸಿರುವ ಕೈಗಾರಿಕಾ ಅಭಿವೃದ್ಧಿ ಪ್ರದೇಶದಲ್ಲಿ ಈ ಕಾರ್ಖಾನೆ ಪ್ರಾರಂಭಿಸಲು ಅವಕಾಶ ನೀಡಲಿ, ಅದನ್ನು ಬಿಟ್ಟು ಗ್ರಾಮೀಣ ಭಾಗದಲ್ಲಿ ಈ ಅವಕಾಶವನ್ನು ನೀಡಿದರೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ರಾಜ್ಯ ಪ್ರಧಾನ ಕಾರ್ಯದರ್ಶಿ ಮಲಿಯೂರು ಹರ್ಷ, ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ಜಿಲ್ಲಾ ಉಪಾಧ್ಯಕ್ಷ ಮಲಿಯೂರು ಪ್ರವೀಣ್, ಅರಳಿಕಟ್ಟೆ ಕುಮಾರ್, ಬಾಬು, ಮಂಜುನಾಥ್, ಗುರುವಿನಪುರ ಗ್ರಾಮದ ಗ್ರಾಮಸ್ಥರು ಮತ್ತು ಪದಾಧಿಕಾರಿಗಳು ಹಾಜರಿದ್ದರು.



ಚೆಂಡು ಸಂಸ್ಕರಣ ಘಟಕ ಪ್ರಾರಂಭಿಸದಂತೆ ಒತ್ತಾಯಿಸಿ ರೈತರು ಪ್ರತಿಭಟನೆ ನಡೆಸುತ್ತಿರುವುದು.

ಪಿಎಚ್.ಡಿ ಪದವಿ

ಮೈಸೂರು, ಅ.12–ಡಾ.ಎಸ್. ನಟರಾಜ್ ಮಾರ್ಗದರ್ಶನದಲ್ಲಿ ಸಿ. ಉಮೇಶ್ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕಬ್ಬಹಳ್ಳಿಯಲ್ಲಿ ಧಾರಾಕಾರ ಮಳೆ

ಮನೆಗಳಿಗೆ, ಶಾಲೆಗೆ ನೀರು ನುಗ್ಗಿ ಅವಾಂತರ



ಬೇಗೂರು(ಗುಂಡ್ಲುಪೇಟೆ): ಸಮೀಪದ ಕಬ್ಬಹಳ್ಳಿ ಗ್ರಾಮದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯ ಪರಿಣಾಮ ಅಂಬೇಡ್ಕರ್ ಹೊಸ ಬಡಾವಣೆಯ ಮನೆ ಮತ್ತು ಶಾಲೆಗೆ ನೀರು ನುಗ್ಗಿದ್ದು ಇಡೀ ಬಡಾವಣೆಯೇ ಜಲಾವೃತಗೊಂಡಿದೆ.

ಇದು ಕಬ್ಬಹಳ್ಳಿ ಗ್ರಾಮದ ಹೊಸ ಬಡಾವಣೆಯಾಗಿದ್ದು, ಈ ಬಡಾವಣೆಗೆ ಸರಿಯಾದ ರಸ್ತೆ, ಚರಂಡಿ ಇಲ್ಲದೆ ಇರುವುದರಿಂದ ಮನೆಗಳಿಗೆ ನೀರು ನುಗ್ಗಿ ಮನೆಯಲ್ಲಿದ್ದ ದವಸ ಧಾನ್ಯ ಹಾಗೂ ಪೀಠೋಪಕರಣಗಳು ಮಳೆ ನೀರಿನಿಂದ ತೋಯ್ದು ಹಾಳಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಮತ್ತು ಆವರಣಕ್ಕೂ ನೀರು ನುಗ್ಗಿದೆ, ಆದರೆ ದಸರಾ ರಜಾ ಇದ್ದ ಕಾರಣ ವಿದ್ಯಾರ್ಥಿ ನಿಲಯದಲ್ಲಿ ಯಾವ ವಿದ್ಯಾರ್ಥಿಗಳು ಇರಲಿಲ್ಲ ಹಾಗೂ ಕಬ್ಬಳ್ಳಿ ಗ್ರಾಮದ ಮಹದೇವ, ನಾಗಮ್ಮ, ಗೌರಮ್ಮ, ಮಹದೇವಯ್ಯ ನಂಜುಂಡಸ್ವಾಮಿ ಗಂಗಾಂಬಿಕೆ ಸೇರಿದಂತೆ ಸುಮಾರು 20ಕ್ಕೂ ಹೆಚ್ಚು ಮನೆಗಳು ಮಳೆ ನೀರಿನಿಂದ ಆವೃತವಾಗಿವೆ

ನಿರ್ಲಕ್ಷ್ಯ: ಕಬ್ಬಳಿ ಗ್ರಾಮದ ಅಂಬೇಡ್ಕರ್ ಬಡಾವಣೆ ಹಾಗೂ ಅಂಬೇಡ್ಕರ್ ಹೊಸ ಬಡಾವಣೆಗಳ ಚರಂಡಿಗಳು ಹೂಳು ತುಂಬಿದ್ದು ನೀರು ಹರಿಯದ ಕಾರಣ ಚರಂಡಿಯ ನೀರು ಮನೆ ಮತ್ತು ವಿದ್ಯಾರ್ಥಿ ನಿಲಯಕ್ಕೆ ನುಗ್ಗಿದೆ. ಈ ಭಾಗದ ನಿವಾಸಿಗಳು ಗ್ರಾಮ ಪಂಚಾಯಿತಿಗೆ ಈಗಾಗಲೇ ಹಲವು ಬಾರಿ ಮನವಿ ಮಾಡಿದ್ದರೂ ಗ್ರಾಮ ಪಂಚಾಯತಿ ಅಧಿಕಾರಿಗಳು ದಿವ್ಯ ನಿರ್ಲಕ್ಷ್ಯ ತಾಳಿದೆ.

ರಾಜ್ಯ ಮಟ್ಟದ ಕರಾಟೆಯಲ್ಲಿ ಸಾಧನೆ

ಚಾಮರಾಜನಗರ, ಅ.10– ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಮಹಾ ರಾಜ ಕ್ರೀಡಾಂಗಣ ದಲ್ಲಿ ನಡೆದ ರಾಜ್ಯ ಮಟ್ಟದ ಕರಾಟೆ ಪಂದ್ಯಾವಳಿ ಚಾಮರಾಜನಗರ ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿ ಕರಾಟೆ ಪಟುಗಳು ಭಾಗವಹಿಸಿ ವಿಜೇತರಾಗಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಕತಾ ಮತ್ತು ಕುಮಿತೆ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿ ಸಮಗ್ರ ಪ್ರಶಸ್ತಿ, ಪ್ರಮಾಣಪತ್ರ ಪಡೆದಿದ್ದಾರೆ.

ಅಭಿನಂದನೆ: ವಿಜೇತ ಕರಾಟೆ ಪಟುಗಳನ್ನು ಮುಖ್ಯ ಕರಾಟೆ ತರಬೇತುದಾರರು ಹಾಗೂ ವಕೀಲರಾದ ಸೆನ್ಸಾಯ್ ರಾಜೇಂದ್ರ, ತರಬೇತುದಾರರಾದ ಸೆನ್ಸಾಯ್ ಯೋಗೀಶ್ ಅಭಿನಂದಿಸಿದ್ದಾರೆ.



ಕರಾಟೆ ಪಂದ್ಯಾವಳಿಯಲ್ಲಿ ಸಾಧನೆಗೈದ ನಾಗಮಾರ್ಷಲ್ ಆರ್ಟ್ಸ್ ಅಕಾಡೆಮಿ ಕರಾಟೆಪಟುಗಳು.

ನಾಗಾಪುರ ದೀಕ್ಷಾ ಭೂಮಿ ಪ್ರವಾಸ ಯಾತ್ರೆಗೆ ಚಾಲನೆ



ನಾಗಪುರದ ದೀಕ್ಷಾ ಭೂಮಿ ಪ್ರವಾಸಕ್ಕೆ ಜಿಲ್ಲಾಧಿಕಾರಿ ಶಿಲ್ಪನಾಗ್ ಹಸಿರು ನಿಶಾನೆ ತೋರಿದರು.

ಚಾಮರಾಜನಗರ, ಅ.12– ಮಹಾರಾಷ್ಟ್ರ ರಾಜ್ಯದ ನಾಗಪುರದ ದೀಕ್ಷಾ ಭೂಮಿಗೆ ಚಾನಗರ ಜಿಲ್ಲೆಯಿಂದ ಹೊರಟ 422 ಯಾತ್ರಿಗಳ ಬಸ್‌ಗಳಿಗೆ ಜಿಲ್ಲಾಡಳಿತ ಭವನದ ಮುಂದೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆಯಿಂದ ಆಯೋಜನೆ ಮಾಡಿರುವ ಮಹಾರಾಷ್ಟ್ರದ ನಾಗಪುರ ದೀಕ್ಷಾ ಭೂಮಿಗೆ ಐದು ದಿನಗಳ ಕಾಲ ಪ್ರವಾಸವನ್ನು, ಐದು ಕೆಎಸ್ ಆರ್‌ಟಿಸಿ ಲಕ್ಸುರಿ ಬಸ್‌ಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಇಂದು ಹೊರಟ ಜಿಲ್ಲೆಯ 422 ಯಾತ್ರಿಗಳ ಬಸ್‌ಗೆ ಜಿಲ್ಲಾಡಳಿತ ಭವನದ ಮುಂದೆ ಚಾಲನೆ ದೊರೆಯಿತು.

ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್, ಬೌದ್ಧ ಧರ್ಮವನ್ನು ಸ್ವೀಕರಿಸಿದ ಡಾ.ಬಿ.ಆರ್.ಅಂಬೇಡ್ಕರ್ ಅವರ ದೀಕ್ಷಾ ಭೂಮಿಯಾಗಿರುವ ಮಹಾರಾಷ್ಟ್ರದ ನಾಗಪುರಕ್ಕೆ ತೆರಳುತ್ತಿರುವ ಎಲ್ಲರಿಗೂ ಶುಭವಾಗಲಿ, ತಮ್ಮೆಲ್ಲರ ಪ್ರಯಾಣ ಸುಖ ಕರಣವಾಗಿರಲಿ. ಸುರಕ್ಷಿತವಾಗಿ ಹೋಗಿ, ಮತ್ತೇ ಸುರಕ್ಷಿತವಾಗಿ ಜಿಲ್ಲೆಗೆ ವಾಪಸ್ ಆಗಬೇಕೆಂದರು.

ವಿಜಯ ದಶಮಿ ಮತ್ತು ಡಾ.ಬಾಬಾ ಸಾಹೇಬರು ಬೌದ್ಧ ಧಮ್ಮ ಸ್ವೀಕರಿಸಿದ 68ನೇ ಧಮ್ಮ ಚಕ್ರ ಪರಿವರ್ತನೆಯ ಅಂಗವಾಗಿ ದೇಶ ವಿದೇಶಗಳಿಂದ ಸುಮಾರು 50 ಲಕ್ಷ ಜನ ನಾಗಪುರ ದೀಕ್ಷಾ ಭೂಮಿಯಲ್ಲಿ ಭಾಗವಹಿಸಲಿದ್ದಾರೆ. ಈ ಮಹತ್ವದ ಕಾರ್ಯಕ್ಕೆ ರಾಜ್ಯದ ನಾನಾ ಭಾಗದಿಂದ ಬರುತ್ತಿದ್ದಾರೆ. ಅದೇ ನಮ್ಮ ಜಿಲ್ಲೆಯಿಂದಲೂ 5 ಬಸ್‌ಗಳ ಮೂಲಕ ಬುದ್ಧ ಅನುಯಾಯಿಗಳನ್ನು ಕಳುಹಿಸಿಕೊಡಲಾಗುತ್ತಿದೆ ಎಂದರು.

ಜಿ.ಪಂ. ಸಿಇಓ ಮೋನಾರೋತ್, ಸಮಾಜ ಕಲ್ಯಾಣಾಧಿಕಾರಿ ಎನ್.ಮುನಿರಾಜು, ಉಪ ವಿಭಾಗಾಧಿಕಾರಿ ಮಹೇಶ್, ಪರಿಶಿಷ್ಟ ಪಂಗಡಗಳ ಜಿಲ್ಲಾಧಿಕಾರಿ ಬಿಂದ್ಯಾ, ತಹಸೀಲ್ದಾರ್ ಗಿರಿಜಾ, ಸಹಾಯಕ ನಿರ್ದೇಶಕ ಎಚ್.ಎನ್. ನಂಜುಂಡೇಗೌಡ, ರಾಜು, ಉಡಿಗಾಲ ವಾರ್ಡನ್ ಸಿ.ಎ.ರಾಜು, ಮುಖಂಡರಾದ ಸಿ.ಎಂ.ಕೃಷ್ಣಮೂರ್ತಿ, ಸಿ.ಎಂ.ನರಸಿಂಹ ಮೂರ್ತಿ, ಬುದ್ಧ ಮಹೇಶ್, ಸಿದ್ದರಾಜು ಇತರರು ಇದ್ದರು.

ಮೇಲುಕೋಟೆಯಲ್ಲಿ ವೈಭವದ ವಿಜಯದಶಮಿ ಉತ್ಸವ

● ರಾಜಾಲಂಕಾರದಲ್ಲಿ ಕಂಗೊಳಿಸಿದ ಚಲುವ ● 25 ಸಾವಿರಕ್ಕೂ ಅಧಿಕ ಭಕ್ತಾದಿಗಳಿಂದ ದರ್ಶನ




ವಿಜಯದಶಮಿಯಂದು ದೇವರ ದರ್ಶನಕ್ಕಾಗಿ ಭಕ್ತರ ದಂಡು ಹೆಚ್ಚಾಗಿ ಕಂಡುಬಂದಿತು. ಮೇಲುಕೋಟೆ ಮೂಲಮೂರ್ತಿ ಶ್ರೀಚೆಲ್ವತಿರುನಾರಾಯಣಸ್ವಾಮಿಗೆ ವಿಜಯದಶಮಿ ನಿಮಿತ್ತ ಶನಿವಾರ ಮಹಾರಾಜರ ಅಲಂಕಾರ ಮಾಡಲಾಗಿರುವುದನ್ನು ಬಲ ಚಿತ್ರದಲ್ಲಿ ಕಾಣಬಹುದು

ಮೇಲುಕೋಟೆ,ಅ.12–ಭಕ್ತರ ಇಷ್ಟಾರ್ಥ ಕರುಣಿಸಲು ಧರೆಗಿಳಿದ ಚಕ್ರವರ್ತಿಯಂತೆ ರಾಜಾಲಂಕಾರದಲ್ಲಿ ಕಂಗೊಳಿಸಿದ ಮೈಸೂರು ಯದುವಂಶದ ಕುಲದೈವ ಮಹಾವಿಷ್ಣು, ಮೇಲುಕೋಟೆ ಶ್ರೀಚೆಲುವನಾರಾಯಣ ಸ್ವಾಮಿಯ ವಿಜಯದಶಮಿಯ ಉತ್ಸವ ಶನಿವಾರ ವೈಭವದಿಂದ ನೆರವೇರಿತು. ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ 25 ಸಾವಿರಕ್ಕೂ ಹೆಚ್ಚು ಭಕ್ತರು ಸ್ವಾಮಿಯ ದರ್ಶನ ಕಣ್ತುಂಬಿಕೊಂಡರು.

ತ್ರೇತಾಯುಗದಲ್ಲಿ ಶ್ರೀರಾಮಚಂದ್ರ ದಶಕಂಠ ರಾವಣೇಶ್ವರನನ್ನು ಸಂಹಾರ ಮಾಡಿದ ಪ್ರತೀಕವಾಗಿ ವಿಜಯದಶಮಿ ಆಚರಣೆಯಲ್ಲಿದ್ದು, ನಾಡಿನ ಪ್ರಖ್ಯಾತ ದೇವಾಲಯಗಳಲ್ಲಿ ವಿಶೇಷ ಆಚರಣೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಭಾರತೀಯ ಪರಂಪರೆಯಂತೆ ಮೇಲುಕೋಟೆಯಲ್ಲಿ ಸಾಕ್ಷಾತ್ ಶ್ರೀಮನ್ನಾರಾಯಣನಿಗೆ ವಿಜಯದಶಮಿ ಉತ್ಸವ ನೆರವೇರುತ್ತಾ ಬಂದಿದ್ದು, ವಿಜಯದಶಮಿಯಂದು ಶಂಖ, ಚಕ್ರ, ಗದಾ, ಪದ್ಮ, ಕತ್ತಿ, ಬಿಲ್ಲುಬಾಣ ಮುಂತಾದ ದಿವ್ಯಾಯುಧಗಳನ್ನು ಧರಿಸಿ ಮೈಸೂರು ಪೇಟ, ಜರತಾರಿ ರೇಷ್ಮೆ ಪಂಚೆಯೊಂದಿಗೆ ಭವ್ಯವಾಗಿ ಅಲಂಕೃತನಾದ ಮೂಲಮೂರ್ತಿ ಚೆಲ್ವತಿರುನಾರಾಯಣ ಸ್ವಾಮಿ ದಿವ್ಯಸುಂದರ ರೂಪವನ್ನು ಭಕ್ತರು ಜಯಘೋಷ ಹಾಕುತ್ತಾ ಕಣ್ತುಂಬಿಕೊಂಡರು.

ಬೆಳಿಗ್ಗೆಯಿಂದಲೇ ಸಹಸ್ರಾರು ಸಂಖ್ಯೆಯ ಭಕ್ತರು ತಂಡೋಪ ತಂಡವಾಗಿ ದೇವಾಲಯಕ್ಕೆ ಆಗಮಿಸಿ ಸರತಿ ಸಾಲಿನಲ್ಲಿ ನಿಂತು ಚೆಲುವನ ದರ್ಶನ ನಡೆಯುತ್ತಿದ್ದ ದೃಶ್ಯ ಇಡೀ ದಿನ ಕಂಡು ಬಂದಿತು. ಬೆಟ್ಟದೊಡೆಯ ಕುಂತಸಿಂಗ್ರಿ, ಯೋಗ ನರಸಿಂಹ ಸ್ವಾಮಿಗೂ ಪಾರಂಪರಿಕವಾದ ಮಹಾರಾಜರ ಅಲಂಕಾರ ಮಾಡಲಾಯಿತು. ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಶೀಲಾ, ಪಾರುಪತ್ತೇಗಾರರಾದ ಸ್ಥಾನಾಚಾರ್ಯ ಶ್ರೀನಿವಾಸ ನರಸಿಂಹನ್ ಗುರೂಜಿ, ದೇಗುಲದ ಕೈಂಕರ್ಯಪರರು ಮತ್ತು ಸಿಬ್ಬಂದಿಯ ಸಹಕಾರದಲ್ಲಿ ವಿಜಯದಶ ಮಿಯನ್ನು ಯಶಸ್ವಿಯಾಗಿ ನಡೆಸಲಾಯಿತು. ಬೆಳಿಗ್ಗೆ ಸತತವಾಗಿ ಮಳೆ ಸುರಿಯುತ್ತಿದ್ದರೂ ಸಹ ದೇವರ ದರ್ಶನಕ್ಕೆ ಯಾವುದೇ ತೊಂದರೆಯಾಗಲಿಲ್ಲ

ಪೊಲೀಸ್ ಇಲಾಖೆ ಮತ್ತು ಗ್ರಾಮ ಪಂಚಾಯಿತಿ ಭಕ್ತರ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಮಾಡದ ಕಾರಣ ವಾಹನ ದಟ್ಟಣೆ ಉಂಟಾಗಿತ್ತು. ಶನಿವಾರ, ಭಾನುವಾರ ಹಬ್ಬದ ದಿನಗಳಂದು ಆರೋಗ್ಯಕೇಂದ್ರದ ಮುಂಭಾಗ ಪಾರ್ಕಿಂಗ್ ಮಾಡಬೇಕೆಂದು ಕಳೆದ ವಾರವಷ್ಟೇ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೀಡಿದ ಸಲಹೆ ಜಾರಿಗೆ ಬರದ ಕಾರಣ ಮತ್ತೆ ಪಾರ್ಕಿಂಗ್ ಅವ್ಯವಸ್ಥೆ ಉಂಟಾಗಿತ್ತು. ವೇದಾಂತ ದೇಶಿಕರ ತಿರುನಕ್ಷತ್ರ ಮಹೋತ್ಸವ ಶಠಾರಿ ಮೆರವಣಿಗೆಗೂ ನಿಲ್ಲಿಸಿದ್ದ ಭಕ್ತರ ವಾಹನಗಳಿಂದ ಅಡಚಣೆಯಾಯಿತು. ಭಕ್ತರ ದಟ್ಟಣೆ ನಿಯಂತ್ರಿಸಲು ದೇವಾಲಯಕ್ಕೆ ಪೋಲೀಸ್ ಸಿಬ್ಬಂದಿಯನ್ನು ನಿಯೋಜಿಸದ ಕಾರಣ ದೇವಾಲಯದಲ್ಲೂ ಕೆಲಕಾಲ ನೂಕುನುಗ್ಗಲು ಉಂಟಾಗಿತ್ತು.

ಮಂಡ್ಯದಲ್ಲಿ ಅದ್ಧೂರಿ ಸಾಂಸ್ಕೃತಿಕ ದಸರಾ



ಮಂಡ್ಯ,ಅ.12– ಮಂಡ್ಯ ಯೂಥ್ ಗ್ರೂಪ್ ವತಿಯಿಂದ ವಿಜಯದಶಮಿ ಅಂಗವಾಗಿ ಮಂಡ್ಯ ದಸರಾ ಸಾಂಸ್ಕೃತಿಕ ಉತ್ಸವ ಶನಿವಾರ ಅದ್ಧೂರಿಯಾಗಿ ಜರುಗಿತು. ಮಂಡ್ಯ ಯೂತ್ ಗ್ರೂಪ್ ಅಧ್ಯಕ್ಷ ಡಾ.ಅನಿಲ್‌ಆನಂದ್ ರವರ ನೇತೃತ್ವದಲ್ಲಿ ಮಂಡ್ಯ ಸಾಂಸ್ಕೃತಿಕ ದಸರಾಗೆ ಶಾಸಕ ಗಣಿಗ ರವಿಕುಮಾರ್ ಚಾಲನೆ ನೀಡಿದರು.

ಮಧ್ಯಾಹ್ನ 3.15ರಿಂದ 3.50ರೊಳಗೆ ಸಲ್ಲುವ ಶ್ರವಣನಕ್ಷತ್ರ ಕುಂಭ ಲಗ್ನದಲ್ಲಿ ಶ್ರೀ ಕಾಳಿಕಾಂಬ ದೇವಾಲಯದ ಬಳಿಯ ಗಜೇಂದ್ರಮೋಕ್ಷ ಕೊಳದ ಆವರಣದಲ್ಲಿರುವ ಬನ್ನಿಮರಕ್ಕೆ ಶಾಸಕ ಪಿ.ರವಿಕುಮಾರ್ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿದರು. ನಂತರ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿರುವ ಶ್ರೀ ಚಾಮುಂಡೇಶ್ವರಿ ವಿಗ್ರಹಕ್ಕೆ ಡಾ.ಅನಿಲ್ ಆನಂದ್ ಪೂಜೆ ನೆರವೇರಿಸಿ ಮೆರವಣಿಗೆಗೆ ವಿದ್ಯುಕ್ತ ಚಾಲನೆ ನೀಡಲಾಯಿತು.

ಶ್ರೀ ಚಾಮುಂಡೇಶ್ವರಿ ದೇವಿ ಮೆರವಣಿಗೆಗೆ ಆಕರ್ಷಕ ಜಾನಪದ ಕಲಾತಂಡಗಳು ಸಾಥ್ ನೀಡಿದವು. ನಾದಸ್ವರ, ಕೇರಳ ಚಂಡೆ, ಭದ್ರಕಾಳಿ ವೀರಗಾಸೆ, ಡೊಳ್ಳು ಕುಣಿತ, ಪೂಜಾ ಕುಣಿತ, ಚಿಲಿಪಿಲಿ ಗೊಂಬೆ, ನಾಗರಹೊಳೆ ಜೇನುಕುರುಬರ ಕುಣಿತ, ಸೋಮನ ಕುಣಿತ, ವೀರಮಕ್ಕಳ ಕುಣಿತ, ಬೆಂಕಿ ಭರಾಟೆ, ದೊಣ್ಣೆವರಸೆ, ಕೋಳಿಗೊಂಬೆ, ಹುಲಿವೇಷ, ಗೊರವರ ಕುಣಿತ, ಬಂಡೂರು ಕುರಿ, ಶ್ರೀರಂಗಪಟ್ಟಣ ಡ್ರಮ್ಸ್, ತಮಟೆ, ನಗಾರಿ, ಕಂಸಾಳೆ ಸೇರಿದಂತೆ ಹಲವು ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಮೆರವಣಿಗೆಯು ಶ್ರೀ ಕಾಳಿಕಾಂಬ ದೇವಾಲಯದ ಆವರಣದಿಂದ ಹೊರಟು ಎಸ್.ಡಿ. ಜಯರಾಂ ವೃತ್ತದ ಬಳಿ ಬೆಂಗಳೂರು–ಮೈಸೂರು ಹೆದ್ದಾರಿ ಸೇರಿ ಅಲ್ಲಿಂದ ಮಹಾವೀರ ವೃತ್ತ ತಲುಪಿತು. ನಂತರ ವಿ.ವಿ.ರಸ್ತೆ ಮಾರ್ಗವಾಗಿ ಹೊಸಹಳ್ಳಿ ವೃತ್ತಕ್ಕೆ ಆಗಮಿಸಿತು. ಬಳಿಕ ನೂರಡಿ ರಸ್ತೆ ಮಾರ್ಗವಾಗಿ ತೆರಳಿ ಬನ್ನೂರು ರಸ್ತೆ ಮೂಲಕ ಶ್ರೀ ಚಾಮುಂಡೇಶ್ವರಿ ದೇವಾಲಯದ ಬಳಿ ಮೆರವಣಿಗೆ ಅಂತ್ಯಗೊಂಡಿತು.

ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಗಣಿಗ ರವಿಕುಮಾರ್, ದಸರಾ ಕಾರ್ಯಕ್ರಮವು ರಾಜ್ಯದ ಹಲವು ಜಿಲ್ಲಾ ಕೇಂದ್ರಗಳಲ್ಲಿ ನವರಾತ್ರಿ ಸಂದರ್ಭದಲ್ಲಿ ನಡೆಯುತ್ತಿದ್ದು, ಏಕೆಂದರೆ ಮೈಸೂರು ದಸರಾದ ಮೂಲ ಶ್ರೀರಂಗಪಟ್ಟಣದಲ್ಲಿ ದಸರಾ ಆಚರಣೆಯಾಗುವುದರಿಂದ ಮಂಡ್ಯದಲ್ಲಿ ನಡೆಯಲ್ಲ. ಆದರೆ ಯೂತ್‌ಗ್ರೂಪ್ ನವರು ಮಂಡ್ಯದಲ್ಲಿ ಸಾಂಸ್ಕೃತಿಕ ದಸರಾ ನಡೆಸುತ್ತಿರುವುದು ನಿಜಕ್ಕೂ ವಿಶೇಷ ಎಂದರು.

ಮಂಡ್ಯ ಯೂತ್‌ಗ್ರೂಪ್ ಅಧ್ಯಕ್ಷರ ಡಾ. ಅನಿಲ್ ಆನಂದ್ ಮಾತನಾಡಿ, ಪ್ರತಿವರ್ಷಕ್ಕೂ ಮಂಡ್ಯ ಸಾಂಸ್ಕೃತಿಕ ದಸರಾದ ಮೆರಗು ಹೆಚ್ಚುತ್ತಿದೆ. ಇದಕ್ಕೆ ಪ್ರಮುಖ ಕಾರಣ ನಗರದ ಜನತೆಯ ಬೆಂಬಲ. ಕಳೆದ ಹಲವು ವರ್ಷಗಳಿಂದ ಯಶಸ್ವಿಯಾಗಿ ದಸರಾ ನಡೆಸಿಕೊಂಡು ಬರುತಿದ್ದು, ಮುಂದಿನ ವರ್ಷಗಳಲ್ಲಿ ಮತ್ತಷ್ಟು ಅದ್ಧೂರಿಯಾಗಿ ದಸರಾ ಆಚರಣೆಗೆ ಮುಂದಾಗುತ್ತೇವೆ ಎಂದು ಹೇಳಿದರು.

ಬಸವನಹಳ್ಳಿಯಲ್ಲಿ ಮಳೆಗೆ ಎಮ್ಮೆ ಸಾವು

ಕಿಕ್ಕೇರಿ: ಹೋಬಳಿಯ ಬಸವನಹಳ್ಳಿ ಗ್ರಾಮದಲ್ಲಿ ಮಳೆ ಆರ್ಭಟಕ್ಕೆ ಗರ್ಭ ಧರಿಸಿದ್ದ ಎಮ್ಮೆ ಸಾವಿಗೀಡಾಗಿದೆ.

ಗ್ರಾಮದ ರೈತ ಮಹಿಳೆ ಎಚ್.ಎಸ್. ರೇಣುಕಾ ಲೋಕೇಶ್ ಅವರಿಗೆ ಸೇರಿದ ಎಮ್ಮೆ ಮನೆಯಿಂದ ಹೊರಗಡೆ ಕಟ್ಟಿ ಹಾಕಲಾಗಿದ್ದ ವೇಳೆ ಶನಿವಾರ ತಡ ರಾತ್ರಿಯಲ್ಲಿ ಜೋರು ಮಳೆ ಸುರಿದ ಪರಿಣಾಮ ಸಂಪೂರ್ಣ ನೆನೆದಿದೆ ರೈತ ಮಹಿಳೆಗೆ ಕೊಟ್ಟಿಗೆ ಇಲ್ಲದ ಕಾರಣ ಮನೆಯ ಮುಂದೆ ಎಂದಿನಂತೆ ಎಮ್ಮೆಯನ್ನು ಕಟ್ಟಿ ಹಾಕಲಾಗಿತ್ತು. ಮಳೆಗೆ ಶೀತವಾಗಿ ಎಮ್ಮೆ ಮೃತಪಟ್ಟಿದೆ. ಅಕ್ಕಿಹೆಬ್ಬಾಳುವಿನ ಪಶುವೈದ್ಯಾ ಧಿಕಾರಿ ಮರಣೋತ್ತರ ಪರೀಕ್ಷೆ ನಡೆಸಿದರು.

ಸುಮಾರು 50ಸಾವಿರ ರೂ. ಸಾಲ ಮಾಡಿ ಎಮ್ಮೆ ಖರೀದಿಸಲಾಗಿತ್ತು ಈಗ ದಿಕ್ಕು ತೋಚದಂತಾಗಿದ್ದು ಸಂಬಂಧಪಟ್ಟ ಇಲಾಖೆಯವರು ಸೂಕ್ತ ಪರಿಹಾರ ನೀಡಬೇಕು ಎಂದು ರೇಣುಕಾ ಒತ್ತಾಯಿಸಿದ್ದಾರೆ.

ನಿವೃತ್ತ ಎಎಸ್ಐ ಗುರುಬಸವಯ್ಯ ನಿಧನ



ಕೆ.ಆರ್.ಪೇಟೆ,ಅ.12– ಕೆ.ಆರ್.ಪೇಟೆ ಟೌನ್ ನಿವಾಸಿ, ನಿವೃತ್ತ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಗುರುಬಸವಯ್ಯ(61) ಶನಿವಾರ ಮಧ್ಯಾಹ್ನ ಹೃದಯ ಘಾತದಿಂದ ನಿಧನರಾಗಿದ್ದಾರೆ.

ಸುಮಾರು 30 ವರ್ಷಗಳ ಕಾಲ ಕೆಆರ್.ಪೇಟೆ ಪಟ್ಟಣ, ಗ್ರಾಮಾಂತರ ಮತ್ತು ಕಿಕ್ಕೇರಿ ಠಾಣೆ ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳಲ್ಲಿ ಪೇದೆಯಾಗಿ, ಮುಖ್ಯ ಪೇದೆಯಾಗಿ ನಂತರ ಎಎಸ್ಐ ಆಗಿ ಸೇವೆ ಸಲ್ಲಿದ್ದ ಗುರುಬಸವಯ್ಯ ಅವರು ಕಳೆದ 10ತಿಂಗಳ ಹಿಂದೆಯಷ್ಟೆ ಸೇವೆಯಿಂದ ನಿವೃತ್ತಿ ಹೊಂದಿದ್ದು ವಿಶ್ರಾಂತ ಜೀವನ ನಡೆಸುತ್ತಿದ್ದರು. ಮೃತರು ಪತ್ನಿ ರೇಣುಕ, ಓರ್ವ ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥೀವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಸಾಹುಕಾರ್ ಎಸ್.ಕೆ.ಚಿಕ್ಕಣ್ಣಗೌಡರ ಸಮುದಾಯ ಭವನದ ಹಿಂಭಾಗದ ಅವರ ನಿವಾಸದಲ್ಲಿ ಇರಿಸಲಾಗಿದೆ. ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ 11 ಗಂಟೆಗೆ ಅವರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಲ್ಲೇನಹಳ್ಳಿ ಯಶೋಧಮ್ಮ



ಕೆ.ಆರ್.ಪೇಟೆ,ಅ.12–ತಾಲೂಕಿನ ಬೂಕನಕೆರೆ ಹೋಬಳಿಯ ಬಲ್ಲೇನಹಳ್ಳಿ ಗ್ರಾಮದ ನಿವೃತ್ತ ಗ್ರಾಮ ಲೆಕ್ಕಾಧಿಕಾರಿ ಬಿ.ಕೆ.ಚನ್ನೇಗೌಡರ ಪತ್ನಿ, ಯಶೋದಮ್ಮ(72) ಇಂದು ಮುಂಜಾನೆ ನಿಧನ ಹೊಂದಿದ್ದಾರೆ. ಮೃತರು ಗ್ರಾ.ಪಂ.ಮಾಜಿ ಅಧ್ಯಕ್ಷ ಬಲ್ಲೇನಹಳ್ಳಿ ರಮೇಶ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ ಮೃತ ಯಶೋದಮ್ಮ ಅವರ ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮ ಬಲ್ಲೇನಹಳ್ಳಿಯಲ್ಲಿ ನಡೆಯಿತು.

ಆದಿಚುಂಚನಗಿರಿ ಮಠದಲ್ಲಿ ನವರಾತ್ರಿ ಸಂಭ್ರಮ

ಕೆ.ಆರ್.ಪೇಟೆ,ಅ.12– ಶ್ರೀಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ದಸರಾ–ನವರಾತ್ರಿಯ ಅಂಗವಾಗಿ ಜಗದ್ಗುರು ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು ರತ್ನಖಚಿತ ಚಿನ್ನದ ಕಿರೀಟ ಧರಿಸಿ ರಾಜಪೋಷಾಕಿನಲ್ಲಿ ಭಕ್ತರಿಗೆ ದರ್ಶನ ನೀಡಿದರು.

ಕೆ.ಆರ್.ಪೇಟೆ ತಾಲೂಕಿನ ಹೇಮಗಿರಿ ಶಾಖಾ ಮಠದ ಗೌರವ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡರ ನೇತೃತ್ವದಲ್ಲಿ ನಡೆದ ದಸರಾ–ನವರಾತ್ರಿ ಆದಿಚುಂಚನಗಿರಿ ಕ್ಷೇತ್ರಕ್ಕೆ ಭಕ್ತ ಸಾಗರವೇ ಹರಿದುಬಂದಿತ್ತು.

ಉರಿಗದ್ದುಗೆಯ ಮೇಲೆ ರಾಜಪೋಷಾಕು ಧರಿಸಿ ಸಂಪ್ರದಾಯಿಕ ಪೂಜೆ ಪುರಸ್ಕಾರಗಳನ್ನು ಸಲ್ಲಿಸಿದ ಜಗದ್ಗುರುಗಳು ಧ್ಯಾನಾಸಕ್ತರಾಗಿ ಕುಳಿತು ಭಕ್ತರಿಗೆ ದರ್ಶನ ನೀಡಿ ಲೋಕ ಕಲ್ಯಾಣಕ್ಕೆ ಪ್ರಾರ್ಥನೆ ಸಲ್ಲಿಸಿದರು. ನೆರೆದಿದ್ದ ಭಕ್ತರಿಗೆ ಆಶೀರ್ವಚನ ನೀಡಿದ ಜಗದ್ಗುರು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ನಮ್ಮ ಪೂರ್ವಜರು ಈ ಹಿಂದಿನಿಂದಲೂ ನಡೆಸಿಕೊಂಡು ಬಂದಿರುವ ಧಾರ್ಮಿಕ ಆಚರಣೆಗಳನ್ನು ಶರನ್ನವರಾತ್ರಿಯ 9 ದಿನಗಳೂ ಆಚರಿಸಿ ತಾಯಿ ಶ್ರೀ ಚಾಮುಂಡೇಶ್ವರಿ ದೇವಿ ಹಾಗೂ ಕಾಲ ಭೈರವನಿಗೆ ವಿಶೇಷ ಪೂಜೆ ಸಲ್ಲಿಸಿ ದಸರಾ ದರ್ಬಾರ್ ನಡೆಸಿ ಸರ್ವರಿಗೂ ಒಳಿತಾಗುವಂತೆ ವಿಶೇಷವಾಗಿ ಪ್ರಾರ್ಥನೆ ಸಲ್ಲಿಸಲಾಗಿದೆ ಎಂದು ಸ್ವಾಮೀಜಿ ಹೇಳಿದರು.



ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷರು ಹಾಗೂ ಆಲಂಬಾಡಿ ಕಾವಲು ಮಲ್ಲಿಕಾ ರ್ಜುನ್, ಬೆಡದಹಳ್ಳಿ ಶ್ರೀ ಪಂಚಭೂತೇಶ್ವರ ಮಠದ ಪೀಠಾಧಿ ಪತಿ ಶ್ರೀ ರುದ್ರಮುನಿ ಸ್ವಾಮೀಜಿ, ಉದ್ಯಮಿ ಬಿ.ರಾಜಶೇಖರ್, ಹಿರಿಯ ನ್ಯಾಯವಾದಿ ಬಿ.ನಾಗೇಶ್, ಪೂಜೆಯಲ್ಲಿ ಭಾಗವಹಿಸಿದ್ದರು.

ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಯೇ ದಸರಾ ಸಂಕೇತ



ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಮಠದಲ್ಲಿ ವಿಜಯದಶಮಿ ಪ್ರಯುಕ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರೆ ಸಚಿವ ಸಂಪುಟ ಸದಸ್ಯರು ಉಪಹಾರ ಸೇವಿಸಿದರು.

ಮೈಸೂರು, ಅ.12(ಎಸ್‌ಪಿಎನ್)– ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಯೇ ದಸರಾದ ಸಂಕೇತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಇತರೆ ಸಂಪುಟ ಸಚಿವರು ಹಾಗೂ ಶಾಸಕರು ಶನಿವಾರ ಭೇಟಿ ನೀಡಿ ಉಪಹಾರ ಸೇವಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದರು.

ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಯೇ ದಸರಾದ ಸಂಕೇತ. ವಿಜಯದಶಮಿ, ದಸರಾ ಉತ್ಸವದ ಕೊನೆಯ ದಿನವಾಗಿದ್ದು, ಜಂಬೂಸವಾರಿ ಮೆರವಣಿಗೆ ಹಿನ್ನಲೆ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ನಡೆಯಲಿದೆ. ಈ ಶುಭ ಸಂದರ್ಭದಲ್ಲಿ ನಾಡಿನ ಹಾಗೂ ದೇಶದ ಜನರಿಗೆ ದಸರಾ ಉತ್ಸವದ ಶುಭಾಶಯಗಳನ್ನು ಕೋರುತ್ತೇನೆ. ಈ ಬಾರಿನಲ್ಲಿ ಉತ್ತಮ ಮಳೆ ಹಾಗೂ ಬೆಳೆಯಾಗಿದ್ದು, ನಾಡಿನ ರೈತರಲ್ಲಿ ಸಂತಸ ಮನೆಮಾಡಿದೆ ಎಂದರು. ರಾಜ್ಯದ ಎಲ್ಲಾ ಜಲಾಶಯಗಳು ತುಂಬಿರುವುದು ಸಂತಸದ ವಿಚಾರ. ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಯೇ ದಸರಾದ ಸಂಕೇತ. ರಾಜ್ಯದಲ್ಲಿ ಅಶಾಂತಿ ಮೂಡಿಸಿ, ಬದುಕುಗಳನ್ನು ಹಾಳು ಮಾಡಲು ಸಂಚು ರೂಪಿಸುವವರಿಗೆ ದೇವರು ಸದ್ಬುದ್ಧಿ ನೀಡಲಿ ಎಂದು ತಿಳಿಸಿದರು. ನಂತರ ಸುತ್ತೂರು ಶ್ರೀಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕುಶಲೋಪರಿ ಮಾತುಕತೆ ನಡೆಸಿದರು. ಈ ವೇಳೆ ಸುತ್ತೂರು ಶ್ರೀಗಳು, ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಶಾಲು, ಹಾರ ಫಲ ತಾಂಬೂಲ ನೀಡಿ, ಆಶೀರ್ವಾದ ಮಾಡಿದರು. ಈ ವೇಳೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಸಂಸದ ಸುನೀಲ್ ಬೋಸ್, ಶಾಸಕರಾದ ಡಿ.ರವಿಶಂಕರ್, ಕೃಷ್ಣಮೂರ್ತಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಕಾರ್ಯನಿರ್ವಾಹಕ ಅಧಿಕಾರಿ ಡಾ.ಬೆಟ್ಸೂರ್ ಮಠ ಸೇರಿದಂತೆ ಇತರರಿದ್ದರು.

ಒಂದನೇ ಪುಟದಿಂದ

ಅದ್ಧೂರಿ ದಸರಾ ಸಂತಸ ತಂದಿದೆ

ಅದ್ಧೂರಿಯಾಗಿ ಆಚರಣೆಗೊಳ್ಳುತ್ತಿದೆ ಎಂದರು. ಮೈಸೂರಿನ ಚಾಮುಂಡಿಬೆಟ್ಟದಲ್ಲಿ ದಸರಾ ಉದ್ಘಾಟನೆ ನಂತರ 9 ದಿನ ಹಲವು ಕಾರ್ಯಕ್ರಮ ನಡೆದಿದೆ. ಈಗ ನಾಡದೇವತೆ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುತ್ತಿದ್ದೇನೆ ಎಂದು ಸಿದ್ದರಾಮಯ್ಯ ತಿಳಿಸಿದರು. ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಇಂದು ಮಧ್ಯಾಹ್ನ 1.47 ರಿಂದ 2.10 ಗಂಟೆಯೊಳಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪ್ರದಾಯದಂತೆ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿದರು. ನಂದಿ ಧ್ವಜ ಪೂಜೆಯ ನಂತರ ಸಿದ್ದರಾಮಯ್ಯ ಈಡುಗಾಯಿ ಕೂಡ ಒಡೆದರು. ರೇಷ್ಮೆ ಶರ್ಟ್, ರೇಷ್ಮೆ ಪಂಚೆ ಹಾಗೂ ರೇಷ್ಮೆ ಶಲ್ಯ ಧರಿಸಿ ಮಿರಿ ಮಿರಿ ಮಿಂಚುತ್ತಿದ್ದ ಸಿದ್ದರಾಮಯ್ಯ ಹಸನ್ಮುಖಿಯಾಗಿದ್ದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಲಕ್ಷ್ಮಿ ಹೆಬ್ಬಾಳ್ಕರ್ ಜೊತೆ ವೋಲ್ವೊ ಬಸ್ ನಲ್ಲಿ ಆಗಮಿಸಿದ್ದರು. ನಂದಿ ಧ್ವಜ ಪೂಜೆ ತರುವಾಯ ತೆರೆದ ವಾಹನದಲ್ಲಿ ಅರಮನೆಯತ್ತ ಸಾಗಿದರು.

ಪುಷ್ಪಾರ್ಚನೆ ಮಾಡಲ್ಲ ಎಂಬ ಮೂರ್ಖರ ಮಾತಿಗೆ ಪ್ರತಿಕ್ರಿಯಿಸಲ್ಲ!: ಈ ಬಾರಿ ನಾನು ನಾಡದೇವತೆ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವುದಿಲ್ಲ ಎಂಬ ವಿಪಕ್ಷ ನಾಯಕರ ಹೇಳಿಕೆಗೆ ಖಾರವಾಗಿಯೇ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮೂರ್ಖರ ಮಾತಿಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ ಎಂದು ತಿರುಗೇಟು ನೀಡಿದರು. ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಾ, ದೇವರು ಹಾಗೂ ರಾಜ್ಯದ ಜನರ ಆಶೀರ್ವಾದದಿಂದ 7 ನೇ ಬಾರಿ ಪುಷ್ಪಾರ್ಚನೆ ಮಾಡುತ್ತಿದ್ದೇನೆ ಎಂದು ಹೇಳಿದರು.

ಕಿಡಿಗೇಡಿಗಳ ನೂಕಾಟ; ಮಹಿಳೆಯರು, ಮಕ್ಕಳ ಗೋಳಾಟ

ಪ್ರತಿವರ್ಷ ಇದೇ ಸನ್ನಿವೇಶ ಮರುಕಳಿಸುತ್ತಿದ್ದರೂ ಪರಿಹಾರ ಮಾತ್ರ ಕಂಡುಕೊಳ್ಳಲಿಲ್ಲ



ಮೈಸೂರು,ಅ.12(ಪಿಎಂ)– ಪ್ರತಿ ವರ್ಷದಂತೆ ಈ ಬಾರಿಯೂ ಕೆಲವೆಡೆ ಕಿಡಿಗೇಡಿಗಳ ನೂಕಾಟದ ಕಾರಣ ಮಕ್ಕಳು ಮತ್ತು ಮಹಿಳೆಯರು ನರಕ ಯಾತನೆ ಅನುಭವಿಸಿದರು.

ಚಾಮರಾಜ ಒಡೆಯರ್ ವೃತ್ತದಲ್ಲಿ ಅಶೋಕ ರಸ್ತೆ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆಆರ್ ವೃತ್ತದ ಸಯ್ಯಾಜಿರಾವ್ ರಸ್ತೆ (ನಗರ ಬಸ್ ನಿಲ್ದಾಣದ ಕಡೆಗೆ), ದೇವರಾಜ ಅರಸು ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ವೃತ್ತದ ಎರಡು ಬದಿ (ಇರ್ವಿನ್ ರಸ್ತೆ), ತಿಲಕನಗರದ ನಾರಾಯಣಗುರು ರಸ್ತೆಗಳಲ್ಲಿ ಅಳವಡಿಸಿದ್ದ ಬ್ಯಾರಿಕೇಡ್ ಹಿಂಭಾಗದಲ್ಲಿ ಪುಂಡರ ನೂಕಾಟಕ್ಕೆ ಮಹಿಳೆಯರು ಮತ್ತು ಮಕ್ಕಳು ಭಾರೀ ಕಿರಿಕಿರಿ ಅನುಭವಿಸಿದರು. ಈ ಪೈಕಿ ಹಲವರು ಕಣ್ಣೀರು ಹಾಕಿ ತಮ್ಮ ನೋವು ವ್ಯಕ್ತಪಡಿಸಿದರು. ಅಂಬಾರಿಯಲ್ಲಿರುವ ತಾಯಿ ಚಾಮುಂಡೇಶ್ವರಿ ದರ್ಶನದ ಜೊತೆಗೆ ಕಲಾತಂಡಗಳ ಸಾಂಸ್ಕೃತಿಕ ಪ್ರದರ್ಶನ, ಸ್ತಬ್ಧಚಿತ್ರಗಳನ್ನು ಕಣ್ತುಂಬಿಕೊಳ್ಳಲು ಇಲ್ಲಿ ಕಾದು ಕುಳಿತಿದ್ದ ಮಕ್ಕಳು ಮತ್ತು ಮಹಿಳೆಯರು ಅನುಭವಿಸಿದ ನರಕ ಯಾತನೆ ಹೇಳತೀರದಾಗಿತ್ತು. ಪ್ರತಿವರ್ಷ ಇದೇ ಮರುಕಳಿಸುತ್ತಿದ್ದರೂ ಅದಕ್ಕೊಂದು ಪರಿಹಾರ ಮಾತ್ರ ಕಂಡುಕೊಂಡಿಲ್ಲ. ಬ್ಯಾರಿಕೇಡ್‌ಗೆ ಮುಖ ಮಾಡಿ ಕುಳಿತಿದ್ದ ಮಹಿಳೆಯರು, ಮಕ್ಕಳು ಮಾತ್ರವಲ್ಲದೇ, ಅನೇಕ ಪುರುಷರು ಹಿಂಬದಿಯಿಂದ ನೂಕುತ್ತಿದ್ದವರ ಕಿಡಿಗೇಡಿತನಕ್ಕೆ ಭಾರೀ ಯಾನತೆ ಅನುಭವಿಸಿದರು. ಹಿಂಬದಿ ನಿಂತಿದ್ದ ಕಿಡಿಗೇಡಿಗಳು ನೂಕುತ್ತಿದ್ದರಿಂದ ಮುಂಬದಿಯಲ್ಲಿದ್ದ ಮಕ್ಕಳು, ಮಹಿಳೆಯರು ಒತ್ತಡ ತಡೆಯಲಾರದೇ ಪರಿತಪಿಸಿದರು. ಇಂತಹ ಸಂಕಷ್ಟಕ್ಕೆ ಸಿಲುಕಿದ್ದ ಮಕ್ಕಳು ದುಃಖಿತರಾಗಿ ಸ್ಥಳದಿಂದ ಕರೆದೊಯ್ಯುವಂತೆ ತಮ್ಮ ಪೋಷಕರಲ್ಲಿ ಗೋಗರೆಯುತ್ತಿದ್ದರು.

ಮತ್ತೊಂದೆಡೆ ಈ ಪರಿಸ್ಥಿತಿ ನಿಭಾಯಿಸುವಲ್ಲಿ ಪೊಲೀಸರು ಹೈರಣಾದರು. ಹಿಂಬದಿಗೆ ಲಾಠಿಯನ್ನೂ ಬೀಸಿದರು. ಬ್ಯಾರಿಕೇಡ್ ದಾಟಿ ಒಳನುಗ್ಗಿಯೂ ಪರಿಸ್ಥಿತಿ ಸಹಜ ಸ್ಥಿತಿಗೆ ತರಲು ಪ್ರಯತ್ನಿಸಿದರು. ಅಲ್ಲದೆ, ಅಳುತ್ತಿದ್ದ ಪುಟ್ಟ ಮಕ್ಕಳನ್ನು ಪೊಲೀಸರು ಬ್ಯಾರಿಕೇಡ್‌ನಿಂದ ಒಳಗೆ (ಜಂಬೂ ಸವಾರಿ ಮಾರ್ಗದ ಬದಿಯಲ್ಲಿ) ಕರೆದುಕೊಂಡು ಕೂರಿಸಿದರು. ಈ ಪೈಕಿ ಕೆಲ ಮಕ್ಕಳು ತಮ್ಮ ಪೋಷಕರ ಬಳಿಗೆ ಹೋಗಬೇಕೆಂದು ಅಳುತ್ತಿದ್ದದ್ದೂ ಕಂಡು ಬಂದಿತು.

ಹಿಂಬದಿಯೂ ಬ್ಯಾರಿಕೇಡ್ ಅಳವಡಿಸಿ ಸೀಮಿತ ಸ್ಥಳಾವಕಾಶದಲ್ಲಿ ಮಾತ್ರ ವೀಕ್ಷಣೆಗೆ ಅವಕಾಶ ನೀಡಬೇಕು. ಜೊತೆಗೆ ಹಿಂಬದಿಯಲ್ಲಿಯೂ ಪೊಲೀಸರನ್ನು ನಿಯೋಜಿಸಬೇಕೆಂಬ ಅಭಿಪ್ರಾಯ ಹಲವರಿಂದ ವ್ಯಕ್ತವಾಯಿತು. ಇಂತಹ ಸ್ಥಳಗಳಲ್ಲಿ ಹಿಂಭಾಗದಲ್ಲೂ ಪೊಲೀಸರ ಗಸ್ತು ನಿಯೋಜಿಸಬೇಕೆಂಬ ಕೂಗು ಸಹ ಕೇಳಿ ಬಂದಿತು.

ಜಂಬೂಸವಾರಿ ಮಾರ್ಗದಲ್ಲಿ ಮುಂಜಾನೆಯಿಂದಲೇ ಜಮಾಯಿಸಿದ್ದ ಜನ

ಮೈಸೂರು,ಅ.12(ಪಿಎಂ)– ಜಂಬೂಸವಾರಿ ಮೆರವಣಿಗೆ ಹಾಗೂ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯಲು ಜನ ಮುಂಜಾನೆಯಿಂದಲೇ ಕಾದು ಕುಳಿತಿದ್ದರು. ಗಂಟೆಗಟ್ಟಲೆ ಕಾಯಬೇಕಿದ್ದ ಹಿನ್ನೆಲೆಯಲ್ಲಿ ಕೊಡೆಗಳೊಂದಿಗೆ ನಿಗದಿತ ಸ್ಥಳದಲ್ಲಿ ಬೀಡುಬಿಟ್ಟಿದ್ದರು. ಹಲವರು ಲಘು ನಿದ್ರೆಗೂ ಜಾರಿದ್ದರು.

ಜಂಬೂ ಸವಾರಿ ಮೆರವಣಿಗೆ ಸಾಗುವ ಮಾರ್ಗವಾದ ಆಲ್ಬರ್ಟ್ ವಿಕ್ಟರ್ ರಸ್ತೆ, ಸಯ್ಯಾಜಿರಾವ್ ರಸ್ತೆಗಳ ಬದಿಯಲ್ಲಿ ಚಾಪೆ–ಕುರ್ಚಿಗಳೊಂದಿಗೆ ಬೆಳಗ್ಗೆ 11ರ ವೇಳೆಗೆ ಜನ ಜಮಾಯಿಸಿದ್ದರು. ಸಂಜೆ 5ರ ಬಳಿಕ ಅಭಿಮನ್ಯು ಮೇಲೆ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ದರ್ಶನವಾಗುತ್ತಿದ್ದಂತೆ ಭಕ್ತಿಭಾವದಿಂದ ನಮಸ್ಕರಿಸಿ, ಜೈಕಾರ ಹಾಕಿ ಭಕ್ತಿಯ ಪರಕಾಷ್ಠೆ ಮೆರೆದರು.

ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಸಾರಥ್ಯದಲ್ಲಿ ಮೈಸೂರು ದಸರಾ ಯಶಸ್ವಿ

ಮಾಜಿ ಎಂಎಲ್ಸಿ ಸಂದೇಶ್ ನಾಗರಾಜ್ ಪ್ರಶಂಸೆ



ಮೈಸೂರು, ಅ.12–ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಸಮನ್ವಯ ಚಾತುರ್ಯ ಹಾಗೂ ಮೈಸೂರು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರ ಉತ್ತಮ ಕಾರ್ಯ ಯೋಜನೆಯಿಂದ ಈ ಬಾರಿಯ ಮೈಸೂರು ದಸರಾ ಯಶಸ್ವಿಯಾಗಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯರೂ ಆದ ಮೈಸೂರಿನ ಖ್ಯಾತ ಉದ್ಯಮಿ, ಚಿತ್ರ ನಿರ್ಮಾಪಕ ಸಂದೇಶ್ ನಾಗರಾಜ್ ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯಮಂತ್ರಿಗಳ ನೇತೃತ್ವದ ಉನ್ನತ ಸಮಿತಿ ಸಭೆ ನಿರ್ಣಯದಂತೆ ಅದ್ಧೂರಿ ದಸರಾ ಆಚರಣೆಗೆ ರೂಪು–ರೇಷೆ ನಿರ್ಧರಿಸಿದ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಯಶಸ್ವಿ ದಸರಾ ಆಚರಿಸಿದ್ದಾರೆ.

ದಸರಾ ಎಲ್ಲಾ ಕಾರ್ಯಕ್ರಮಗಳು ಅದ್ಧೂರಿಯಾಗಿ ನೆರವೇರಿದವು. ಯುವ ಸಂಭ್ರಮ, ಯುವ ದಸರಾ ದಾಖಲೆ ಬರೆದಿವೆ. ಇನ್ನಿತರ ಕಾರ್ಯಕ್ರಮಗಳು ಜನರ ಮನಸ್ಸು ಗೆದ್ದಿವೆ. ಜನಸಾಮಾನ್ಯರು ಉತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಂಭ್ರಮಿಸಿದ್ದಾರೆ. ಈ ಬಾರಿ ದಸರಾ ಯಶಸ್ವಿಯಾಗಿದೆ ಎಂಬುದಕ್ಕೆ ಇಂದು ಸೇರಿದ್ದ ಲಕ್ಷ ಲಕ್ಷ ಜನವೇ ಸಾಕ್ಷಿ. ಇಂತಹ ಅಪಾರ ಜನ ಸಮೂಹವನ್ನು ನಿಭಾಯಿಸುವಲ್ಲಿ ಪೊಲೀಸ್ ಇಲಾಖೆ ಯಶಸ್ವಿಯಾಗಿದೆ. ಹಲವೆಡೆ ವಾಹನ ಸಂಚಾರಕ್ಕೆ ತೊಂದರೆ ಆಗಿರಬಹುದು. ಆದರೆ ಇಂತಹ ಉತ್ಸವದಲ್ಲಿ ಇವೆಲ್ಲಾ ಸಾಮಾನ್ಯವಾದುದು. ಹಾಗೆಯೇ ಕಾನೂನು–ಸುವ್ಯವಸ್ಥೆ ಕಾಪಾಡುವಲ್ಲಿ ನಮ್ಮ ಪೊಲೀಸರು ನಿರೀಕ್ಷೆಗೂ ಮೀರಿದ ಸಾಧನೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಹಾಗೆಯೇ ಪಾಸ್ ಗೊಂದಲವೂ ಪ್ರತಿ ಬಾರಿ ಇದ್ದದ್ದೇ. ಇದೆಲ್ಲವನ್ನೂ ಮೀರಿ ವಿಶ್ವ ಪ್ರಸಿದ್ಧ ದಸರಾವನ್ನು ಜಿಲ್ಲಾಧಿಕಾರಿ ಯಶಸ್ವಿಯಾಗಿಸಿದ್ದಾರೆ. ಅದ್ಧೂರಿ ದಸರಾದಿಂದಾಗಿ ಮೈಸೂರಲ್ಲಿ ಲಕ್ಷಾಂತರ ಜನರ ಆರ್ಥಿಕ ಸ್ಥಿತಿ ಸುಧಾರಿಸಿದೆ. ಪ್ರವಾಸೋದ್ಯಮ ಸುಧಾರಣೆಗೆ ಅನುಕೂಲವಾಗಿದೆ. ದೀಪಾಲಂಕಾರ ಅದ್ಭುತವಾಗಿದೆ ಎಂದು ತಿಳಿಸಿದ್ದಾರೆ.

ಮಹಾರಾಷ್ಟ್ರ ಮಾಜಿ ಸಚಿವ, ಎನ್‌ಸಿಪಿ ಹಿರಿಯ ನಾಯಕ ಬಾಬಾ ಸಿದ್ದಿಕಿ ಗುಂಡಿಟ್ಟು ಹತ್ಯೆ



ಮುಂಬೈ, ಅ.12– ಮಹಾರಾಷ್ಟ್ರದ ಮಾಜಿ ಸಚಿವ, ಎನ್‌ಸಿಪಿ ಹಿರಿಯ ನಾಯಕ ಬಾಬಾ ಸಿದ್ದಿಕಿ ಅವರನ್ನು ಶನಿವಾರ ರಾತ್ರಿ ಜನನಿಬಿಡ ಪ್ರದೇಶದಲ್ಲೇ ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆಗೈದಿದ್ದಾರೆ.

ಎನ್‌ಸಿಪಿಯ ಅಜಿತ್ ಪವಾರ್ ಬಣದಲ್ಲಿರುವ ಸಿದ್ದಿಕಿ ಮೇಲೆ ಮುಂಬೈನ ಬಾಂದ್ರಾದಲ್ಲಿರುವ ಅವರ ಕಚೇರಿ ಬಳಿಯ ರಾಮಮಂದಿರ ಸಮೀಪ ಹತ್ಯೆ ಮಾಡಲಾಗಿದೆ. ಶನಿವಾರ ರಾತ್ರಿ 9.30ರ ಸುಮಾರಿಗೆ ಬಾಬಾ ಸಿದ್ದಿಕಿ ಅವರು ಕಚೇರಿಯಿಂದ ಹೊರಟು ಕಾರಿನಲ್ಲಿ ಕುಳಿತುಕೊಳ್ಳುತ್ತಿದ್ದ ವೇಳೆ ರಾಮಮಂದಿರ ಬಳಿ ವಿಜಯ ದಶಮಿ ಅಂಗವಾಗಿ ಪಟಾಕಿ ಸಿಡಿಸುತ್ತಿದ್ದಾಗಲೇ ದುಷ್ಕರ್ಮಿಗಳು ಸಿದ್ದಿಕಿ ಮೇಲೆ ಮೂರು ಬಾರಿ ಗುಂಡು ಹಾರಿಸಿದ್ದಾರೆ. ತಕ್ಷಣವೇ ಅವರನ್ನು ಲೀಲಾವತಿ ಆಸ್ಪತ್ರೆಗೆ ರವಾನಿಸಲಾಗಿದ್ದು, ರಾತ್ರಿ 11ರ ಸುಮಾರಿನಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಿದ್ದಿಕಿ ಮೃತಪಟ್ಟಿದ್ದಾರೆ. ಸಿದ್ದಿಕಿ ಅವರ ಮೇಲೆ ಮೂವರು ದುಷ್ಕರ್ಮಿಗಳು ಏಕಕಾಲಕ್ಕೆ ಗುಂಡು ಹಾರಿಸಿದ್ದಾರೆ ಎಂದು ಹೇಳಲಾಗಿದ್ದು, ಸ್ಥಳೀಯರು ಇಬ್ಬರನ್ನು 2 ಗನ್‌ಗಳ ಸಮೇತ ಪೊಲೀಸರಿಗೆ ಹಿಡಿದುಕೊಟ್ಟಿದ್ದಾರೆ ಎಂದು ಹೇಳಲಾಗಿದೆ. ಓರ್ವ ತಪ್ಪಿಸಿಕೊಂಡಿದ್ದಾನೆ. ಸಿದ್ದಿಕಿ ಮೇಲೆ ಮೂವರು ಗುಂಡು ಹಾರಿಸಿದ್ದಾರೆ ಹಾಗೂ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ ಎಂಬುದನ್ನು ಹಿರಿಯ ಪೊಲೀಸ್ ಅಧಿಕಾರಿಗಳು ಖಚಿತಪಡಿಸಿದ್ದಾರೆ.

ಬಾಂದ್ರಾ ಪಶ್ಚಿಮದಿಂದ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಬಾಬಾ ಸಿದ್ದಿಕಿ ಸುಮಾರು 48 ವರ್ಷಗಳ ಕಾಲ ಕಾಂಗ್ರೆಸ್‌ನಲ್ಲಿದ್ದರು. ಕಳೆದ ಫೆಬ್ರವರಿಯಲ್ಲಿ ಅವರು ಅಜಿತ್ ಪವಾರ್ ಅವರ ಎನ್‌ಸಿಪಿ ಬಣ ಸೇರಿದ್ದರು.

ಮಹಾರಾಷ್ಟ್ರದಲ್ಲಿ ರಾಜಕೀಯ ಕಾರಣಕ್ಕೆ ಬಾಬಾ ಸಿದ್ದಿಕಿ ಪರಿಚಿತರಾದರೂ, ರಾಜ್ಯದ ಹೊರಗಡೆ ಅದ್ಧೂರಿ ಪಾರ್ಟಿಗಳಿಗೆ ಜನಪ್ರಿಯರಾಗಿದ್ದರು. ಬಾಲಿವುಡ್ ಸೇರಿದಂತೆ ದೇಶದ ಚಿತ್ರರಂಗದ ಹೆಚ್ಚು ಕಡಿಮೆ ಎಲ್ಲಾ ದೊಡ್ಡ ದೊಡ್ಡ ಸ್ಟಾರ್‌ಗಳ ಜತೆಯೂ ವಿಶೇಷ ನಂಟು ಹೊಂದಿದ್ದ ಅವರು, ಶಾರುಖ್ ಖಾನ್ ಹಾಗೂ ಸಲ್ಮಾನ್ ಖಾನ್ ನಡುವೆ ನಡೆಯುತ್ತಿದ್ದ ಶೀತಲ ಸಮರವನ್ನು 2023ರ ಇಫ್ತಾರ್ ಕೂಟದಲ್ಲಿ ಬಗೆಹರಿಸಿ ಭಾರೀ ಹೆಸರು ಗಳಿಸಿದ್ದರು.

ವಿಜಯದಶಮಿ ಅಂಗವಾಗಿ ಪೊಲೀಸ್ ಪೂಜೆ ಹೆಸರಲ್ಲಿ

ಅದ್ಧೂರಿ ಕೋಟೆ ದಸರಾ ಮಹೋತ್ಸವ



ವಿಜಯದಶಮಿ ಅಂಗವಾಗಿ ಕೋಟೆ ದಸರಾ ಮಹೋತ್ಸವ ನಡೆಯಿತು

ಹೆಚ್.ಡಿ.ಕೋಟೆ, ಅ.12– ವಿಜಯದಶಮಿ ಅಂಗವಾಗಿ ಪೊಲೀಸ್ ಪೂಜೆ ಹೆಸರಲ್ಲಿ ಶನಿವಾರ ನಡೆದ ಐತಿಹಾಸಿಕ ಕೋಟೆ ದಸರಾ ಮಹೋತ್ಸವಕ್ಕೆ ಪಟ್ಟಣದ ಪೊಲೀಸರು ಗೌರವ ಸಲ್ಲಿಸುವ ಮೂಲಕ ಅದ್ಧೂರಿಯಾಗಿ ನೆರವೇರಿತು.

ಪಟ್ಟಣದ ಪೊಲೀಸ್ ಠಾಣೆಯ ಎಸ್ಐ ಸುರೇಶ್ ನಾಯಕ್ ನೇತೃತ್ವದಲ್ಲಿ ಸಿಬ್ಬಂದಿಗಳು ದೇವತೆಗಳ ರಾಜ ಶ್ರೀವರದರಾಜಸ್ವಾಮಿಗೆ ಗೌರವ ರಕ್ಷೆ ಸಲ್ಲಿಸಿದ ನಂತರ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ದೇವಾಲಯದ ಧರ್ಮದರ್ಶಿ ಬಿ.ಎಸ್.ರಂಗಯ್ಯಂಗಾರ್ ಅವರ ಪುತ್ರ ಪ್ರಸಾದ್ ಅಯ್ಯಂಗಾರ್, ಅರ್ಚಕ ರಾಮಪ್ರಿಯ, ತಿರುಮಲಾಚಾರ್, ಶ್ರೀಧರ್, ಶ್ರೀನಿವಾಸ್, ಚಾಮುಂಡೇಶ್ವರಿ ದೇವಾಲಯದ ಅರ್ಚಕ ಸತೀಶ್ ಸೇರಿದಂತೆ ಪಟ್ಟಣದ ಎಲ್ಲಾ ಸಮಾಜದ ಮುಖಂಡರು ಶ್ರೀವರದರಾಜಸ್ವಾಮಿ ಅಶ್ವವಾಹನಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ವಿಜಯದಶಮಿ ಮಹೋತ್ಸವದ ಬನ್ನಿ ಪೂಜೆಗೆ ಚಾಲನೆ ನೀಡಿದರು.

ಈ ವೇಳೆ ಶ್ರೀವರದರಾಜಸ್ವಾಮಿ ಪಂಚಲೋಹದ ಉತ್ಸವ ಮೂರ್ತಿಯನ್ನು ಅಶ್ವವಾಹನದಲ್ಲಿ ಹಾಗೂ ಪೆರುಂದೇವಿ ಅಮ್ಮನವರ ಸಹಿತ ಶ್ರೀದೇವಿ, ಭೂದೇವಿಯರ ಪಂಚಲೋಹದ ವಿಗ್ರಹಗಳನ್ನು ಶೇಷ ವಾಹನದಲ್ಲಿ ಹಾಗೂ ಶ್ರೀಚಾಮುಂಡೇಶ್ವರಿ ಅಮ್ಮನವರ ವಿಗ್ರಹವನ್ನು ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿ ವಿವಿಧ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಕೊಂಡೊಯ್ದು ಪಟ್ಟಣದ ಶ್ರೀಚಾಮುಂಡೇಶ್ವರಿ ದೇವಸ್ಥಾನದ ಹಿಂಭಾಗದಲ್ಲಿರುವ ಬನ್ನಿ ಮರಕ್ಕೆ ಪೊಲೀಸ್ ಗೌರವ ರಕ್ಷೆ ನೀಡಲು ತಂದಿದ್ದ ಬಂದೂಕುಗಳನ್ನು ಇಟ್ಟು ಪೂಜೆ ಸಲ್ಲಿಸಲಾಯಿತು.

ಮೆರವಣಿಗೆಯಲ್ಲಿ ಪಟ್ಟಣದ ಮಹಿಳೆಯರು, ಮಕ್ಕಳು ಹಾಗೂ ಅಕ್ಕಪಕ್ಕದ ಗ್ರಾಮಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಐತಿಹಾಸಿಕ ಕೋಟೆ ದಸರಾಗೆ ಕಳೆ ತಂದರು. ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳು ಪಾಲ್ಗೊಂಡಿದ್ದವು. ಈ ವೇಳೆ ಪಟ್ಟಣದ ಜನರು ದಾರಿಯುದ್ದಕ್ಕೂ ದೇವರಿಗೆ ಪೂಜೆ ಸಲ್ಲಿಸಿದರು. ಇನ್ನು ಕೆಲವು ಭಕ್ತರು ತೆಂಗಿನಕಾಯಿ ಈಡುಗಾಯಿ ಹೊಡೆದು ಭಕ್ತಿ ಪರಾಕಾಷ್ಠೆ ಮೆರೆದರೆ, ಯುವಕರು ಪಟಾಕಿ ಸಿಡಿಸಿ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.

ಈ ಸಂದರ್ಭ ಮುಖಂಡರಾದ ದೇವರಾಜ್, ಡೈರಿ ಶ್ರೀಕಾಂತ್, ಪೂರ್ಣೇಶ್, ವಿನೋದ್, ಶಿವರಾಜ್, ಚಂದ್ರಮೌಳಿ, ನಾಗಣ್ಣ, ಜೆ.ಪಿ. ಶಿವರಾಜು, ಜಯಂತ್, ಪ್ರಮೋದ್, ಸುಮನ್, ನಾಗರತ್ನ, ಸುಧಾಕರ್, ಪುಷ್ಪ ಮಹೇಶ್ವರಿ, ಶ್ವೇತ ಸೇರಿದಂತೆ ಸಾವಿರಾರು ಭಕ್ತರಿದ್ದರು.

ಅರ್ಹರಿಗೆ ಪಂಚ ಗ್ಯಾರಂಟಿಗಳನ್ನು ತಲುಪಿಸಿ

ಅಧಿಕಾರಿಗಳಿಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಭು ಸೂಚನೆ



ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯಲ್ಲಿ ಸಮಿತಿ ಅಧ್ಯಕ್ಷ ಪ್ರಭು ಮಾತನಾಡಿದರು.

ತಿ.ನರಸೀಪುರ, ಅ.13– ಪಂಚ ಗ್ಯಾರಂಟಿಗಳು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾಗಿದ್ದು, ಅವುಗಳನ್ನು ಅರ್ಹರಿಗೆ ತಲುಪಿಸುವ ಕೆಲಸವನ್ನು ಅಧಿಕಾರಿಗಳು ಪ್ರಾಮಾಣಿಕವಾಗಿ ಮಾಡಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಭು ಸೂಚಿಸಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯಲ್ಲಿ ಹಾಜರಿದ್ದ ತಾಲೂಕು ಅಧಿಕಾರಿಗಳಿಂದ ಮಾಹಿತಿ ಪಡೆದು ಮಾತನಾಡಿದ ಅವರು, ಗೃಹಲಕ್ಷ್ಮಿ ಯೋಜನೆಯಡಿ 77,793 ಫಲಾನುಭವಿಗಳಿದ್ದು, ಈ ಪೈಕಿ 20,847 ಪ.ಜಾತಿ, 3,192 ಅಲ್ಪ ಸಂಖ್ಯಾತರು, 9,196 ಪ.ಪಂಗಡ, 23,364 ಓಬಿಸಿ ಹಾಗೂ ಇತರೆ 21,194 ಮಂದಿ ಇದ್ದು, ತಿಂಗಳಿಗೆ 15 ಕೋಟಿ 55 ಲಕ್ಷದ 86 ಸಾವಿರ ಹಣ ಫಲಾನುಭವಿಗಳ ಖಾತೆಗೆ ಜಮಾ ಆಗುತ್ತಿದೆ ಎಂದರು.

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಗ್ಯಾರಂಟಿ ಯೋಜನೆಯಲ್ಲಿ ಡಿಬಿಟಿಗೆ ಅರ್ಹವಾಗಿರುವ ಪಡಿತರ ಚೀಟಿಗಳ ಸಂಖ್ಯೆ 78,586, ಡಿಬಿಟಿ ಪಾವತಿಸದ ಪ.ಚೀಟಿಗಳ ಸಂಖ್ಯೆ 77,819, ಡಿಬಿಟಿ ಮಾಡಲು ಬ್ಯಾಂಕ್ ಖಾತೆ ಸಮಸ್ಯೆ ಇರುವ ಪ.ಚೀಟಿಗಳ ಸಂಖ್ಯೆ 767, ಶೇ.ವಾರು ಪ್ರಗತಿ 99.02 ಇದೆ ಎಂದರು.

ಗೃಹಜ್ಯೋತಿ ಯೋಜನೆಯಡಿ 47,097 ಫಲಾನುಭವಿಗಳಿದ್ದರೆ, 1,696 ಜನರು ಅರ್ಹರಲ್ಲ. 756 ಮಂದಿ ಅರ್ಜಿಗಳು ಬಾಕಿ ಇವೆ. 429 ಮಂದಿ ಗೃಹಜ್ಯೋತಿ ಬೇಡವೆಂದಿದ್ದಾರೆ ಎಂದು ಮಾಹಿತಿ ನೀಡಿದರು.

ಇಓ ಪಿ.ಎಸ್.ಅನಂತರಾಜು ಮಾತನಾಡಿ, ಸರ್ಕಾರದ ಆದೇಶದಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಇಲಾಖಾವಾರು ಅಧಿಕಾರಿಗಳು ನೀಡಿದ್ದಾರೆ. ಈ ವೇಳೆ ಕೆಲವು ಲೋಪಗಳನ್ನು ಸದಸ್ಯರು ಸಭೆಯ ಗಮನಕ್ಕೆ ತಂದಿದ್ದಾರೆ. ಅದನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸುವ ಕೆಲಸವನ್ನು ಅಧಿಕಾರಿಗಳು ಮಾಡಲಿದ್ದಾರೆ ಎಂದರು. ಈ ಸಂದರ್ಭ ಯೋಜನಾಧಿಕಾರಿ ರಂಗಸ್ವಾಮಿ ಸೇರಿದಂತೆ ಸಮಿತಿ ಪದಾಧಿಕಾರಿಗಳು ಹಾಜರಿದ್ದರು.

ಬೆಟ್ಟದಪುರದಲ್ಲಿ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಮೆರವಣಿಗೆ



ಬೆಟ್ಟದಪುರದಲ್ಲಿ ಬೆಳ್ಳಿ ಬಸಪ್ಪ, ಸಿಡಿಲು ಮಲ್ಲಿಕಾರ್ಜುನಸ್ವಾಮಿ ಮೆರವಣಿಗೆ ನಡೆಯಿತು.

ಬೆಟ್ಟದಪುರ, ಅ.12– ನವರಾತ್ರಿ ಅಂಗವಾಗಿ ಬೆಟ್ಟದಪುರದಲ್ಲಿ ಬೆಳ್ಳಿ ಬಸಪ್ಪ ಮತ್ತು ಸಿಡಿಲು ಮಲ್ಲಿಕಾರ್ಜುನಸ್ವಾಮಿ ಮೆರವಣಿಗೆ ನಡೆಯಿತು.

ದೇವರ ಉತ್ಸವಮೂರ್ತಿಗಳಿಗೆ ವಿಶೇಷ ಅಲಂಕಾರ ಮಾಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಬನ್ನಿಮಂಟಪಕ್ಕೆ ಕೊಂಡೊಯ್ದು ವಿವಿಧ ಪೂಜೆಗಳನ್ನು ನೆರವೇರಿಸಿ, ಬನ್ನಿ ಮರಕ್ಕೆ ಪೂಜೆ ಸಲ್ಲಿಸಿದ ನಂತರ ಕತ್ತಿಯಿಂದ ಬನ್ನಿ ಮರವನ್ನು ಕತ್ತರಿಸಿ ಪೂಜೆ ನೆರವೇರಿಸಿ, ಪ್ರಸಾದ ವಿತರಿಸಲಾಯಿತು. ಈ ವೇಳೆ ಪ್ರಧಾನ ಅರ್ಚಕ ಸತೀಶ್ ಕಶ್ಯಪ್, ಗ್ರಾಮಸ್ಥರು ಹಾಜರಿದ್ದರು.


ಮುಡಿಕಟ್ಟೆಯಲ್ಲಿ ಅವಕಾಶ ನಿರಾಕರಣೆ ಆರೋಪ ನಿರಾಧಾರ

ನಂಜನಗೂಡು, ಅ.12– ನಗರದ ಶ್ರೀಕಂಠೇಶ್ವರಸ್ವಾಮಿ ಭಕ್ತರ ಮುಡಿ ತೆಗೆಯುವ ಸೇವೆ ನಡೆಸುವ ನಯನಜ ಕ್ಷತ್ರಿಯ ಸಂಘದ ಮುಡಿಕಟ್ಟೆಯಲ್ಲಿ ಸಂಬಂಧಪಟ್ಟ ಯಾರಿಗೂ ಕೆಲಸ ನೀಡದೆ ನಿರಾಕರಿಸಲಾಗಿಲ್ಲ ಎಂದು ನಯನಜ ಕ್ಷತ್ರಿಯ ಮುಡಿಕಟ್ಟೆ ಸಂಘದ ಕಾರ್ಯದರ್ಶಿ ಶ್ರೀನಿವಾಸ್ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘದ ಬೈಲಾದಂತೆ ಕೃಷ್ಣರಾಜು ಅವರ ತಂದೆ ನಿಧನರಾದ ನಂತರ ಅವರ ಹಿರಿಯ ಮಗ ನಾಗೇಂದ್ರ ಅವರಿಗೆ ಮುಡಿಕಟ್ಟೆಯಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಪ್ರಸ್ತುತ ನಾಗೇಂದ್ರ ಅವರ ಮಗ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಕೃಷ್ಣರಾಜು ಅವರ ಅಣ್ಣನ ಮಗನಿಗೆ ಕೆಲಸ ನೀಡಿರುವುದರಿಂದ ಕೃಷ್ಣರಾಜು ಅವರಿಗೆ ಕೆಲಸ ನೀಡುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಕೃಷ್ಣರಾಜು ತಮ್ಮ ತಂದೆ ಸತ್ತ 14 ವರ್ಷದ ನಂತರ ವಿನಾಕಾರಣ ತಕರಾರು ತೆಗೆಯುತ್ತಿದ್ದಾರೆ ಎಂದರು.

ಸಂಘದ ನಿಯಮದಂತೆ ಮುಡಿಕಟ್ಟೆಯಲ್ಲಿ ಮುಡಿ ತೆಗೆಯುವ ಕೆಲಸ ಮಾಡುವವರು ನಿಧನರಾದರೆ ಅವರ ಕುಟುಂಬದ ಒಬ್ಬರಿಗೆ ಕೆಲಸ ಕೊಡಲಾಗುತ್ತದೆ. ಒಂದು ವೇಳೆ ಕುಟುಂಬದಲ್ಲಿ ಗಂಡು ಮಕ್ಕಳು ಇಲ್ಲದಿದ್ದರೆ ಪ್ರತಿ ತಿಂಗಳು ಅವರ ಕುಟುಂಬ ನಿರ್ವಹಣೆಗೆ ಸಂಘದಿಂದ ಧನಸಹಾಯ ನೀಡಲಾಗುತ್ತದೆ. ಗಂಡು ಮಗನಿದ್ದು, ವಯಸ್ಕನಲ್ಲದಿದ್ದರೆ ಅವನಿಗೆ 18 ವರ್ಷ ತುಂಬುವವರೆಗೆ ಸಂಘ ಧನ ಸಹಾಯ ನೀಡುತ್ತದೆ. ನಮ್ಮ ಊರಿನ ನಯನಜ ಸಮಾಜದ ವ್ಯಕ್ತಿಗಳು ತೀರಿಕೊಂಡರೆ ಅವರ ಶವ ಸಂಸ್ಕಾರಕ್ಕೆ ಸಂಘ ನೆರವು ನೀಡುತ್ತದೆ. ಕೃಷ್ಣರಾಜು ಅವರ ಆಪಾದನೆಯಲ್ಲಿ ಯಾವುದೆ ಉರುಳಿಲ್ಲ. ಸಂಘದಲ್ಲಿ 125 ಮಂದಿ ಕೆಲಸ ನಿರ್ವಹಿಸುತ್ತಿದ್ದು, ಯಾವುದೇ ತಕರಾರಿಗೆ ಅವಕಾಶವಿಲ್ಲದಂತೆ ಭಕ್ತರ ಸೇವೆ ನಡೆಸುತ್ತಿದ್ದೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಶ್ರೀನಿವಾಸ್, ಮಂಜು, ನಿಂಗರಾಜು, ಶ್ರೀಧರ, ಸೋಮಣ್ಣ, ರವಿಕಿರಣ್, ಸತೀಶ, ಪ್ರಕಾಶ್, ಚಂದ್ರಶೇಖರ್ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಮುಡಿಕಟ್ಟೆ ಸಂಘದ ಕಾರ್ಯದರ್ಶಿ ಶ್ರೀನಿವಾಸ್ ಮಾತನಾಡಿದರು.

ಪ್ರತಿ ಕೆಜಿ ತಂಬಾಕಿಗೆ ಸರಾಸರಿ 300 ರೂ. ನೀಡಲಿ

ಕೇಂದ್ರ ಸರ್ಕಾರಕ್ಕೆ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಒತ್ತಾಯ



ಕಾರ್ಯಕ್ರಮದಲ್ಲಿ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿದರು.

ಹುಣಸೂರು, ಅ.12– ರೈತರು ಬೆಳೆಯುವ ಪ್ರತಿ ಕೆಜಿ ತಂಬಾಕಿಗೆ ಸರಾಸರಿ 300 ರೂ. ನೀಡಬೇಕು ಎಂದು ಕೇಂದ್ರ ಸರ್ಕಾರವನ್ನು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಒತ್ತಾಯಿಸಿದರು.

ತಾಲೂಕಿನ ರಾಮಪಟ್ಟಣ ಗ್ರಾಮ ಶಾಖೆ ಪುನಶ್ಚೇತನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಸಗೊಬ್ಬರ ಸೇರಿದಂತೆ ಇತ್ಯಾದಿ ಪರಿಕರಗಳ ವೆಚ್ಚ ಪ್ರತಿ ವರ್ಷ ಹೆಚ್ಚಾಗುತ್ತಿದ್ದು, ಪ್ರತಿ ಕೆಜಿ ತಂಬಾಕು ಉತ್ಪಾದನೆಗೆ 250 ರೂ. ವೆಚ್ಚವಾಗುತ್ತಿದೆ. ಆಂಧ್ರದಲ್ಲಿ ಪ್ರತಿ ಕೆಜಿಗೆ 419 ರೂ. ದೊರೆತಿದೆ. ತಂಬಾಕು ಮಾರುಕಟ್ಟೆ ಇದೇ ತಿಂಗಳ 7ರಂದು ಆರಂಭವಾಗಿದ್ದು, ಉತ್ತಮ ಗುಣಮಟ್ಟದ ತಂಬಾಕಿಗೆ 290 ರೂ. ನೀಡಲಾಗುತ್ತಿದೆ. ಇದರಿಂದ ರೈತ ಒಂದು ಕೆಜಿಗೆ 120 ರೂ. ನಷ್ಟ ಅನುಭವಿಸುತ್ತಿದ್ದಾನೆ. ಹೀಗಾಗಿ ಕೇಂದ್ರ ಸರ್ಕಾರ ಉತ್ತಮ ಬೆಲೆ ನೀಡದಿದ್ದರೆ ಸಂಘದಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ರೈತರ ಸಮಸ್ಯೆಗಳು ನಿತ್ಯ ಹೆಚ್ಚಾಗುತಲೇ ಇವೆ. ನಮ್ಮ ಜನಪ್ರತಿನಿಧಿಗಳು ರೈತರನ್ನು ಮರೆತು ಆಡಳಿತ ನಡೆಸುತ್ತಿದ್ದಾರೆ. ಹೀಗಾಗಿ ರೈತರು ಒಟ್ಟಾಗಿ ಹೋರಾಟ ಮುಂದುವರೆಸಬೇಕು ಎಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿದರು. ಅಧ್ಯಕ್ಷತೆಯನ್ನು ತಾಲೂಕು ರೈತ ಸಂಘದ ಅಧ್ಯಕ್ಷ ಚಿಕ್ಕಣ್ಣ ವಹಿಸಿದ್ದರು. ಮುಖಂಡರಾದ ವಿಷಕಂಠಪ್ಪ, ಪಿ. ಮರಂಕಯ್ಯ, ಸಂಘದ ಪ್ರಧಾನ ಕಾರ್ಯದರ್ಶಿ ರಾಮೇಗೌಡ ಸೇರಿದಂತೆ ರೈತ ಮುಖಂಡರು, ಗ್ರಾಮದ ಯಜಮಾನರು, ನೂರಕ್ಕಿಂತಲೂ ಹೆಚ್ಚು ರೈತರು ಪಾಲ್ಗೊಂಡಿದ್ದರು.

ಇದೇ ವೇಳೆ ಗೌರವಾಧ್ಯಕ್ಷರಾಗಿ ಆರ್.ಎಸ್.ರಾಚೇಗೌಡ, ಅಧ್ಯಕ್ಷರಾಗಿ ಆರ್.ಆರ್. ರವಿಗೌಡ, ಉಪಾಧ್ಯಕ್ಷರಾಗಿ ಆರ್.ಎನ್. ಮಹದೇವು, ಖಜಾಂಚಿಯಾಗಿ ಕೆ.ಶಿವನಾಯಕ, ಉಪಖಜಾಂಚಿಯಾಗಿ ಆರ್.ಟಿ.ಹರೀಶ್, ಸಂಘಟನಾ ಕಾರ್ಯದರ್ಶಿಯಾಗಿ ಆರ್. ಎಸ್.ಈಶ್ವರೇಗೌಡ, ಸಂಚಾಲಕರಾಗಿ ಆರ್.ಎಸ್.ಮಲ್ಲೇಶ್, ನಿರ್ದೇಶಕರಾಗಿ ಆರ್.ಎಸ್.ರವಿಕುಮಾರ್, ಸಹ ನಿರ್ದೇಶಕರಾಗಿ ಆರ್. ಆರ್. ಮನೋಹರ್, ಲೆಕ್ಕಪರಿಶೋಧಕರಾಗಿ ಆರ್.ಟಿ.ಸುರೇಶ್ ಆಯ್ಕೆಯಾದರು. 61 ಜನರು ಹಸಿರು ಟವಲ್ ಧರಿಸುವ ಮೂಲಕ ಸದಸ್ಯರಾಗಿ ಸೇರ್ಪಡೆಯಾದರು.

ಚಿಕ್ಕದೇವಮ್ಮನವರ ಉತ್ಸವ ಮೂರ್ತಿ ಮೆರವಣಿಗೆ



ವಿಜಯ ದಶಮಿ ಅಂಗವಾಗಿ ಚಿಕ್ಕದೇವಮ್ಮನವರ ಉತ್ಸವ ಮೂರ್ತಿ ಮೆರವಣಿಗೆ ನಡೆಯಿತು.

ಸರಗೂರು, ಅ.12– ವಿಜಯ ದಶಮಿ ಅಂಗವಾಗಿ ತಾಲೂಕಿನ ಪ್ರಸಿದ್ಧ ಯಾತ್ರಾ ಸ್ಥಳ ಶ್ರೀಚಿಕ್ಕದೇವಮ್ಮನವರ ಬೆಟ್ಟದಲ್ಲಿ ಚಿಕ್ಕದೇವಮ್ಮನವರ ಉತ್ಸವ ಮೂರ್ತಿ ಮೆರವಣಿಗೆ ನಡೆಯಿತು.

ತಾಲೂಕಿನ ಶ್ರೀಚಿಕ್ಕದೇವಮ್ಮನವರ ಬೆಟ್ಟದ ದೇವಾಲಯದಲ್ಲಿ ಶನಿವಾರ ಮುಂಜಾನೆಯಿಂದಲೇ ತಾಯಿಗೆ ಹೋಮ–ಹವನ, ಕುಂಕುಮಾರ್ಚನೆ, ಅಭಿಷೇಕ ನಡೆಸಿ ಹೂವಿನಿಂದ ವಿಶೇಷವಾಗಿ ಅಲಂಕಾರ ಮಾಡಲಾಗಿತ್ತು. ಬಳಿಕ ಮಹಾ ಮಂಗಲಾರತಿ ನೆರವೇರಿಸಿ ತೀರ್ಥ ಪ್ರಸಾದ ವಿನಿಯೋಗ ಮಾಡಲಾಯಿತು. ಈ ವೇಳೆ ನೆರೆದಿದ್ದ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಬಳಿಕ ಭಕ್ತರಿಗೆ ಪ್ರಸಾದ ನೀಡಲಾಯಿತು.

ಶ್ರೀಚಿಕ್ಕದೇವಮ್ಮನವರ ಬೆಟ್ಟದ ಪಾರುಪತ್ತೇದಾರ್ ಮಹದೇವಸ್ವಾಮಿ ಮಾತನಾಡಿ, ವಿಜಯದಶಮಿಯಂದು ಜಗನ್ಮಾತೆ ಶ್ರೀಚಿಕ್ಕದೇವಮ್ಮನವರು ಸರ್ವರನ್ನು ರಕ್ಷಿಸಲಿ ಎಂದು ತಿಳಿಸಿದರು.

ಈ ವೇಳೆ ದೇವಾಲಯದ ಅರ್ಚಕರಾದ ವೀರಣ್ಣ, ಪ್ರಸನ್ನ, ಮಣಿ, ಸಂತೋಷ್, ಮನೋಹರ್, ಶಿವಕುಮಾರ್, ದೇವಣ್ಣ, ಸಿದ್ದಲಿಂಗಸ್ವಾಮಿ, ಚಿಕ್ಕದೇವಣ್ಣ ಮಹದೇವಸ್ವಾಮಿ, ನಿಂಗಣ್ಣ ಶ್ರೀಕಂಠಪ್ರಸಾದ್, ಮಂಜು, ಮುಖಂಡ ಬಸವರಾಜು ಹಾಗೂ ದೇವಾಲಯದ ಸಿಬ್ಬಂದಿ ಇದ್ದರು.

ತಿ.ನರಸೀಪುರದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ

ತಿ.ನರಸೀಪುರ, ಅ.12– ಪ್ರತಿಯೊಬ್ಬರಿಗೂ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಮತ್ತು ಉತ್ತೇಜಿಸಲು ವಿಶ್ವ ಮಾನಸಿಕ ಆರೋಗ್ಯ ದಿನ ಆಚರಿಸಲಾಗುತ್ತದೆ ಎಂದು ಜೆಎಂಎಫ್‌ಸಿ ನ್ಯಾಯಾಲಯದ ಸಿವಿಲ್ ನ್ಯಾಯಾಧೀಶ ಜಿ.ಎಚ್.ಹನುಮಂತ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ನಾವೆಲ್ಲರೂ ಮಾನಸಿಕ ಹಾಗೂ ದೈಹಿಕ ಕಾರ್ಯಕ್ಷಮತೆಯನ್ನು ಸ್ಥಿರವಾಗಿಟ್ಟುಕೊಳ್ಳುವ ಮೂಲಕ ಮಾನಸಿಕವಾಗಿ ಗಟ್ಟಿಯಾಗಿರಬಹುದು. ವ್ಯಕ್ತಿಯ ಮಾನಸಿಕ ಆರೋಗ್ಯವು ಆರೋಗ್ಯಕರ ಸಮಾಜ ಮತ್ತು ರಾಷ್ಟ್ರವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಉತ್ತಮ ಮತ್ತು ಸಮತೋಲಿತ ಜೀವನ ಸಾಧಿಸಲು ಮಾನಸಿಕ ಮತ್ತು ದೈಹಿಕ ಆರೋಗ್ಯ ಹೊಂದಿರಬೇಕು. ಸುರಕ್ಷಿತ, ಆರೋಗ್ಯಕರ ಕೆಲಸದ ವಾತಾವರಣವು ಮಾನಸಿಕ ಆರೋಗ್ಯಕ್ಕೆ ರಕ್ಷಣಾತ್ಮಕ ಅಂಶವಾಗಿ ಕಾರ್ಯ ನಿರ್ವಹಿಸುತ್ತದೆ. ಕಳಂಕ, ತಾರತಮ್ಯ, ಕಿರುಕುಳ ಮತ್ತು ಇತರ ಕಳಪೆ ಕೆಲಸದ ಪರಿಸ್ಥಿತಿಗಳಂತಹ ಅಪಾಯಗಳಿಗೆ ಒಡ್ಡಿಕೊಳ್ಳುವುದು ಸೇರಿದಂತೆ ಅನಾರೋಗ್ಯಕರ ಪರಿಸ್ಥಿತಿಗಳು ಗಮನಾರ್ಹ ಅಪಾಯಗಳನ್ನು ಉಂಟು ಮಾಡಬಹುದು ಎಂದರು.



ಕಾರ್ಯಕ್ರಮದಲ್ಲಿ ಸಿವಿಲ್ ನ್ಯಾಯಾಧೀಶ ಹನುಮಂತ ಮಾತನಾಡಿದರು.

ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಜಾಗತಿಕ ಮಟ್ಟದಲ್ಲಿ ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವ ಗುರಿ ಹೊಂದಿದೆ. ಇದು ಮಾನಸಿಕ ಯೋಗಕ್ಷೇಮದ ಬಗ್ಗೆ ಮುಕ್ತ ಸಂಭಾಷಣೆಗಳನ್ನು ಪ್ರೋತ್ಸಾಹಿಸುತ್ತದೆ ಎಂದರು.

ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್ ಎಂ.ಕೆ, ಸಿವಿಲ್ ನ್ಯಾಯಾಧೀಶ ವೆಂಕಟೇಶ್ ಕೆ.ಎನ್, ಪ್ರಭಾರ ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ. ಅಭಿಲಾಷ್, ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಸಹಾಯಕ ಸರ್ಕಾರಿ ಅಭಿಯೋಜಕ ಮಹೇಶ್ ಎಂ., ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದ ಹಿರಿಯ ವೈದ್ಯಾಧಿಕಾರಿಗಳಾದ ಡಾ.ಮಧುಸೂದನ್, ರಾಜಣ್ಣ, ಮಾದಪ್ಪ, ಆಶಾ ಸುಗಮಕಾರರಾದ ಮಂಜುಳಾ ಸೇರಿದಂತೆ ತಾಲೂಕು ಮಟ್ಟದ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

ಅ.28ಕ್ಕೆ ಚುನಾವಣೆ

ನಂಜನಗೂಡು, ಅ.12– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಹಾಗೂ ಯೋಜನಾ ಶಾಖೆಗಳ ನಿರ್ದೇಶಕರ ಚುನಾವಣೆ ಅ.28 ರಂದು ನಡೆಯಲಿದೆ ಎಂದು ಚುನಾವಣಾಧಿಕಾರಿ, ನಿವೃತ್ತ ತಹಸೀಲ್ದಾರ್ ಬಾಲಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅ.9ರಿಂದ 18ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದ್ದು, ವಾಪಸ್ ಪಡೆಯಲು ಅ.21 ಕೊನೆ ದಿನ ಅ.28ರಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಚುನಾವಣೆ ನಡೆಯಲಿದ್ದು, ಅಂದೇ ಮತ ಎಣಿಕೆ ನಡೆಸಿ ಫಲಿತಾಂಶ ಘೋಷಿಸಲಾಗುವುದು ಎಂದು ತಿಳಿಸಿದ್ದಾರೆ.

ಇಂದು ಗೋಷ್ಠಿ, ರಾಜೇಂದ್ರ ಶ್ರೀಗಳ ಜಯಂತಿ

ಕೆಆರ್.ನಗರ, ಅ.12– ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ಹಾಗೂ ಸುತ್ತೂರು ಮಠದ ಶಿವರಾತ್ರಿ ರಾಜೇಂದ್ರ ಶ್ರೀಗಳ 109ನೇ ಜಯಂತಿ ಅ.13ರಂದು ನಡೆಯಲಿದೆ ಎಂದು ಕರ್ಪೂರವಳ್ಳಿ ಜಂಗಮ ಮಠದ ಚಂದ್ರಶೇಖರ ಶಿವಾಚಾರ್ಯ ಶ್ರೀಗಳು, ಅರಕೆರೆ ವಿರಕ್ತ ಮಠದ ಸಿದ್ದೇಶ್ವರ ಶ್ರೀಗಳು, ಎಲೆಮುದ್ದನಹಳ್ಳಿ ಮಠದ ಮಲ್ಲೇಶ ಸ್ವಾಮೀಜಿಗಳು ಮತ್ತು ಅಂಕನಹಳ್ಳಿ ಮಠದ ವಿಜಯಕುಮಾರ ಶ್ರೀಗಳು ತಿಳಿಸಿದ್ದಾರೆ.

ಬೆಳಗ್ಗೆ 10.30ಕ್ಕೆ ಸಾಲಿಗ್ರಾಮ ತಾಲೂಕಿನ ಭೇರ್ಯ ಗ್ರಾಮದ ಚಾಮುಂಡೇಶ್ವರಿ ಕಲ್ಯಾಣ ಮಂಟಪದಲ್ಲಿ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಶಿವಸಿದ್ದೇಶ್ವರ ಸ್ವಾಮಿಗಳು ವಹಿಸಲಿದ್ದಾರೆ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷರು ಆದ ಅರಣ್ಯ ಸಚಿವ ಈಶ್ವರ ಖಂಡ್ರೆ, ಶಾಸಕ ಡಿ.ರವಿಶಂಕರ್, ಎಂಎಲ್‌ಸಿ ಹೆಚ್.ವಿಶ್ವನಾಥ್, ಮಾಜಿ ಸಚಿವ ಸಾ.ರಾ.ಮಹೇಶ್, ಸಿದ್ಧಗಂಗಾ ಭಕ್ತರ ಬಳಗದ ಅಧ್ಯಕ್ಷ ಸಿ.ಪಿ.ರಮೇಶ್‌ಕುಮಾರ್ ಮತ್ತು ಪದಾಧಿಕಾರಿಗಳು ಸೇರಿದಂತೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ 60ಕ್ಕೂ ಹೆಚ್ಚು ಮಠಗಳ ಮಠಾಧೀಶರು ಪಾಲ್ಗೊಳ್ಳುವರು ಎಂದು ಮಾಹಿತಿ ನೀಡಿದ್ದಾರೆ.

ಜೊತೆಗೆ ವೀರಶೈವ ಲಿಂಗಾಯತ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಲಿಂಗದೀಕ್ಷೆ ಸಂಸ್ಕಾರ ನಡೆಯಲಿದ್ದು, ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹರಗುರುಚರ ಮೂರ್ತಿಗಳ ಕೃಪೆಗೆ ಪಾತ್ರರಾಗಬೇಕು ಎಂದು ತಿಳಿಸಿದ್ದಾರೆ.

ಟಿ20 ಸರಣಿ ಕ್ಲೀನ್‌ಸ್ವೀಪ್ ಮಾಡಿದ ಭಾರತ



ಹೈದರಾಬಾದ್, ಅ.12– ಸಂಜು ಸ್ಯಾಮ್ಸನ್ ಅವರ ಶತಕ ಹಾಗೂ ಸೂರ್ಯಕುಮಾರ್ ಯಾದವ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಬಾಂಗ್ಲಾದೇಶದ ವಿರುದ್ಧ ನಡೆದ ಅಂತಿಮ ಟಿ20 ಪಂದ್ಯದಲ್ಲಿ ಭಾರತ 133 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಸರಣಿಯನ್ನು 3–0 ಅಂತರದಲ್ಲಿ ಕ್ಲೀನ್ ಸ್ವೀಪ್ ಮಾಡಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 297 ರನ್ ಗಳಿಸಿ ದಾಖಲೆ ನಿರ್ಮಿಸಿತು. ತಂಡದಪರ ಇನ್ನಿಂಗ್ಸ್ ಆರಂಭಿಸಿದ ಸಂಜು ಸ್ಯಾಮ್ಸನ್ 47 ಎಸೆತಗಳಲ್ಲಿ 11 ಬೌಂಡರಿ, 8 ಸಿಕ್ಸರ್ ಒಳಗೊಂಡ 111 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಸೂರ್ಯಕುಮಾರ್ ಯಾದವ್ 75, ರಿಯಾನ್ ಪರಾಗ್ 34, ಹಾರ್ದಿಕ್ ಪಾಂಡ್ಯ 47 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಬಾಂಗ್ಲಾ ಪರ ತಜೀಂ ಹಸನ್ 3, ಟಸ್ಕಿನ್ ಅಹ್ಮದ್, ಮುಸ್ತಫಿಜುರ್, ಮೊಹಮ್ಮದುಲ್ಲಾ ತಲಾ ಒಂದೊಂದು ವಿಕೆಟ್ ಪಡೆದರು.

ಭಾರತ ನೀಡಿದ 298 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಬಾಂಗ್ಲಾದೇಶ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 164 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ಬಾಂಗ್ಲಾ ಪರ ಲಿಟ್ಟನ್ ದಾಸ್ 42, ತೌಹಿದ್ ಹೃದಯೊಂಯ್ 63 ಬಿಟ್ಟರೆ ಉಳಿದವರಿಂದ ನಿರೀಕ್ಷಿತ ಆಟ ಮೂಡಿ ಬರಲಿಲ್ಲ. ಭಾರತದ ಪರ ರವಿ ಬಿಷ್ಣೋಯ್ 3, ಮಯಾಂಕ್ ಯಾದವ್ 2, ವಾಷಿಂಗ್ಟನ್ ಸುಂದರ್, ನಿತೀಶ್ ಕುಮಾರ್ ರೆಡ್ಡಿ ತಲಾ 1 ವಿಕೆಟ್ ಪಡೆದರು. ಸಂಜು ಸ್ಯಾಮ್ಸನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರೆ, ಹಾರ್ದಿಕ್ ಪಾಂಡ್ಯ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು.

ಮುಡಾ ಹಗರಣ ಮರೆಮಾಚುವ ದುರುದ್ದೇಶದಿಂದ

ತರಾತುರಿಯಲ್ಲಿ ಜಾತಿಗಣತಿ ವರದಿ ಬಿಡುಗಡೆಗೆ ಹುನ್ನಾರ

ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ.ಅಣ್ಣೇಗೌಡ



ಸುದ್ದಿಗೋಷ್ಠಿಯಲ್ಲಿ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ.ಅಣ್ಣೇಗೌಡ ಮಾತನಾಡಿದರು.

ಕೆ.ಆರ್.ನಗರ, ಅ.12– ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟ ಆಡಳಿತ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮುಡಾ ಹಗರಣ ಮರೆಮಾಚುವ ದುರುದ್ದೇಶದಿಂದ ತರಾತುರಿಯಲ್ಲಿ ಜಾತಿಗಣತಿ ವರದಿ ಬಿಡುಗಡೆ ಮಾಡಲು ಹುನ್ನಾರ ನಡೆಸುತ್ತಿರುವುದು ಖಂಡನೀಯ ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ.ಅಣ್ಣೇಗೌಡ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಜಾತಿ ಗಣತಿ ವಿಚಾರದಲ್ಲಿ ಕಾಂಗ್ರೆಸ್ ನಾಯಕರಲ್ಲೇ ಭಿನ್ನಾಭಿಪ್ರಾಯವಿದ್ದು, ಇದನ್ನು ಗಣನೆಗೆ ತೆಗೆದುಕೊಳ್ಳದ ಮುಖ್ಯಮಂತ್ರಿಗಳು ಉದ್ದೇಶ ಪೂರ್ವಕವಾಗಿ ವರದಿ ಬಿಡುಗಡೆ ಮಾಡಲು ಮುಂದಾದರೆ ಭವಿಷ್ಯದಲ್ಲಿ ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಜಾತಿ ಗಣತಿ ವೇಳೆ ಎಲ್ಲರ ಮನೆಗಳಿಗೂ ಭೇಟಿ ನೀಡದೆ 10 ವರ್ಷಗಳ ಹಿಂದೆ ಅವೈಜ್ಞಾನಿಕವಾಗಿ ಮಾಡಿದ್ದ ಗಣತಿಯನ್ನು ಈಗ ಕೆಲವೇ ಜಾತಿಗಳ ಓಲೈಸಿ, ವೈಭವೀಕರಿಸಲು ಹೊರಟಿರುವುದು ಸಮಾಜಕ್ಕೆ ಮಾರಕವಾಗಿದ್ದು, ಈ ಆತುರ ಮತ್ತು ಕೆಟ್ಟ ರಾಜಕೀಯ ಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಶೋಭೆ ತರುವುದಿಲ್ಲ ಎಂದರು.

ಒಕ್ಕಲಿಗ ಸಮಾಜದಲ್ಲಿ ಹತ್ತು ಹಲವು ಉಪ ಜಾತಿಗಳಿದ್ದು ಅವುಗಳನ್ನು ಪರಿಗಣಿಸಿಲ್ಲ. ಜೊತೆಗೆ ರಾಜ್ಯದಲ್ಲಿ 2ನೇ ಸ್ಥಾನದಲ್ಲಿರುವ ನಮ್ಮ ಸಮಾಜದವನ್ನು ಬದಿಗೆ ಸರಿಸುವ ಷಡ್ಯಂತ್ರ ನಡೆಯುತ್ತಿದೆ ಎಂದು ಆರೋಪಿಸಿದ ಅವರು ಆಡಳಿತ ಪಕ್ಷದ ಶಾಸಕರ ವಿರೋಧದ ನಡುವೆಯೂ ವರದಿ ಬಿಡುಗಡೆ ಮಾಡುತ್ತಿರುವುದು ರಾಜಕೀಯ ಅನುಕೂಲಕ್ಕಾಗಿಯೇ ಹೊರತು ಇದರಿಂದ ರಾಜ್ಯದ ಜನರಿಗೆ ಯಾವುದೇ ಉಪಯೋಗವಿಲ್ಲ ಎಂದು ಹೇಳಿದರು.

ಜಾತಿ ಜನಗಣತಿಯನ್ನು ಸಮರ್ಪಕವಾಗಿ ಮಾಡಿ ಸರ್ವರಿಗೂ ಅನುಕೂಲ ಕಲ್ಪಿಸಬೇಕು. ಅದನ್ನು ಬಿಟ್ಟು ಈಗಿರುವ ಸುಳ್ಳು ವರದಿ ಬಿಡುಗಡೆ ಮಾಡಿದರೆ ಒಕ್ಕಲಿಗರ ಸಂಘದಿಂದ ತೀವ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ ಅವರು ಜನರ ಹಿತ ಬಲಿಕೊಟ್ಟು ಇಂತಹ ಕೆಲಸ ಮಾಡುವುದು ಸರಿಯಲ್ಲ ಎಂದು ತಿಳಿಸಿದರು.

> ರಾಜ್ಯದಲ್ಲಿ 2 ಕೋಟಿಯಷ್ಟು ಒಕ್ಕಲಿಗ ಜನಾಂಗವಿದೆ. ಜಾತಿ ಗಣತಿಯಲ್ಲಿ ನಮ್ಮ ಒಕ್ಕಲಿಗ ಜನಾಂಗ 2ನೇ ಸ್ಥಾನದಲ್ಲಿದೆ. ಆದ್ದರಿಂದ ರಾಜ್ಯ ಸರ್ಕಾರ ಮತ್ತೊಮ್ಮೆ ಮನೆ ಮನೆ ಭೇಟಿ ನೀಡಿ ಜಾತಿ ಗಣತಿ ನಡೆಸಿ ವರದಿ ತಯಾರಿಸಲಿ, ಕಾಂತರಾಜು ಆಯೋಗ ನೀಡಿರುವ ಜಾತಿಗಣತಿಗೆ ನಮ್ಮ ಸಮಾಜದ ವಿರೋಧವಿದೆ.
> – ಮಿರ್ಲೆ ಅಣ್ಣೇಗೌಡ, ಅಧ್ಯಕ್ಷರು, ತಾಲೂಕು ಒಕ್ಕಲಿಗರ ಸಂಘ.

ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ನೇತೃತ್ವದ ಆಯೋಗ ರಚನೆಯಾಗಿ 10 ವರ್ಷ ಕಳೆದ ಬಳಿಕ ವರದಿ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಮುಂದಾಗಿದ್ದು, ಇದು ಯಾವ ಕಾರಣಕ್ಕೆ ಎಂದು ಬಹಿರಂಗ ಪಡಿಸಬೇಕೆಂದು ಆಗ್ರಹಿಸಿದ ಅವರು ಈ ಅವಧಿಯಲ್ಲಿ ಸಮಾಜದಲ್ಲಿ ಸಾಕಷ್ಟು ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಬದಲಾವಣೆಗಳಾಗಿದ್ದು ಹಳೆಯ ವರದಿಯ ಅಗತ್ಯ ಈಗಿದಿಯೆ ಎಂದು ಪ್ರಶ್ನಿಸಿದರು.

ಪ್ರಸ್ತುತ ಒಕ್ಕಲಿಗರಿಗೆ ಶೇ.4 ರಷ್ಟು ಒಳಮೀಸಲಾತಿ ಇದ್ದು, ಅದನ್ನು ಶೇ.10ಕ್ಕೆ ಏರಿಸಬೇಕೆಂದು ಹಕ್ಕೊತ್ತಾಯ ಮಂಡಿಸಿದ ಅವರು ನಮ್ಮೆಲ್ಲರ ವಿರೋಧ ಲೆಕ್ಕಿಸದೆ ವರದಿ ಅನುಷ್ಠಾನಕ್ಕೆ ಸರ್ಕಾರ ಮುಂದಾದರೆ ಮಾಜಿ ಸಚಿವ ಸಾ.ರಾ. ಮಹೇಶ್ ನೇತೃತ್ವದಲ್ಲಿ ಉಗ್ರ ಹೋರಾಟ ನಡೆಸುವುದರ ಜೊತೆಗೆ ಕಾನೂನು ಹೋರಾಟ ಮಾಡುವುದಾಗಿ ಮಾಹಿತಿ ನೀಡಿದರು. ಸಂಘದ ಹಿರಿಯ ಉಪಾಧ್ಯಕ್ಷ ಹೆಚ್.ಪಿ.ಪರಶುರಾಮ್, ಪ್ರಧಾನ ಕಾರ್ಯದರ್ಶಿ ಸಿ.ಎಸ್.ರಾಮಲಿಂಗು, ನಿರ್ದೇಶಕ ಬಿ.ಅಣ್ಣಾಜಿಗೌಡ, ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ. ಸೋಮಶೇಖರ್ ಸುದ್ದಿಗೋಷ್ಠಿಯಲ್ಲಿದ್ದರು.

ಜಂಬೂ ಸವಾರಿಯಲ್ಲಿ ಸಾಂಸ್ಕೃತಿಕ ವೈಭವ ಸಾರಿದ ಕಲಾತಂಡಗಳು


ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ನಗಾರಿ ಮೇಳ


ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಂಡಿರುವ ವೀರಭದ್ರ ಕುಣಿತ

ಮೈಸೂರು,ಅ.12(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯ ಕೇಂದ್ರ ಬಿಂದು ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಂಸ್ಕೃತಿಕ ಕಲಾತಂಡಗಳು ಮೇಳೈಸಿದವು. 52 ಪ್ರಕಾರಗಳ ಜಾನಪದ ಕಲೆಗಳ 92 ತಂಡಗಳಲ್ಲಿ 1600ಕ್ಕೂ ಹೆಚ್ಚು ಮಂದಿ ಕಲಾವಿದರು ಪ್ರದರ್ಶನ ನೀಡಿ ಗಮನ ಸೆಳೆದರು.

ಜಂಬೂಸವಾರಿ ಮೆರವಣಿಗೆಯಲ್ಲಿ ಈ ಬಾರಿ ಪಾಲ್ಗೊಳ್ಳಲು ರಾಜ್ಯದ ವಿವಿಧ ಜಿಲ್ಲೆಗಳಿಂದ ವಿವಿಧ ಕಲಾ ಪ್ರಕಾರಗಳ ಜಾನಪದ ಕಲಾತಂಡಗಳು ಪಾಲ್ಗೊಂಡು ಮಳೆ ನಡುವೆಯೂ ಪ್ರದರ್ಶನ ನೀಡಿ ಜಂಬೂಸವಾರಿ ಮೆರವಣಿಗೆಗೆ ಮೆರಗು ತುಂಬಿದವು. ಜಂಬೂಸವಾರಿ ಮೆರವಣಿಗೆಯಲ್ಲಿ ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಸೇರಿದಂತೆ ಎಲ್ಲಾ ಜಿಲ್ಲೆಗಳನ್ನು ಪ್ರತಿನಿಧಿಸುವ ಕಲಾ ತಂಡಗಳು ಪಾಲ್ಗೊಂಡು ಜನರನ್ನು ಆಕರ್ಷಿಸಿದವು.


ಉತ್ತರಖಂಡದ ತಡಿಯಾ ಚಪ್ಲಾ ನೃತ್ಯದ ತಂಡ

ನಂದಿ ಧ್ವಜದೊಂದಿಗೆ ಆರಂಭವಾದ ಜಂಬೂಸವಾರಿಯಲ್ಲಿ ವೀರಭದ್ರ ಕುಣಿತ, ಕೊಂಬು ಕಹಳೆ, ಡೊಳ್ಳು ಕುಣಿತ, ಲಂಬಾಣಿ ನೃತ್ಯ, ಕೊಡವರ ನೃತ್ಯ, ಕೊಡವರ ಸುಗ್ಗಿ ಕುಣಿತ, ಕಣಿ ವಾದನ, ಹಗಲು ವೇಷ, ಗೊರವರ ಕುಣಿತ, ವೀರಮಕ್ಕಳ ಕುಣಿತ, ಲಂಬಾಣಿ ನೃತ್ಯ, ನಂದಿಕೋಲು ಕುಣಿತದ ತಂಡಗಳು ದಾರಿಯುದ್ದಕ್ಕೂ ನೃತ್ಯ ಪ್ರದರ್ಶನ ನೀಡಿ ಜನರ ಮನಸ್ಸನ್ನು ಸೂರೆಗೊಂಡವು.

ಮೆರವಣಿಗೆ ಆರಂಭವಾದ ಕೆಲ ಸಮಯದ ಬಳಿಕ ಮಳೆ ಸುರಿಯಲಾರಂಭಿಸಿತು. ಈ ವೇಳೆ ಮಳೆಯ ನಡುವೆಯೂ ನವಿಲು ನೃತ್ಯ, ತಮಟೆ–ನಗಾರಿ, ಲಂಬಾಣಿ ನೃತ್ಯ, ನಾಸಿಕ್ ಡೋಲು, ಹಗಲು ವೇಷ, ಕರಡೆ ಮಜಲು, ಬೀಸು ಕಂಸಾಳೆ, ಢಕ್ಕೆ ಕುಣಿತ, ಹಾಲಕ್ಕಿ ಸುಗ್ಗಿ ಕುಣಿತ, ಗಾರುಡಿ ಗೊಂಬೆ, ಕೀಲು ಕುದುರೆ, ತಮಟೆ ವಾದನ, ಹುಲಿ ವೇಷ, ಕುಡುಬಿ ನೃತ್ಯ, ಹಕ್ಕಿಪಿಕ್ಕಿ ನೃತ್ಯ, ಝಾಂಜ್ ಪಥಕ್, ಮೂಡಲಪಾಯ ಯಕ್ಷಗಾನ, ದೊಣ್ಣೆವರಸೆ, ಪುರವಂತಿಕೆ, ಪೂಜಾ ಕುಣಿತ, ಕರಗ ನೃತ್ಯ, ಚೆಂಡ ವಾದನ, ಕೋಲಾಟ, ಕೋಳಿ ಕುಣಿತ, ಗೊಂಬೆ ಮೇಳ, ಸತ್ತಿಗೆ ಕುಣಿತ, ಹೆಜ್ಜೆ ಮೇಳ, ಕರಂಗೋಲು, ಕಂಗೀಲು ನೃತ್ಯ, ಮರಗಾಲು, ಜಗ್ಗಲಗಿ ಮೇಳ, ದಟ್ಟಿ ಕುಣಿತ, ಉರುಮೆ, ಜೋಗತಿ ನೃತ್ಯ, ಪಟಾ ಕುಣಿತ, ಚಿಟ್ ಮೇಳ, ಗೇರ್ ನೃತ್ಯ ಸೇರಿದಂತೆ ವಿವಿಧ ಪ್ರಕಾರಗಳ ಜಾನಪದ ಕಲಾ ತಂಡಗಳು ಮಳೆಯಲ್ಲಿ ನೆನೆದು ಕುಣಿತಿದ್ದ ಅಪಾರ ಸಂಖ್ಯೆಯ ಜನರನ್ನು ರಂಜಿಸಿದರು.


ಕೇರಳದ ಜನಪದ ಕಲಾ ತಂಡ ಸಿಂಗಾರಿ ಮೇಳಂ

ಹೊರ ರಾಜ್ಯದ ಕಲಾ ತಂಡಗಳು: ಜಂಬೂಸವಾರಿ ಮೆರವಣಿಗೆಯಲ್ಲಿ ಈ ಬಾರಿಯೂ 5 ರಾಜ್ಯಗಳ ಕಲಾ ಪ್ರಕಾರಗಳ ತಂಡಗಳು ಪಾಲ್ಗೊಂಡು ಗಮನ ಸೆಳೆದವು. ರಾಜಸ್ಥಾನದ ಚಾಕ್ರೀ ನೃತ್ಯ, ಉತ್ತರಖಂಡದ ತಡಿಯಾ ಚಪ್ಲಾ ನೃತ್ಯದ ತಂಡ, ಕೇರಳದ ಜನಪದ ಕಲಾ ತಂಡ ಸಿಂಗಾರಿ ಮೇಳಂ, ತಮಿಳು ನಾಡಿನ ಕರಗಂ ಕಾವಡಿ ಜಾನಪದ ತಂಡ, ಹರ್ಯಾಣದ ಫಗ್–ಗೂಮೆರ್ ಜಾನಪದ ಕಲಾ ತಂಡ ಮೆರವಣಿಗೆಯಲ್ಲಿ ಸಾಗಿ, ತಮ್ಮ ರಾಜ್ಯದ ಜನಪದ ಕಲಾ ಪ್ರಕಾರದ ಪ್ರದರ್ಶನವನ್ನು ಪರಿಚಯಿಸಿದವು.

1600 ಕಲಾವಿದರು: ಜಂಬೂಸವಾರಿಯಲ್ಲಿ ಈ ಬಾರಿ 92 ಕಲಾ ತಂಡಗಳು ಪಾಲ್ಗೊಂಡಿದ್ದವು. ಒಂದೊಂದು ತಂಡದಲ್ಲಿ 18ರಿಂದ 30 ಮಂದಿ ಕಲಾವಿದರು ಪಾಲ್ಗೊಂಡರು. ಒಟ್ಟು 1600ಕ್ಕೂ ಹೆಚ್ಚು ಕಲಾವಿದರೂ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು ಗಮನ ಸೆಳೆಯಿತು.


ಕಂಗಿಲು ನೃತ್ಯ


ಡೊಳ್ಳು ಕುಣಿತ


ಕೀಲು ಕುದುರೆ ಕುಣಿತ


ರಾಜಸ್ಥಾನದ ಚಾಕ್ರೀ ನೃತ್ಯ


ಲಂಬಾಣಿ ನೃತ್ಯ


ಕೊಂಬು ಕಹಳೆ ತಂಡ


ಮರಗಾಲು ಕುಣಿತ

ದಸರಾ ಉತ್ಸವ ಸಂಭ್ರಮದ ಸಮಾಪ್ತಿ

ಮೈಸೂರು, ಅ.12(ಬಿಎಲ್‌ಯು)– ಅಕ್ಟೋಬರ್ 3ರಂದು ಆರಂಭವಾದ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಇಂದು ಸಂಭ್ರಮದ ನಡುವೆ ಸಮಾಪ್ತಿಗೊಂಡಿದೆ.

ಚಾಮುಂಡಿಬೆಟ್ಟದಲ್ಲಿ ನಾಡಿನ ಖ್ಯಾತ ಸಾಹಿತಿ ನಾಡೋಜ ಡಾ. ಹಂಪ ನಾಗರಾಜಯ್ಯ ಈ ಸಾಲಿನ ವಿಶ್ವಪ್ರಸಿದ್ಧ ಮೈಸೂರು ದಸರಾ ಮಹೋತ್ಸವ ಉದ್ಘಾಟಿಸಿದ್ದರು.

ಅಂದಿನಿಂದ ಇವತ್ತಿನ ತನಕ 10 ದಿನಗಳ ಕಾಲ ಮೈಸೂರಿನಲ್ಲಿ ನಾಡಿನ ಸಾಂಸ್ಕೃತಿಕ ಪರಂಪರೆ, ಸಂಸ್ಕೃತಿ, ಕಲಾ ಶ್ರೀಮಂತಿಕೆ ಬಿಂಬಿಸುವ ಹಲವು ಕಾರ್ಯಕ್ರಮ ನಡೆದಿವೆ.

ಕ್ರೀಡಾ ದಸರಾ, ಯುವ ದಸರಾ, ಯೋಗ ದಸರಾ, ರೈತ ದಸರಾ, ದಸರಾ ಚಲನ ಚಿತ್ರೋತ್ಸವ, ದಸರಾ ಕವಿ ಗೋಷ್ಠಿ, ದಸರಾ ಫಲ ಪುಷ್ಪ ಪ್ರದರ್ಶನ, ದಸರಾ ವಸ್ತುಪ್ರದರ್ಶನ, ದಸರಾ ಆಹಾರ ಮೇಳ, ದಸರಾ ಪುಸ್ತಕ ಮೇಳ, ಅರಮನೆಯ ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ 9 ದಿನಗಳ ಕಾಲ ಬೆಳಗ್ಗೆಯಿಂದ ರಾತ್ರಿವರೆಗೆ ನೂರಾರು ಕಾರ್ಯಕ್ರಮಗಳು ಜರುಗಿದೆ.



10 ದಿನಗಳ ಕಾಲ ನಡೆದ ದಸರಾ ಮಹೋತ್ಸವದಲ್ಲಿ ಸ್ಥಳೀಯರಲ್ಲದೆ ದೇಶ–ವಿದೇಶದ ಲಕ್ಷಾಂತರ ಜನರು ಭಾಗಿಯಾಗಿದ್ದಾರೆ. ದಸರಾ ಅಂದರೆ ಮನೋರಂಜನೆ ಮಾತ್ರವಲ್ಲದೆ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಜೀವಂತವಾಗಿಸುವ ವೈಶಿಷ್ಟಪೂರ್ಣ ಮಹೋತ್ಸವವಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮಗಳು ಮಾತ್ರವಲ್ಲದೆ ಮೈಸೂರು ರಾಜಮನೆತನದ ಹಲವು ಸಾಂಪ್ರದಾಯಿಕ ಕಾರ್ಯಕ್ರಮಗಳು ಕೂಡ ನಡೆದಿದೆ. 9 ದಿನಗಳ ಕಾಲ ಮೈಸೂರು ಅರಮನೆಯಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಖಾಸಗಿ ದರ್ಬಾರ್ ನಡೆಸಿದ್ದಾರೆ.

ಆಧುನಿಕತೆಯಲ್ಲಿ ಬಹಳಷ್ಟು ಬದಲಾವಣೆ ಆಗಿರಬಹುದು, ತಂತ್ರಜ್ಞಾನದ ಕ್ರಾಂತಿಯಾಗಿರಬಹುದು, ವಿಜ್ಞಾನ ಕ್ಷೇತ್ರದಲ್ಲಿ ದಾಪುಗಾಲು ಹಾಕಿರಬಹುದು. ಆದರೆ ಮೈಸೂರಿನ ಸಾಂಸ್ಕೃತಿಕ ಪರಂಪರೆ ಬಿಂಬಿಸುವ ದಸರಾ ಮಹೋತ್ಸವದಲ್ಲಿ ಮಾತ್ರ ಯಾವುದೇ ಬದಲಾವಣೆಯಾಗಿಲ್ಲ. ದಸರಾ ಮೂಲಕ ರಾಜರ ಕಾಲದ ಗತ ವೈಭವ, ಧಾರ್ಮಿಕ ಪರಂಪರೆ ಪ್ರತಿ ವರ್ಷ ಅನಾವರಣಗೊಳ್ಳುತ್ತಿದೆ.

ಈ ಬಾರಿ ಕೂಡ ಜಗಮಗಿಸುವ ದಸರಾ ದೀಪಾಲಂಕಾರ ಪ್ರವಾಸಿಗರನ್ನು ಮನಸೂರೆಗೊಳಿಸಿತು. ಮೈಸೂರಿನ 135 ಕಿ.ಮೀ. ರಸ್ತೆ ಹಾಗೂ 84 ವೃತ್ತಗಳಲ್ಲಿ ಸಿಂಗಾರಗೊಂಡಿದ್ದ ವರ್ಣರಂಜಿತ ವಿದ್ಯುತ್ ದೀಪಾಲಂಕಾರ ಅತ್ಯಾಕರ್ಷಕವಾಗಿತ್ತು. ಮೈಸೂರಿನಲ್ಲಿ ಮಾತ್ರವಲ್ಲದೆ ದಸರಾ ಕಾರ್ಯಕ್ರಮ ನಂಜನಗೂಡು, ಶ್ರೀರಂಗಪಟ್ಟಣ, ಕೊಡಗು ಹಾಗೂ ಮಂಡ್ಯದಲ್ಲೂ ಕೂಡ ಅದ್ದೂರಿಯಿಂದ ನಡೆಯಿತು.

ತಾಂತ್ರಿಕ ದೋಷ: ಮಂಡ್ಯ ಬಳಿ ನಿಂತಲ್ಲೇ ನಿಂತ ಮೆಮೊ ರೈಲು

ಹಲವು ರೈಲುಗಳ ಸಂಚಾರದಲ್ಲಿ ವ್ಯತ್ಯಯ

ಮಂಡ್ಯ: ತಾಂತ್ರಿಕ ದೋಷದಿಂದ ಮೆಮೊ ರೈಲಿನ ಸಂಚಾರ ಸ್ಥಗಿತಗೊಂಡ ಪರಿಣಾಮ ಉಳಿದ ರೈಲುಗಳ ಸಂಚಾರದಲ್ಲಿ ವ್ಯತ್ಯಯವಾದ ಘಟನೆ ಮಂಡ್ಯ ನಗರದ ಬಳಿ ಸಂಭವಿಸಿದೆ.

ಶುಕ್ರವಾರ ಸಂಜೆ ಬೆಂಗಳೂರಿನಿಂದ ಮಂಡ್ಯ ಮಾರ್ಗವಾಗಿ ಮೈಸೂರಿಗೆ ಹೊರಟಿದ್ದ ಮೆಮೊ ರೈಲು ತಾಂತ್ರಿಕ ಸಮಸ್ಯೆಯಿಂದಾಗಿ ಮಂಡ್ಯ ನಗರದ ಬಳಿ ಸಂಜೆ 7.15ರ ಸಮಯದಲ್ಲಿ ಸ್ಥಗಿತಗೊಂಡಿದೆ.

ಚಾಲಕ ರೈಲನ್ನು ಮುನ್ನಡೆಸಲು ಎಷ್ಟೇ ಪ್ರಯತ್ನ ಮಾಡಿದರೂ ಸಫಲವಾಗದೇ ಬರೋಬ್ಬರಿ ಒಂದೂವರೆ ತಾಸು ರೈಲು ನಿಂತಲ್ಲೇ ನಿಂತಿದೆ. ಇದರ ಪರಿಣಾಮ ಹಲವು ರೈಲು ಸಂಚಾರದಲ್ಲಿ ವ್ಯತ್ಯಯವಾಗಿದೆ.

ಬೆಂಗಳೂರಿನಿಂದ ಮೈಸೂರು ಕಡೆಗೆ ಹೊರಟಿದ್ದ ಸುಮಾರು ಹಲವು ರೈಲುಗಳು ಸಂಚಾರದಲ್ಲಿ ವ್ಯತ್ಯಯವಾಗಿದೆ.



ಬೆಂಗಳೂರು– ಮೈಸೂರು ರೈಲ್ವೆ ಹಳಿ ಡಬ್ಬಲ್ ಟ್ರ್ಯಾಕ್ ಆಗಿದ್ದ ಪರಿಣಾಮ ಹೆಚ್ಚಿನ ರೈಲುಗಳ ಸಂಚಾರಕ್ಕೆ ವ್ಯತ್ಯಯ ಆಗಲಿಲ್ಲ. ಆದರೂ ಪ್ರತಿಯೊಂದು ರೈಲು ಸುಮಾರು ಎರಡು ಗಂಟೆ ವಿಳಂಬವಾಗಿ ಮೈಸೂರು ತಲುಪಿವೆ.

ಮಂಡ್ಯ ರೈಲ್ವೆ ನಿಲ್ದಾಣದ ಬಳಿಯೇ ಸಮಸ್ಯೆ ಆಗಿದ್ದರಿಂದ ಕೂಡಲೇ ಎಚ್ಚೆತ್ತ ಅಧಿಕಾರಿಗಳು ಕೆಟ್ಟು ನಿಂತ ರೈಲಿನ ಬ್ರೇಕ್ ಅನ್ನು ಕೂಡಲೇ ಸರಿಪಡಿಸಿದ ಪರಿಣಾಮ ಒಂದೂವರೆ ತಾಸು ತಡವಾಗಿ ರೈಲು ಮಂಡ್ಯದಿಂದ ಮೈಸೂರಿಗೆ ಸಂಚರಿಸಿತು. ಮೆಮೊ ರೈಲಿನ ತಾಂತ್ರಿಕ ಸಮಸ್ಯೆಯಿಂದಾಗಿ ನೂರಾರು ಪ್ರಯಾಣಿಕರು ತಡವಾಗಿ ಮೈಸೂರು ತಲುಪಿದರೆ ಇನ್ನುಳಿದ ಎರಡಕ್ಕೂ ಅಧಿಕ ರೈಲುಗಳು ಮಾರ್ಗಮಧ್ಯದಲ್ಲಿ ಕೆಲಹೊತ್ತು ನಿಲ್ಲಿಸಿ ಮೆಮೊ ರೈಲು ಪಾಸಾದ ಬಳಿಕ ಸಂಚಾರ ಆರಂಭಿಸಿದವು. ಮೆಮೊ ರೈಲು ಬ್ರೇಕ್ ಸಮಸ್ಯೆಯಿಂದ ಕೆಲ ಹೊತ್ತು ರೈಲು ನಿಲ್ಲಬೇಕಾಯಿತು. ಇದರಿಂದ ಎರಡು ರೈಲುಗಳ ಸಂಚಾರದ ಸಮಯ ವ್ಯತ್ಯಯವಾಯಿತು. ಉಳಿದಂತೆ ಎಲ್ಲಾ ಸಮಸ್ಯೆಗಳನ್ನು ಸಿಬ್ಬಂದಿ ವರ್ಗ ಬಗೆಹರಿಸಿ ರೈಲು ಸಂಚಾರಕ್ಕೆ ಅನುವು ಮಾಡಿಕೊಟ್ಟರು ಎಂದು ರೈಲ್ವೆ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಎದೆ ಝಲ್ಲೆನಿಸುವ ಸಾಹಸ, ಡ್ರೋನ್‌ಗಳ ಚಿತ್ತಾಕರ್ಷಕ ಚಮತ್ಕಾರ; ನಯನ ಮನೋಹರ ಪಂಜಿನ ಕವಾಯತು

ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ದಸರಾ ಅದ್ಭುತ ಕ್ಲೈಮ್ಯಾಕ್ಸ್



ಮಿಲಿಟರಿ ಪೊಲೀಸ್ ಶ್ವೇತಾಶ್ವ ತಂಡದಿಂದ ಪಿರಮಿಡ್ ನಿರ್ಮಾಣ



ನೆರೆದಿದ್ದವರ ಎದೆ ಝಲ್ ಎನಿಸಿದ ಫೈರ್ ಜಂಪಿಂಗ್

ಮೈಸೂರು, ಅ.12(ಎಸ್‌ಬಿಡಿ)– ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ಭವ್ಯ ಮೆರವಣಿಗೆ ಸಂಪನ್ನಗೊಂಡ ಮರುಗಳಿಗೆ, ಬನ್ನಿಮಂಟಪ ಮೈದಾನದಲ್ಲಿ ಮೈನವಿರೇಳಿಸುವ ಸಾಹಸ ಪ್ರದರ್ಶನ, ಒಂದೂವರೆ ಸಾವಿರ ಡ್ರೋನ್‌ಗಳ ಚಿತ್ತಾರ –ಚಮತ್ಕಾರ, ಅಶ್ವಾರೋಹಿ ದಳದ ವಿಶೇಷ ಜಿಗಿತ, ಚಂಡೆ ಮೇಳದ ಹೊಸತನ, ನಯನ ಮನೋಹರ ಪಂಜಿನ ಕವಾಯತುನೊಂದಿಗೆ ಅದ್ಧೂರಿ ದಸರಾಗೆ ಶನಿವಾರ ರಾತ್ರಿ ವೈಭವೋಪೇತ ತೆರೆಬಿದ್ದಿತು.

ದಸರಾದ ಸಮಾರೋಪವನ್ನು ಕಣ್ತುಂಬಿಕೊಳ್ಳಲು ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಜನ ಕಿಕ್ಕಿರಿದಿದ್ದರು. ಸಂಜೆ 6.15ರಿಂದ ಕೆಲಕಾಲ ತುಂತುರು ಮಳೆ ಸುರಿಯಿತಾದರೂ ನೆರೆದಿದ್ದವರು ಕದಲಿಲ್ಲ. ಮಧ್ಯಾಹ್ನ ಸುರಿದ ಭಾರೀ ಮಳೆಯಿಂದ ರಾಡಿಯಾಗಿದ್ದ ಮೈದಾನವನ್ನು ಎಂ–ಸ್ಯಾಂಡ್ ಹಾಕಿ ಸರಿಪಡಿಸಲಾಯಿತು. ಗಣ್ಯರ ಆಗಮನದೊಂದಿಗೆ ರಾತ್ರಿ 7.40ಕ್ಕೆ ಕಾರ್ಯಕ್ರಮ ಆರಂಭವಾಯಿತು. ರಾಷ್ಟ್ರೀಯ ಗೌರವ ವಂದನೆ ನಂತರ ಅಶ್ವಾರೋಹಿ ದಳದ ಕಮಾಂಡೆಂಟ್ ವಿ.ಶೈಲೇಂದ್ರ ಕವಾಯತು ವರದಿ ಸಲ್ಲಿಸಿ, ನಿಶ್ಶಸ್ತ್ರ ದಳಗಳ ಪರಿವೀಕ್ಷಣೆಗೆ ಆಹ್ವಾನಿಸಿದರು.

ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ತೆರೆದ ಜೀಪ್‌ನಲ್ಲಿ ದಳಗಳ ಪರಿವೀಕ್ಷಣೆ ಆರಂಭಿಸಿದರು. ಸಾಂಪ್ರದಾಯಿಕ ಬೆಂಗಾವಲು ಅಶ್ವಪಡೆಯೊಂದಿಗೆ ಸುಶ್ರಾವ್ಯ ಹಿನ್ನೆಲೆ ಸಂಗೀತದ ನಡುವೆ 18 ನಿಶ್ಶಸ್ತ್ರ ದಳಗಳ ಪರಿವೀಕ್ಷಣೆ ಮಾಡಿ, ಗೌರವ ವಂದನೆ ಸ್ವೀಕರಿಸಿದರು. ನಿಯಮದನ್ವಯ ರಾಜ್ಯಪಾಲರೊಂದಿಗೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಇದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಎಂ.ಸಿ.ಸುಧಾಕರ್, ಶಿವರಾಜ್ ಎಸ್. ತಂಗಡಗಿ, ಕೆ.ವೆಂಕಟೇಶ್, ಲಕ್ಷ್ಮೀ ಹೆಬ್ಬಾಳ್ಕರ್, ಶಾಸಕರಾದ ತನ್ವೀರ್ ಸೇಠ್ ಸೇರಿದಂತೆ ಅನೇಕ ಜನಪ್ರತಿನಿಧಿ ಗಳು ಗಣ್ಯರ ಗ್ಯಾಲರಿಯಲ್ಲಿ ಆಸೀನರಾಗಿದ್ದರು.

ನಿಶ್ಶಸ್ತ್ರ ತುಕಡಿಗಳ ಪರಿವೀಕ್ಷಣೆ ನಂತರ ಅಶ್ವಾರೋಹಿ ದಳದ ಸಂದೇಶ್, ಆಫ್ರಿಕನ್ ಕ್ಯಾಟ್ ಅಶ್ವದಲ್ಲಿ ಶರವೇಗದಲ್ಲಿ ತೆರಳಿ ನಿಶಾನೆ ನೀಡಿದ ಕೂಡಲೇ ಸಾಲಾಗಿದ್ದ ಪೊಲೀಸರು ಶಿಸ್ತುಬದ್ಧವಾಗಿ ಬಲದಿಂದ ಎಡಕ್ಕೆ ಚಾಲಿಸುವಂತೆ ಗಾಳಿಯಲ್ಲಿ ಗುಂಡು ಹಾರಿಸಿದರು. ನಂತರ ಏಳು ಕುಶಾಲುತೋಪುಗಳನ್ನು ಸಿಡಿಸಲಾಯಿತು. ಈ ವೇಳೆ ಪೊಲೀಸ್ ವಾದ್ಯದವರು ಭಾಗಾರ್ಧ ರಾಷ್ಟ್ರಗೀತೆ ನುಡಿಸಿದರು. ಹೀಗೆ ಮೂರು ಸುತ್ತುಗಳಲ್ಲಿ ಒಟ್ಟು 21 ಕುಶಾಲತೋಪುಗಳನ್ನು ಸಿಡಿಸಿ, ರಾಷ್ಟ್ರಗೀತೆ ರನ್ನೂ ಪೂರ್ಣವಾಗಿ ನುಡಿಸಲಾಯಿತು. ಈ ವೇಳೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಿದರು.

ಪಥ ಸಂಚಲನ: ಪೊಲೀಸ್ ವಾದ್ಯಗೋಷ್ಠಿಯ ಹಿನ್ನೆಲೆ ಸಂಗೀತಕ್ಕೆ 8 ಸಶಸ್ತ್ರ ಹಾಗೂ 10 ನಿಶಸ್ತ್ರ ದಳಗಳು ಸೇರಿ ಒಟ್ಟು 18 ತುಕಡಿಗಳು ಶಿಸ್ತುಬದ್ಧ ಪಥ ಸಂಚಲನ ನಡೆಸಿ, ಗಮನ ಸೆಳೆದವು. ಸಶಸ್ತ್ರ ದಳಗಳಾದ ಅಶ್ವಾರೋಹಿ ದಳ, ನಗರ ಸಶಸ್ತ್ರ ಮೀಸಲು ಪಡೆ, ಜಿಲ್ಲಾ ಸಶಸ್ತ್ರ ಮೀಸಲು ಪಡೆ, ರೈಲ್ವೆ ರಕ್ಷಣಾ ಪಡೆ, ಕೆಎಸ್‌ಆರ್‌ಪಿ ತುಕಡಿ, ಗೃಹರಕ್ಷಕ ದಳ, ನಿಶ್ಶಸ್ತ್ರ ದಳಗಳಾದ ಎನ್‌ಸಿಸಿ ಭೂದಳ, ನೌಕಾದಳ, ವಾಯುದಳ, ಪೊಲೀಸ್ ಪಬ್ಲಿಕ್ ಶಾಲೆ ಬಾಲಕಿಯರು ಹಾಗೂ ಬಾಲಕರ ತಂಡ, ನವೋದಯ ಶಾಲೆ ತಂಡ, ಸ್ಕೌಟ್ಸ್ ಬಾಲಕರ ತಂಡ, ಗ್ಲೆಡ್ಸ್ ಬಾಲಕಿಯರ ತಂಡ, ಭಾರತ ಸೇವಾದಳ ಬಾಲಕರು ಹಾಗೂ ಬಾಲಕಿಯರ ತಂಡಗಳು ಪಥ ಸಂಚಲನದ ಮೂಲಕ ಗಣ್ಯರಿಗೆ ವಂದನೆ ಸಲ್ಲಿಸಿದರು. ರಿವ್ಯೂ ಆರ್ಡರ್‌ನಲ್ಲಿ ಶಸ್ತ್ರ ವಂದನೆ ಸಲ್ಲಿಸಿ, ರಾಷ್ಟ್ರಗೀತೆ ಬಳಿಕ ಗಣ್ಯರ ಅನುಮತಿಯೊಂದಿಗೆ ಎಲ್ಲಾ ತುಕಡಿಗಳೂ ಅಭಿಮುಖ ವಾಗಿ ಪಥ ಸಂಚಲನದಿಂದ ನಿರ್ಗಮಿಸಿದವು.



ಡ್ರೋನ್‌ನಲ್ಲಿ ಮೂಡಿಬಂದ ಚಾಮುಂಡೇಶ್ವರಿ ತಾಯಿ

ಡ್ರೋನ್ ಚಮತ್ಕಾರ: ಅನನ್ಯಾ ಭಟ್ ಮತ್ತು ತಂಡ ದವರು ನಾಡಗೀತೆ ಹಾಡಿದ ನಂತರ ಬಾನಂಗಳದಲ್ಲಿ ಸೃಷ್ಟಿಯಾದ ಡ್ರೋನ್ ಚಮತ್ಕಾರ ನೋಡುಗರನ್ನು ನಿಬ್ಬೆರಗಾಗಿಸಿತು. 1500 ಡ್ರೋನ್‌ಗಳ ಬೃಹತ್ ಪ್ರದರ್ಶನದಲ್ಲಿ ಚಾಮುಂಡೇಶ್ವರಿ ದೇವಿ, ರಾಷ್ಟ್ರಧ್ವಜ, ವಿಶ್ವ ಭೂಪಟ, ಯೋಧ, ಕರ್ನಾಟಕ ಭೂಪಟ, ಅಂಬಾರಿ ಹೊತ್ತ ಆನೆ, ಸುವರ್ಣ ಕರ್ನಾಟಕ ಸಂಭ್ರಮ, ಅರಳಿಮರ, ತಿಮಿಂಗಿಲ, ರಾಷ್ಟ್ರೀಯ ಪ್ರಾಣಿ ಹುಲಿ ಸೇರಿದಂತೆ ಹತ್ತಾರು ವಿನ್ಯಾಸಗಳು ಎಲ್ಲರನ್ನೂ ಮಂತ್ರಮುಗ್ಧಗೊಳಿಸಿದವು.

ಮೊದಲ ಬಾರಿ ಚಂಡೆ: ದಸರಾ ಪಂಜಿನ ಕವಾಯತಿ ನಲ್ಲಿ ಇದೇ ಮೊದಲ ಬಾರಿಗೆ ಚಂಡೆ ಮೇಳದ ಸದ್ದು ಮೊಳಗಿತು. ಕೇರಳದ ಕಲಾ ನೇಷನ್ ತಂಡದ ನೂರಾರು ಕಲಾವಿದರು, ಕೊಳಲಿನಲ್ಲಿ ಹೊಮ್ಮಿದ ಏಕದಂತಾಯ..., ಶಿವಂ ಶಿವಂ..., ಚಿನ್ನ ಚಿನ್ನ ಆಸೆ(ಮಲೆಯಾಳಂ ಗೀತೆ) ಗೀತೆಗಳಿಗೆ ಚಂಡೆಯ ನಾದ ಸಮ್ಮಿಳಿತಗೊಳಿಸಿದ್ದು ಅದ್ಭುತವಾಗಿತ್ತು. ಇದೇ ವೇಳೆ ಲೇಸರ್ ಶೋ ಮೂಲಕ ಕರ್ನಾಟಕ ಸುವರ್ಣ ಮಹೋತ್ಸವವನ್ನು ಕಣ್ಮುಂದೆ ಕಟ್ಟಿಕೊಡಲಾಯಿತು. ಮಹಾನಟಿ ಖ್ಯಾತಿಯ ಶ್ವೇತಾ ಭಟ್ ನೇತೃತ್ವದಲ್ಲಿ 300ಕ್ಕೂ ಹೆಚ್ಚು ಕಲಾವಿದರು, ವಿವಿಧ ರಾಜ್ಯಗಳ ವಿಶೇಷ ನೃತ್ಯ ಸಂಯೋಜನೆಯೊಂದಿಗೆ ತಾಯಿ ಚಾಮುಂಡೇಶ್ವರಿಯನ್ನು ಸ್ಮರಿಸಿದರು.

ಶ್ವೇತಾಶ್ವದ ನವೀನ ಸಾಹಸ: ಮಿಲಿಟರಿ ಪೊಲೀಸರ ಶ್ವೇತಾಶ್ವ ತಂಡದವರು ಈ ಬಾರಿ ಹೊಸ ಬಗೆಯ ಸಾಹಸಗಳನ್ನು ಪರಿಚಯಿಸಿದರು. ಮಳೆಯಿಂದ ಮೈದಾನ ತೇವವಾಗಿದ್ದರೂ ಶ್ವೇತ ವರ್ಣದ ರಾಯಲ್ ಎನ್‌ಫೀಲ್ಡ್ ಬೈಕ್‌ಗಳಲ್ಲಿ ತುಂಬಾ ಜಾಗರೂಕತೆಯಿಂದ ಸಾಹಸ ಮೆರೆದು ನೆರೆದಿದ್ದವರ ನಿಬ್ಬೆರಗಾಗಿಸಿದರು. ಸಿಸರ್ ಕ್ರಾಸಿಂಗ್(ಕತ್ತರಿ ಮಾದರಿ), ಪ್ಯಾರಲಲ್ ಕ್ರಾಸಿಂಗ್, ಫೋರ್ತ್(4) ಕ್ರಾಸಿಂಗ್, ಸ್ಪೀಡ್ ಕ್ರಾಸಿಂಗ್, ವಿ(V) ಕ್ರಾಸಿಂಗ್, ಚೆಸ್ಟ್ ಜಂಪ್, ಪೆಟ್ರೋಲ್ ಟ್ಯಾಂಕ್ ವಿತ್ ಕ್ಯಾರಿಯರ್ ಬೈಕ್ ರೈಡ್, ಒನ್ ಲೆಗ್ ರೈಡ್, ರೈಡ್ ವಿತ್ ಲ್ಯಾಡರ್, ಹೀಗೆ ವಿಭಿನ್ನವಾಗಿ ಬೈಕ್ ಚಾಲಿಸುವ ಜೊತೆಗೆ ಗುಂಪಾಗಿ ಲೋಟಸ್, ಎಕ್ಸ್‌ಮಸ್ ಟ್ರೀ, ರಿವರ್ಸ್ ಏರೋಪ್ಲೇನ್, ಸುದರ್ಶನ ಚಕ್ರ ನಿರ್ಮಿಸಿದರು. ವಾಲ್ ಡ್ಯಾಶ್, ಫೈರ್ ಜಂಪ್ ನಂತಹ ಅಪಾಯಕಾರಿ ಸಾಹಸ ಮೆರೆದು, ಪಿರಮಿಡ್ ರಚನೆಯೊಂದಿಗೆ ಸಾಹಸ ಪ್ರದರ್ಶನ ಮುಕ್ತಾಯ ಗೊಳಿಸಿದರು. ನೆರೆದಿದ್ದವರು ಉಸಿರು ಬಿಗಿ ಹಿಡಿದು ಶ್ವೇತಾಶ್ವದ ಸಾಹಸವನ್ನು ಕಣ್ತುಂಬಿಕೊಂಡರು.

ಅಶ್ವಾರೋಹಿಗಳ ನವೀನ ಪ್ರದರ್ಶನ: ಅಶ್ವವೇರಿ ನಾಗಾಲೋಟದಲ್ಲಿ ಬಂದು ಭೂಮಿಯಲ್ಲಿ ನೆಟ್ಟಿದ್ದ ಉರಿಯುವ ಗೂಟವನ್ನು ಈಟಿಯಲ್ಲಿ ಚುಚ್ಚಿ ಮೇಲೆತ್ತುವ ಟೆಂಟ್ ಪೆಗ್ಗಿಂಗ್ ಸಾಹಸವನ್ನು ಎಲ್ಲಾ ಅಶ್ವಾರೋಹಿಗಳೂ ಎರಡು ತಂಡಗಳಲ್ಲಿ ಕರಾರು ವಕ್ಕಾಗಿ ಪ್ರದರ್ಶಿಸಿದರು. ಸೆಕ್ಷನ್ ಫಾರ್ಮೇಷನ್, ಇಂಡಿಯನ್ ಫೈಲ್, ಅಪೋಸಿಟ್ ಕ್ರಾಸಿಂಗ್ ಸೇರಿದಂತೆ ಎಲ್ಲಾ ವಿಧದಲ್ಲೂ ಸೈ ಎನಿಸಿಕೊಂಡರು. ಜೊತೆಗೆ 14 ವರ್ಷಗಳ ಬಳಿಕ ನಡೆದ ಶೋ ಜಂಪಿಂಗ್ ಆಕರ್ಷವಾಗಿತ್ತು. ಎರಡು ಕಂಬಗಳ ನಡುವೆ ಒಂದರ ಮೇಲೊಂದು ಜೋಡಿಸಿದ್ದ ಆರು ಕೋಲುಗಳ ಮೇಲೆ ಅಶ್ವಗಳನ್ನು ಜಿಗಿಸಲಾಯಿತು. ಅಲ್ಲದೆ ಇದೇ ಮೊದಲ ಬಾರಿಗೆ ಮ್ಯೂಸಿಕಲ್ ರೈಡ್ ಮೂಲಕ ಅಶ್ವಾರೋಹಿ ದಳ ಗಮನ ಸೆಳೆಯಿತು. 16 ಅಶ್ವಗಳ ಎರಡು ತಂಡಗಳು ಹಿನ್ನೆಲೆ ಸಂಗೀತಕ್ಕೆ ತಕ್ಕನಾಗಿ ಹೆಜ್ಜೆ ಹಾಕಿ, ಪ್ಯಾರಲಲ್ ಕ್ರಾಸಿಂಗ್, ಸಿಸರ್ ಕ್ರಾಸಿಂಗ್ ಮಾಡಿ, ಚಕಿತಗೊಳಿಸಿದವು.

ಪಂಜಿನ ಬೆಳಗು: ಪೊಲೀಸ್ ತರಬೇತಿ ಶಾಲೆಯಲ್ಲಿ ತರಬೇತಿ ಪಡೆದಿರುವ 300 ಯುವ ಸಿಬ್ಬಂದಿ ಅತ್ಯಾಕರ್ಷಕ ಪಂಜಿನ ಕವಾಯತು ಪ್ರದರ್ಶಿಸಿದರು. ಪೊಲೀಸ್ ಬ್ಯಾಂಡ್‌ನಲ್ಲಿ ಮೊಳಗಿದ ಕನ್ನಡ ಮತ್ತು ಹಿಂದಿ ಗೀತೆಗಳ ಹಿನ್ನೆಲೆ ಸಂಗೀತಕ್ಕೆ ಪಂಜು ಹಿಡಿದು ಕರಾರುವಕ್ಕಾದ ಹೆಜ್ಜೆ ಹಾಕಿ ವಿವಿಧ ಆಕೃತಿಗಳನ್ನು ನಿರ್ಮಿಸಿದರು. 'ಸುಸ್ವಾಗತ', 'ಸುವರ್ಣ ಕರ್ನಾಟಕ–50', 'ಕನ್ನಡವೇ ಸತ್ಯ', 'ಕನ್ನಡವೇ ನಿತ್ಯ', 'MYSURU DASARA-414', `KARNATAKA POLICE-ALWAYS WITH YOU', `JAI HIND', `THANK YOU' ಅಕ್ಷರ ವಿನ್ಯಾಸ ನಿರ್ಮಿಸಿ, ನಿರ್ಗಮಿಸಿದ ಸ್ಥಳದಲ್ಲಿ ಬಾಣ ಬಿರುಸುಗಳು(ಕಡಿಮೆ ಪ್ರಮಾಣ) ಮೇಲೇರುವುದರೊಂದಿಗೆ ಈ ಬಾರಿ ದಸರೆ ಉತ್ಸವ ಸಂಪನ್ನವಾಯಿತು.



ಪೊಲೀಸ್ ತರಬೇತಿ ಪ್ರಶಿಕ್ಷಣಾರ್ಥಿಗಳ ಪಂಜಿನ ಕವಾಯತು



ಪಂಜಿನ ಕವಾಯತು ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಪರಸ್ಪರ ಶುಭಾಶಯ ಕೋರಿಕೊಂಡರು.

ಅರಮನೆ, ಪಂಜಿನ ಕವಾಯತು ಮೈದಾನಕ್ಕೆ ಟಿಕೆಟ್ ಖರೀದಿಸಿದ್ದರೂ ನೂರಾರು ಮಂದಿಯ ದೂಡಿದ ಪೊಲೀಸರು!

ಮೈಸೂರು, ಅ.12(ಎಂಕೆ, ಎಸ್‌ಪಿಎನ್)– ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಅವೈಜ್ಞಾನಿಕ ಹಾಗೂ ಅನಿಯಮಿತ ಪಾಸ್ ವಿತರಣೆ, ಟಿಕೆಟ್ ಮಾರಾಟದಿಂದಾಗಿ ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿ ವೀಕ್ಷಣೆಗೆ ಅರಮನೆ ಆವರಣ ಹಾಗೂ ಆಕರ್ಷಣೀಯ ಪಂಜಿನ ಕವಾಯತು ವೀಕ್ಷಣೆಗೆ ಸಾವಿರಾರು ರೂಪಾಯಿ ಕೊಟ್ಟು ಟಿಕೆಟ್ ಖರೀದಿಸಿದ್ದ ಸಾಕಷ್ಟು ಮಂದಿಗೆ ಪ್ರವೇಶ ದೊರೆಯದೆ ತೀವ್ರ ನಿರಾಸೆಯೊಂದಿಗೆ ವಾಪಸ್ ತೆರಳಿದರು.

ಅರಮನೆ ಆವರಣದಲ್ಲಿ ಜಂಬೂ ಸವಾರಿ ವೀಕ್ಷಣೆಗೆ ಬರೋಬ್ಬರಿ 3,500 ರೂ. ಕೊಟ್ಟು ಟಿಕೆಟ್ ಖರೀದಿಸಿದ್ದ ನೂರಾರು ಜನರು, ಪ್ರವೇಶ ಸಿಗದೆ ವಾಪಸ್ ತೆರಳಿದರು. ಹಾರ್ಡಿಂಜ್ ವೃತ್ತ, ಅಂಬಾವಿಲಾಸ ಗೇಟ್ ಬಳಿ ಮಧ್ಯಾಹ್ನ 1.45ರ ಸುಮಾರಿಗೆ ಗೇಟ್ ಕ್ಲೋಸ್ ಮಾಡಿದ ಪೊಲೀಸರು, ಕೈಯಲ್ಲಿ ಟಿಕೆಟ್ ಹಿಡಿದಿದ್ದವರನ್ನು ತಡೆದರಲ್ಲದೆ ಒಳಗಡೆ ಫುಲ್ ಆಗಿದೆ ಜಾಗ ಇಲ್ಲ ಎಂದು ವಾದಿಸಿದರು. ಇದರಿಂದ ರೊಚ್ಚಿಗೆದ್ದ ಜನ ಕೂಗಾಡಿದರೂ ಪಟ್ಟು ಬಿಡದ ಪೊಲೀಸರು, ಜಾಗ ಖಾಲಿ ಇಲ್ಲ. ಯಾರನ್ನು ಬಿಡಬೇಡಿ ಎಂದಿದ್ದಾರೆಂದು ಬ್ಯಾರಿಕೇಡ್‌ಗಳನ್ನು ಅಡ್ಡಹಾಕಿ ಅರಮನೆಯೊಳಗೆ ಯಾರನ್ನೂ ಬಿಡದೆ ಹೊರ ದೂಡಿದರು.

ಅಷ್ಟರಲ್ಲೇ ಮಳೆ ಶುರುವಾಯಿತು. ಜೋರು ಮಳೆಯಲ್ಲೇ ನೆನೆಯುತ್ತಾ 15–20 ನಿಮಿಷಗಳ ಕಾಲ ನಿಂತು ಕಡೆಗೆ ಬೇರೆ ದಾರಿ ಕಾಣದೆ ತೀವ್ರ ನಿರಾಸೆಯಿಂದ ಪೊಲೀಸರಿಗೆ, ಆಡಳಿತ ವ್ಯವಸ್ಥೆ ಶಪಿಸುತ್ತಾ ವಾಪಸ್ಸಾದರು. ಹಾಗೆಯೇ ಅಂಬಾವಿಲಾಸ ಗೇಟ್‌ನಲ್ಲಿ ಮಾಧ್ಯಮದವರ ಪ್ರವೇಶಕ್ಕೆ ಅವಕಾಶವಿದ್ದರೂ ಜಾಗ ಫುಲ್ ಆಗಿದೆ. ಎಲ್ಲಾ ಮುಗಿದಿದೆ ಹೋಗಿ ಎಂದು ಕೆಲ ಮಾಧ್ಯಮದವರನ್ನು ದೂಡಿದರು.



ಅರಮನೆ ಆವರಣಕ್ಕೆ ಪ್ರವೇಶ ಪಡೆಯುವ ಹಾರ್ಡಿಂಗ್ ವೃತ್ತದ ಗೇಟ್ ಬಳಿ ಪಾಸ್ ಇದ್ದ ನೂರಾರು ಮಂದಿಯನ್ನು ಪೊಲೀಸರು ತಡೆದಿರುವುದು.

ಪಂಜಿನ ಕವಾಯತು ಮೈದಾನದಲ್ಲಿ ಆತಂಕ ಸೃಷ್ಟಿ: ಅರಮನೆ ಆವರಣದಂತೆಯೇ ಪಂಜಿನ ಕವಾಯತು ಮೈದಾನದಲ್ಲಿಯೂ ನೂಕು ನುಗ್ಗಲು, ಕಾಲ್ತುಳಿತ ಉಂಟಾಗಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ವಿಐಪಿ ಮತ್ತು ವಿವಿಐಪಿ(ಗೇಟ್ ನಂ–2) ಬಳಿ ಜಮಾವಣೆಗೊಂಡ ಸಾವಿರಾರು ಮಂದಿ ಏಕಾಏಕಿ ಒಮ್ಮೆಗೆ ಒಳನುಗ್ಗಿದ್ದರಿಂದ ನೂಕು–ನುಗ್ಗಲು ಉಂಟಾಗಿ ಐದಾರು ಮಂದಿ ನೆಲಕ್ಕೆ ಬಿದ್ದರು. ಇದರಿಂದ ಸ್ಥಳದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ವಿಐಪಿ, ವಿವಿಐಪಿ ಗೇಟ್ ಮಾತ್ರವಲ್ಲದೆ ಇತರೆ ಗೇಟ್‌ಗಳ ಬಳಿಯೂ ಜನಸಂದಣಿ ಹೆಚ್ಚಾಗಿತ್ತು. ಟಿಕೆಟ್ ಇದ್ದವರ ಜೊತೆಗೆ ಇಲ್ಲದವರೂ ಪಂಜಿನ ಕವಾಯತು ವೀಕ್ಷಣೆಗೆ ಪ್ರವೇಶ ನೀಡುವಂತೆ ಪಟ್ಟು ಹಿಡಿದಿದ್ದರು. ವಿಐಪಿ ಗೇಟ್ ಬಳಿ, ವಿಐಪಿಗಳ ಕಾರಿನ ನಡುವೆಯೇ ಒಮ್ಮೆಗೆ ನೂರಾರು ಮಂದಿ ಒಳನುಗಿದ್ದರಿಂದ ಪೊಲೀಸರು ತಡೆಯಲಾಗದಷ್ಟು ನೂಕು–ನುಗ್ಗಲು ಹೆಚ್ಚಾಗಿ ಕಾಲ್ತುಳಿತ ಉಂಟಾಯಿತು. ನೆಲಕ್ಕೆ ಬಿದ್ದ ಐದಾರು ಮಂದಿ ಮಹಿಳೆಯರು, ಹತ್ತಾರು ಜನ ಹಿರಿಯರು ಗಾಯಗೊಂಡು ಪರಿತಪಿಸಿದರು.

ಅಧಿಕ ಪಾಸ್ ನೀಡಿದ್ದೆ ಗೊಂದಲ: ಈ ಬಾರಿ ಅರಮನೆ ಆವರಣದಲ್ಲಿ ಜಂಬೂಸವಾರಿ ವೀಕ್ಷಣೆ ಹಾಗೂ ಪಂಜಿನ ಕವಾಯತು ವೀಕ್ಷಣೆಗೆ ಅಗತ್ಯಕ್ಕಿಂತ ಹೆಚ್ಚಿನ ಪಾಸ್‌ಗಳನ್ನು ವಿತರಣೆ ಮಾಡಿರುವುದರಿಂದಲೇ ನೂಕು–ನುಗ್ಗಲು ಜೊತೆಗೆ ಸಾವಿರಾರು ಮಂದಿ ಹಣಕೊಟ್ಟು ಟಿಕೆಟ್ ಖರೀದಿಸಿದರೂ ಪ್ರವೇಶವಿಲ್ಲದೆ ನಿರಾಸೆ ಅನುಭವಿಸುವಂತಾಗಿದೆ ಎಂದು ಅವಕಾಶ ವಂಚಿತರು ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕಿದರು.

ಬೇಕಾಬಿಟ್ಟಿ ಪಾಸ್‌ಗಳನ್ನು ನೀಡಿದ್ದಾರೆ. ಅಗತ್ಯ ಸೀಟ್‌ಗಳಿಗಿಂತಲೂ ಹೆಚ್ಚಿನ ಪಾಸ್‌ಗಳ ವಿತರಣೆಯಾಗಿರುವುದರಿಂದ ತಳ್ಳಾಟ–ನೂಕಾಟದ ಜೊತೆಗೆ ಸಾಕಷ್ಟು ಜನರಿಗೆ ವೀಕ್ಷಣೆ ಮಾಡಲು ಸಾಧ್ಯವಾಗಿಲ್ಲ.

ಕಾಳಸಂತೆಯಲ್ಲಿ ಮಾರಾಟ...!

ವಿಶ್ವವಿಖ್ಯಾತ ಜಂಬೂ ಸವಾರಿ ವೀಕ್ಷಣೆಗೆ ಅರಮನೆ ಆವರಣ ಹಾಗೂ ಆಕರ್ಷಕ ಪಂಜಿನ ಕವಾಯತು ವೀಕ್ಷಣೆಗೆ ತೆರಳುವ ಗೇಟ್‌ಗಳ ಬಳಿ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದ ದೃಶ್ಯಗಳು ಕಂಡು ಬಂದವು. ಅರಮನೆ ಆವರಣಕ್ಕೆ ತೆರಳುವ ಹಾರ್ಡಿಂಜ್ ವೃತ್ತ, ಅಂಬಾವಿಲಾಸ ವೃತ್ತದ ಬಳಿಯಂತೂ ಕೆಲ ವ್ಯಕ್ತಿಗಳು 3,500 ರೂ. ಟಿಕೆಟ್‌ಗಳನ್ನು ಕೈಯಲ್ಲೇ ಹಿಡಿದುಕೊಂಡೇ ರಾಜಾರೋಷವಾಗಿ ಮಾರಾಟ ಮಾಡುತ್ತಿದ್ದರು. ಸ್ಥಳದಲ್ಲೇ ಕರ್ತವ್ಯದಲ್ಲಿದ್ದ ಪೊಲೀಸರು, ತಮ್ಮ ಕಣ್ಣೆದುರೇ ಕಾಳಸಂತೆಯಲ್ಲಿ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದರೂ ತಮಗೂ, ಅಕ್ರಮ ಮಾರಾಟಕ್ಕೂ ಸಂಬಂಧವಿಲ್ಲವೆಂಬಂತೆ ವರ್ತಿಸುತ್ತಿದ್ದರು. ಹಾಗೆಯೇ ಪಂಜಿನ ಕವಾಯತು ಮೈದಾನದ 5, 6 ಮತ್ತು 7ನೇ ಗೇಟ್ ಬಳಿಯೂ ಕೆಲವರು ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದರು. ಈ ರೀತಿ ಕಾಳಸಂತೆಯಲ್ಲಿ ಟಿಕೆಟ್ ಮಾರಾಟ ಮಾಡುವವರಿಗೆ ಟಿಕೆಟ್‌ಗಳನ್ನು ಕೊಟ್ಟವರ್ಯಾರು ಎಂಬುದೇ ಯಕ್ಷ ಪ್ರಶ್ನೆಯಾಗಿದೆ ಎಂದು ಪ್ರವೇಶ ಸಿಗದೆ ನಿರಾಸೆಗೊಳಗಾದವರು ಬೇಸರ ವ್ಯಕ್ತಪಡಿಸುತ್ತಿದ್ದರು.

ಈಗಾದರೆ ಹಣ ಕೊಟ್ಟು ಟಿಕೆಟ್ ಖರೀದಿಸಿದವರಿಗೆ ನ್ಯಾಯವೆಲ್ಲಿ. ಅಧಿಕಾರಿಗಳು, ಸಿಬ್ಬಂದಿಗಳು ಟಿಕೆಟ್ ಇಲ್ಲದಿದ್ದರೂ ತಮ್ಮ ಕುಟುಂಬಸ್ಥರನ್ನು ಸರ್ಕಾರಿ ವಾಹನದಲ್ಲೇ ಕರೆತಂದು ಕೂರಿಸುತ್ತಿದ್ದಾರೆ. ಹಣಕೊಟ್ಟು ಟಿಕೆಟ್ ಖರೀದಿಸಿದವರಿಗೆ ಬೆಲೆ ಇಲ್ಲದಂತಾಗಿದೆ ಎಂದು ಕಿಡಿಕಾರಿದರು.